ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಭಾನುವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

47

ಸಂಪುಟ: 47 | ಸಂಚಿಕೆ: 17 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಮೈಸೂರಲ್ಲಿ ಭಕ್ತಿ-ಭಾವದ ಭಗವಾನ್ ಬುದ್ಧ ಜಯಂತಿ




ಕಲಾಮಂದಿರದಲ್ಲಿ ನಡೆದ ಬುದ್ಧರ ಜಯಂತಿ ಕಾರ್ಯಕ್ರಮದಲ್ಲಿ ಎಡಿಸಿ ಆರ್.ಐಶ್ವರ್ಯ ಬುದ್ಧರ ಪ್ರತಿಮೆಗೆ ಪುಷ್ಪಾರ್ಚನೆ ಮಾಡಿದರು. ಬುದ್ಧರ ಪ್ರತಿಮೆಯನ್ನು ಕಲಾಮಂದಿರಕ್ಕೆ ಕೊಂಡೊಯ್ಯುತ್ತಿರುವುದು. (ಬಲಚಿತ್ರ).

ಮೈಸೂರು,ಮೇ2(ಎಂಟಿವೈ)-ಭಗವಾನ್ ಬುದ್ಧನ ತತ್ವ, ಆದರ್ಶ ಮತ್ತು ಬೋಧನೆ ಒಂದು ದಿನಕ್ಕೆ ಸೀಮಿತವಾಗದೆ, ಜೀವನದ ಪ್ರತಿ ಹಂತದಲ್ಲಿ ಅವುಗಳನ್ನು ಅಳವಡಿಸಿ ಕೊಂಡಾಗ ಶಾಂತಿಯುತ ಜೀವನ ನಡೆಸಬಹುದು ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದಲ್ಲಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ ಹಾಗೂ ಭಗವಾನ್ ಬುದ್ಧ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಿದ್ದ ಭಗವಾನ್ ಬುದ್ಧರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಬುದ್ಧ ಜಗತ್ತಿಗೆ ಶಾಂತಿ ಮತ್ತು ಜ್ಞಾನದ ಬೆಳಕನ್ನು ನೀಡಿದ ಮಹಾಪುರುಷ. ಅವರ ದಮ್ಮದ ಹಾದಿಯಲ್ಲಿ ನಡೆದರೆ ಮಾತ್ರ ಸಮ ಸಮಾಜದ ನಿರ್ಮಾಣ ಸಾಧ್ಯ. ಅಜ್ಞಾನದಿಂದ ಜ್ಞಾನದತ್ತ, ಅಸತೋಮಾ ಸದ್ಗಮಯ, ತಮಸೋಮಾ ಜ್ಯೋತಿರ್ಗಮಯ ಎಂಬ ಮಂತ್ರದಂತೆ, ಮನುಷ್ಯನ ಅಜ್ಞಾನದ ಕತ್ತಲೆಯನ್ನು ಹೋಗಲಾಡಿಸಿ ಸುಜ್ಞಾನದ ಹಾದಿಯಲ್ಲಿ ನಡೆಸುವ ಶಕ್ತಿ ಬುದ್ಧನ ಬೋಧನೆಗಳಿಗಿದೆ. ಬುದ್ಧನ ತತ್ವಗಳಿಂದ ಪ್ರೇರಿತರಾದ ಡಾ.ಬಿ.ಆರ್. ಅಂಬೇಡ್ಕರ್ ಭಾರತಕ್ಕೆ ಉತ್ತಮ ಸಂವಿಧಾನ ನೀಡುವ ಮೂಲಕ ಸಮಾನತೆಯ ಆಶಯವನ್ನು ಎತ್ತಿ ಹಿಡಿದಿದ್ದಾರೆ ಎಂದರು.

ಇಂದಿನ ಅಸ್ತವ್ಯಸ್ತ ಜಗತ್ತಿಗೆ ಬುದ್ಧನ ಶಾಂತಿ ಮಂತ್ರ ಬಹಳ ಪ್ರಸ್ತುತ. ರಾಜಗೃಹದಲ್ಲಿ ಬುದ್ಧನ ಪ್ರವಚನ ಕೇಳಲು ಲಕ್ಷಾಂತರ ಜನ ಸೇರಿದ್ದರೂ, ಅಲ್ಲಿ ನೆಲೆಸಿದ್ದ ನಿಶ್ಯಬ್ದ ಮತ್ತು ಆಧ್ಯಾತ್ಮಿಕ ಶಕ್ತಿಯನ್ನು ಕಂಡು ಅಂದಿನ ರಾಜನೇ ಅಚ್ಚರಿಗೊಂಡಿದ್ದ. ಈ ಮೂಲಕ, ಶಿಸ್ತು ಮತ್ತು ಶಾಂತಿಯ ಮಹತ್ವವನ್ನು ಸಾರಿದರು. 2,500 ವರ್ಷಗಳ ಹಿಂದಿನ ಬುದ್ಧನ ಜ್ಞಾನದ ದೀಪ್ತಿ ಇಂದಿಗೂ ಪ್ರಜ್ವಲಿಸುತ್ತಿದೆ. ಮುಂದಿನ ಪೀಳಿಗೆಗೆ ಈ ಬೋಧನೆಗಳನ್ನು ತಲುಪಿಸುವುದು ನಮ್ಮ ಜವಾಬ್ದಾರಿ ಎಂದರು.

ವಿಶ್ವಮೈತ್ರಿ ಬುದ್ಧ ವಿಹಾರ ಪೂಜ್ಯ ಡಾ. ಕಲ್ಯಾಣಸಿರಿ ಭಂತೇಜಿ ಮಾತನಾಡಿ, ಪ್ರತಿಯೊಬ್ಬರು ತನ್ನ ಕೋಪ, ಅಸೂಯೆ ಮತ್ತು ದ್ವೇಷ ತ್ಯಜಿಸಿದಾಗ ಮಾತ್ರ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯ. ಬುದ್ಧನು ತೋರಿದ ಅಹಿಂಸೆಯ ಮಾರ್ಗವು ಇಂದಿನ ಅಶಾಂತಿಯುತ ಜಗತ್ತಿಗೆ ಅನಿವಾರ್ಯವಾಗಿದೆ. ಮನುಷ್ಯನು ಸುಸಂಸ್ಕೃತರಾಗಿ ಬಾಳಲು ಪಂಚಶೀಲ ತತ್ವಗಳನ್ನು ಅನುಸರಿಸಬೇಕು. ಸುಳ್ಳು ಹೇಳದಿರುವುದು, ಹಿಂಸೆ ಮಾಡದಿರುವುದು ಮತ್ತು ಮದ್ಯಪಾನದಿಂದ ದೂರವಿರುವುದು ವ್ಯಕ್ತಿಯ ಗೌರವ ಹೆಚ್ಚಿಸುತ್ತದೆ. ನಮಗೆ ಆಯುಧ ಹಿಡಿಯುವ ಯುದ್ಧ ಬೇಡ, ಬದಲಿಗೆ ಜನರ ಮನಸ್ಸನ್ನು ಗೆಲ್ಲುವ ಬುದ್ಧ ಬೇಕು. ಕರುಣೆ ಮತ್ತು ಮೈತ್ರಿ ಮೂಲಕ ಮಾತ್ರ ಜಗತ್ತನ್ನು ಬದಲಾಯಿಸಲು ಸಾಧ್ಯ ಎಂದು ತಿಳಿಸಿದರು.

■ ಬುದ್ಧರ ಬೋಧನೆ ಅನುಸರಿಸಿದರೆ ಶಾಂತ ಸಮಾಜ ನಿರ್ಮಾಣ: ಎಡಿಸಿ ಆರ್.ಐಶ್ವರ್ಯ ಅಭಿಮತ

ಪ್ರಜಾ ಪರಿವರ್ತನ ವೇದಿಕೆ ಬಿ.ಗೋಪಾಲ್ ಮಾತನಾಡಿದರು. ಕಾರ್ಯಕ್ರಮದಲ್ಲಿ ಮಹಾಬೋಧಿ ಶಾಖೆ ಪೂಜ್ಯ ಸೋಭಾನ ಭಂತೇಜಿ, ಕನ್ನಡ-ಸಂಸ್ಕೃತಿ ಇಲಾಖೆ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಮಾಜಿ ಮೇಯರ್ ಪುರುಷೋತ್ತಮ್, ಮುಖಂಡರಾದ ಸೋಮಯ್ಯ ಮಲೆಯೂರು, ಭಗವಾನ ಬುದ್ಧ ಜಯಂತ್ಯೋತ್ಸವ ಸಮಿತಿ ಮುಖಂಡರು ಮತ್ತಿತರರು ಉಪಸ್ಥಿತರಿದ್ದರು.

ಹಾರ್ಟ್ ಸಂಸ್ಥೆಯಿಂದ ಹೃದಯ ಸ್ಪಂದನೆ: ಹಿರಿಯರ ಆರೈಕೆ ಕೇಂದ್ರ ಆರಂಭ

ಮೈಸೂರು, ಮೇ 2(ಜಿಎ)-ಹಾರ್ಟ್ ಸಂಸ್ಥೆ ವತಿಯಿಂದ ಹೃದಯ ಸ್ಪಂದನ: ಹಿರಿಯರ ಆರೈಕೆ ಕೇಂದ್ರವನ್ನು ಕೋಟೆ ಹುಂಡಿ ಬಳಿ ತೆರೆದಿದ್ದು, ಇದು ಮೇ 7ರಿಂದ ಕಾರ್ಯಾರಂಭಗೊಳ್ಳಲಿದೆ ಎಂದು ಹಾರ್ಟ್ ಸಂಸ್ಥೆಯ ಸಂಸ್ಥಾಪಕ ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಜವಾಗಿಯೂ ಅಶಕ್ತರು, ನೋಡಿಕೊಳ್ಳುವವರು ಇಲ್ಲದ 20 ಮಂದಿ ಹಿರಿಯ ನಾಗರಿಕರಿಗೆ ಇದರಲ್ಲಿ ಅವಕಾಶ ವಿದೆ. ಊಟ, ವಸತಿ, ಆಪ್ತ ಸಮಾಲೋಚನೆ ಉಚಿತವಾಗಿ ಇರಲಿವೆ ಎಂದರು.

ಸಮಾಜದಲ್ಲಿ ಮಾನವೀಯ ಮೌಲ್ಯ ಬಲವರ್ಧನೆ ಉದ್ದೇಶ ಇದು ಹೊಂದಿದೆ. ಇಲ್ಲಿ ಕುಟುಂಬ ಸದಸ್ಯರು ಹಾಗೂ ಹಿರಿಯ ನಾಗರಿಕರ ನಡುವಿನ ಸಂಬಂಧ ಪುನರ್ ಸ್ಥಾಪನೆಗೆ ಯತ್ನಿಸಲಾಗುವುದು. ಇವರ ನಡುವೆ ಏರ್ಪಟ್ಟ ಕಂದಕ ದೂರ ಮಾಡಿಸುವ ಮೂಲಕ ಪರಸ್ಪರ ಅರಿವು, ಪ್ರೀತಿ ಮೂಡಿಸಲು ಶ್ರಮಿಸಲಾಗುವುದು. ಹೆಚ್ಚಿನ ಮಾಹಿತಿಗೆ ದೂ.93536 30903 ಸಂಪರ್ಕಿಸಬಹುದು ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಸ್ಥೆಯ ಸದಸ್ಯ ಡಾ.ಮಹಾಬಲೇಶ್ವರ ಮಾದಾಪುರ, ಶಿವಲಿಂಗ ಉಪಸ್ಥಿತರಿದ್ದರು.

ಸಿಸಿಟಿವಿ ಫುಟೇಜ್, ವೈಜ್ಞಾನಿಕ ಸಾಕ್ಷ್ಯಾಧಾರಗಳ ಮೂಲಕ

ಮನೆ ಮುಂದೆ ನಿಲ್ಲಿಸಿದ್ದ ಕಾರು ಕಳವು ಮಾಡಿದ್ದ ಇಬ್ಬರ ಬಂಧನ

ಮೈಸೂರು, ಮೇ2(ಜಿಎ)-ಕಳ್ಳತನವಾಗಿದ್ದ ಕಾರನ್ನು ಸಿಸಿಟಿವಿ ಫುಟೇಜ್ ಮತ್ತು ವೈಜ್ಞಾನಿಕ ಸಾಕ್ಷ್ಯಾಧಾರಗಳಿಂದ ಪತ್ತೆ ಹಚ್ಚಿ ಇಬ್ಬರು ಆರೋಪಿಗಳನ್ನು ಬಂಧಿಸಿರುವ ನಂಜನಗೂಡು ಪಟ್ಟಣ ಪೊಲೀಸರು ಕಾರನ್ನು ವಶಪಡಿಸಿಕೊಂಡಿದ್ದಾರೆ. ತಮಿಳುನಾಡಿನ ಈರೋಡ್ ಜಿಲ್ಲೆಯ ಕೊಂಗಳ್ಳಿ ಪಾಳ್ಯದ ನಾರಾಯಣ ಸ್ವಾಮಿ, ಮೈಸೂರಿನ ವಿಜಯನಗರದ ದರ್ಶನ್ ಬಂಧಿತ ಆರೋಪಿಗಳು.

ನಂಜನಗೂಡು ಪಟ್ಟಣ ಪೊಲೀಸ್ ಠಾಣಾ ವ್ಯಾಪ್ತಿಯ ನೀಲಕಂಠ ನಗರದ ನಿವಾಸಿ ಮಂಜು 2024ರ ನ.26ರಂದು ಗೌತಮ ಬಡಾವಣೆಯಲ್ಲಿ ಮನೆ ಮುಂದೆ ನಿಲ್ಲಿಸಿದ್ದ ತಮ್ಮ ಕಾರು (ಕೆಎ-18 ಎಂ-9408) ಕಳ್ಳತನವಾಗಿರುವ ಸಂಬಂಧ ಪ್ರಕರಣ ದಾಖಲಿಸಲಾಗಿತ್ತು.

ನಂಜನಗೂಡು ಠಾಣಾ ಇನ್ಸ್‌ಪೆಕ್ಟರ್ ಮತ್ತು ತನಿಖಾ ತಂಡ ಬಾತ್ಮೀದಾರರ ಮಾಹಿತಿ ಹಾಗೂ ಸಿಸಿಟಿವಿ ಫುಟೇಜ್ ಇತರೆ ವೈಜ್ಞಾನಿಕ ಸಾಕ್ಷ್ಯಗಳ ಆಧಾರದ ಮೇಲೆ ಪ್ರಕರಣ ಭೇದಿಸಿ, ಆರೋಪಿಗಳಿಂದ ಕಳ್ಳತನ ಮಾಡಿದ್ದ ಕಾರನ್ನು ವಶಪಡಿಸಿಕೊಂಡು ಇಬ್ಬರು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಎಎಸ್‌ಪಿ ಸಿ.ಮಲ್ಲಿಕ್, ಎಲ್.ನಾಗೇಶ್ ಹಾಗೂ ನಂಜನಗೂಡು ಉಪವಿಭಾಗದ ಡಿಎಸ್‌ಪಿ ಜಿ.ಎಸ್.ರಘು ಮಾರ್ಗದರ್ಶನದಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ಸಿ.ಎಂ.ರವೀಂದ್ರ ನೇತೃತ್ವದಲ್ಲಿ ಪಿಎಸ್‌ಐ ದಿವ್ಯಾಶ್ರೀ, ಎಎಸ್‌ಐ ಸತೀಶ್, ಎಎಸ್‌ಐ ಮಹೇಶನ್ ಮತ್ತು ಸಿಹೆಚ್‌ಸಿಗಳಾದ ಅಬ್ದುಲ್ ಲತೀಫ್, ಎನ್.ಎ.ಅಶೋಕ, ಭಾಸ್ಕರ್, ಎನ್.ಶ್ರೀನಿವಾಸ್, ಕಾನ್ಸ್‌ಟೇಬಲ್‌ಗಳಾದ ಯು.ಎಸ್. ಶಿವಕುಮಾರ್, ವೈ.ಎಂ.ಮಹೇಶ್, ರಾಹುಲ್ ಕಾಂಬ್ಳೆ, ಚಾಲಕ ಕೃಷ್ಣ ಪಾಲ್ಗೊಂಡಿದ್ದರು. ಪ್ರಕರಣವನ್ನು ಭೇದಿಸಿದ ಅಧಿಕಾರಿ ಮತ್ತು ಸಿಬ್ಬಂದಿ ಕಾರ್ಯಕ್ಕೆ ಪೊಲೀಸ್ ಅಧೀಕ್ಷಕರು ಶ್ಲಾಘಿಸಿದ್ದಾರೆ.

ವೈದ್ಯಕೀಯ ನೆರವು ಮೊತ್ತ ಹೆಚ್ಚಳ ಹಿನ್ನೆಲೆ

ನಿವೃತ್ತ ಪೊಲೀಸ್ ಅಧಿಕಾರಿಗಳ ಆರೋಗ್ಯ ಯೋಜನೆ ಮಾಸಿಕ ವಂತಿಗೆ ಶುಲ್ಕ ಹೆಚ್ಚಳ

ಮೈಸೂರು,ಮೇ 2(ಪಿಎಂ)- ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಆರೋಗ್ಯ ಯೋಜನೆ ಶುಲ್ಕ ಹೆಚ್ಚಳಗೊಂಡಿದ್ದು, ಎಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳು ಸಕಾಲದಲ್ಲಿ ಪಾವತಿಸಿ ವೈದ್ಯಕೀಯ ಸೌಲಭ್ಯಗಳ ಪಡೆಯಬೇಕೆಂದು ನಿವೃತ್ತ ಪೊಲೀಸ್ ಅಧಿಕಾರಿಗಳ ಸಂಘ ಪ್ರಕಟಣೆಯಲ್ಲಿ ತಿಳಿಸಿದೆ.

2025ರ ಅ.30ರಂದು ಬೆಂಗಳೂರಿನ ಡಿಜಿ ಮತ್ತು ಐಜಿಪಿ ಅವರ ಕಚೇರಿಯಲ್ಲಿ ನಡೆದ ಸಭೆಯಲ್ಲಿ ನಿಧಿ ಕೇಂದ್ರ ಸಮಿತಿ ಆರೋಗ್ಯ ಯೋಜನೆ ಟ್ರಸ್ಟ್ ಸಭೆಯಲ್ಲಿ ತೀರ್ಮಾನಿಸಿದಂತೆ ಇಲ್ಲಿಯವರೆಗೆ ನಿವೃತ್ತ ಪೊಲೀಸ್ ಅಧಿಕಾರಿಗಳಿಗೆ ಆರೋಗ್ಯ ಯೋಜನೆಯಡಿಯಲ್ಲಿ ನೀಡುತ್ತಿದ್ದ ವೈದ್ಯಕೀಯ ವೆಚ್ಚವನ್ನು 2025ರ ನವೆಂಬರ್ ತಿಂಗಳಿನಿಂದ ಹೆಚ್ಚುವರಿ ಮಾಡಲಾಗಿದೆ. ಸಾಮಾನ್ಯ ಖಾಯಿಲೆಗಳಿಗೆ ಲಕ್ಷದಿಂದ 1.5 ಲಕ್ಷ ರೂ.ವರೆಗೆ ಹಾಗೂ ಸಂಕೀರ್ಣ ಖಾಯಿಲೆಗಳಿಗೆ 2 ಲಕ್ಷದಿಂದ 3 ಲಕ್ಷ ರೂ.ವರೆಗೆ ಹೆಚ್ಚಳ ಮಾಡಲಾಗಿದೆ.

ಆದ್ದರಿಂದ ಮಾಸಿಕ ವಂತಿಗೆಯು ಕೂಡ ಹೆಚ್ಚಳ ಮಾಡಿದ್ದು, ಡಿವೈಎಸ್‌ಪಿ ಮೇಲ್ಪಟ್ಟ ಅಧಿಕಾರಿಗಳಿಗೆ 3,600ದಿಂದ 4,800 ರೂ., ಪಿಐ ಮತ್ತು ಪಿಎಸ್‌ಐಗಳಿಗೆ 3 ಸಾವಿರದಿಂದ 4,200 ರೂ., ಎಎಸ್‌ಐ ಮತ್ತು ಹೆಚ್‌ಸಿಗಳಿಗೆ 2,400 ರಿಂದ 3 ಸಾವಿರ ರೂ., ಪಿಸಿಗಳಿಗೆ 1,800 ರಿಂದ 2,400 ರೂ., ಲಿಪಿಕ ವರ್ಗದವರಿಗೆ 3 ಸಾವಿರದಿಂದ 3,600 ಹಾಗೂ ಅನುಯಾಯಿಗಳು ಹಾಗೂ ಬ್ಯಾಂಡ್ ಸಿಬ್ಬಂದಿಗೆ 1,800ರಿಂದ 2,200 ರೂ.ವರೆಗೆ ನಿಗದಿಪಡಿಸಲಾಗಿದೆ. ಎಲ್ಲಾ ನಿವೃತ್ತ ಪೊಲೀಸ್ ಅಧಿಕಾರಿಗಳು ಸಕಾಲದಲ್ಲಿ ಪಾವತಿಸಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಬೇಕೆಂದು ಸಂಘದ ಪತ್ರಿಕಾ ಕಾರ್ಯದರ್ಶಿ ಚಾಮಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡಾ.ಅಂಬೇಡ್ಕರ್ ಜಯಂತಿ: 'ಜ್ಞಾನೋತ್ಸವ ಆಯೋಜನೆ'

ಜ್ಞಾನವಂತರಾಗಿ, ಸ್ವಾಭಿಮಾನಿಗಳಾಗಿ ಬದುಕು ಕಟ್ಟಿಕೊಳ್ಳಿ: ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ರಂಗೇಗೌಡ



ಮೈಸೂರಿನ ವಿಜಯನಗರದ 3ನೇ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿನಿಲಯದಲ್ಲಿ ಡಾ.ಅಂಬೇಡ್ಕರ್ ಜಯಂತಿ ಅಂಗವಾಗಿ ಜ್ಞಾನೋತ್ಸವ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮೈಸೂರು,ಮೇ2(ಎಂಟಿವೈ)-ದೇಶಕ್ಕೆ ಡಾ.ಅಂಬೇಡ್ಕರ್ ಮಹಾ ದೊಡ್ಡ ಶಕ್ತಿಯಾಗಿದ್ದು, ನೊಂದವರ ಧ್ವನಿಯಾಗಿ, ಶೋಷಿತರ ಆಶಾಕಿರಣವಾಗಿದ್ದರು ಎಂದು ಸಮಾಜ ಕಲ್ಯಾಣ ಇಲಾಖೆ ಜಂಟಿ ನಿರ್ದೇಶಕ ಬಿ.ರಂಗೇಗೌಡ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ವಿಜಯನಗರದ 3ನೇ ಹಂತದಲ್ಲಿರುವ ಡಾ.ಬಿ.ಆರ್.ಅಂಬೇಡ್ಕರ್ ಸರ್ಕಾರಿ ಮೆಟ್ರಿಕ್ ನಂತರದ ಬಾಲಕರ ವಿದ್ಯಾರ್ಥಿ ನಿಲಯದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ಅವರ ಜಯಂತಿ ಅಂಗವಾಗಿ ಆಯೋಜಿಸಿದ್ದ ಜ್ಞಾನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ನೊಂದವರ ಅಸ್ಮಿತೆಯಾಗಿದ್ದು, ತಮಗಾಗಿ ಏನನ್ನೂ ಮಾಡಿಕೊಳ್ಳದೆ ಜ್ಞಾನವನ್ನು ಮಾತ್ರ ಸಂಪಾದಿಸಿದರು. ಈ ದೇಶಕ್ಕೆ ಸಂವಿಧಾನ ಕೊಟ್ಟರು. ಸುಮಾರು 100 ದೇಶಗಳಲ್ಲಿ ಅಂಬೇಡ್ಕರ್ ಹುಟ್ಟಿದ ದಿನವನ್ನು ಜ್ಞಾನದ ದಿನವಾಗಿ ಆಚರಿಸುತ್ತಾರೆ. ಇಂತಹ ಮಹಾನ್ ನಾಯಕನಿಗೆ ನಾವೆಲ್ಲರೂ ಚಿರಋಣಿಯಾಗಿರಬೇಕು. ಅವರ ತತ್ವ-ಸಿದ್ಧಾಂತಗಳನ್ನು ಅಳವಡಿಸಿಕೊಂಡು ಹೆಚ್ಚು ಹೆಚ್ಚು ಜ್ಞಾನ ಸಂಪಾದನೆ ಮಾಡಿ ಅಭಿವೃದ್ಧಿ ಹೊಂದಬೇಕು ಎಂದರು.

ಅಂಬೇಡ್ಕರ್ ವಿಚಾರವಾದಿ ಡಾ. ಸುರೇಶ್ ಗೌತಮ್ ಮಾತನಾಡಿ, ಅಂಬೇಡ್ಕರ್ ಕನಸಿನ ಸಂವಿಧಾನ ಇಂದು ಅಪಾಯದಲ್ಲಿದ್ದು, ಎಸ್‌ಸಿ, ಎಸ್‌ಟಿ ಎಂಬ ಕಾಂಪೌಂಡ್ ಒಳಗೆ ಅಂಬೇಡ್ಕರ್ ನಿಲ್ಲಿಸಲು ಪಟ್ಟಭದ್ರ ಹಿತಾಶಕ್ತಿಗಳು ಪ್ರಯತ್ನ ನಡೆಸುತ್ತಿವೆ. ಇದರಿಂದ ನಾವೆಲ್ಲ ಜಾಗೃತರಾಗಿ ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸಿ, ಅದರ ಆಶಯಗಳನ್ನು ಉಳಿಸಿಕೊಂಡು ಪ್ರಬುದ್ಧ ಭಾರತ ಕಟ್ಟಬೇಕು ಎಂದರು.

ಅಹಿಂದ ಮುಖಂಡ ಜವರಪ್ಪ ಮಾತನಾಡಿ, ಸಮಾಜದಲ್ಲಿರುವ ಮೌಢ್ಯ ಕಂದಾಚಾರಗಳನ್ನು ಧಿಕ್ಕರಿಸಿ ವೈಜ್ಞಾನಿಕವಾಗಿ ಚಿಂತನೆ ಮಾಡಿ ಸಮಾಜದಲ್ಲಿರುವ ಅಸಮಾನತೆ, ಭ್ರಷ್ಟಾಚಾರದ ವಿರುದ್ಧ ಧ್ವನಿ ಎತ್ತಬೇಕು. ಜೊತೆಗೆ ಪರಿಣಾಮಕಾರಿ ಶಿಕ್ಷಣ ಪಡೆದು ಸ್ವಾಭಿಮಾನಿಗಳಾಗಿ ಬದುಕನ್ನು ಕಟ್ಟಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಸಹಾಯಕ ನಿರ್ದೇಶಕ ಎ.ಎಸ್.ಜನಾರ್ಧನ್, ಅಬಕಾರಿ ಉಪನಿರೀಕ್ಷಕ ಪಿ.ರಾಘವೇಂದ್ರ, ನಿಲಯ ಪಾಲಕ ಪ್ರದೀಪ್, ಮಹೇಶ್ ಕೆ., ಕಾರ್ತಿಕ್, ಚಿಕ್ಕೀರಯ್ಯಾ, ರಾಜೇಶ್ವರಿ, ಚಂದ್ರಮ್ಮ, ಮಹೇಶ್, ಶಿವಮಲ್ಲಯ್ಯ, ಗುರುಪ್ರಸಾದ್, ಮಹಾಂತೇಶ್ ಮಾಟೋಳಿ, ಜಗದೀಶ್, ಮಹೇಶ್, ಚೇತನ್‌ದೊಡ್ಡಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಡಾ.ರಾಜ್‌ಕುಮಾರ್ ಹುಟ್ಟುಹಬ್ಬ

ಮೈಸೂರಿನ ಅರಮನೆ ಮುಂಭಾಗದಲ್ಲಿರುವ ವರನಟ ಡಾ.ರಾಜ್ ಕುಮಾರ್ ಉದ್ಯಾನವನದಲ್ಲಿ ಡಾ.ರಾಜ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಹುಟ್ಟುಹಬ್ಬ ಆಚರಿಸಲಾಯಿತು. ಈ ವೇಳೆ ಅಖಿಲ ಕರ್ನಾಟಕ ಡಾ.ರಾಜ್‌ಕುಮಾರ್ ಅಭಿಮಾನಿ ಸಂಘದ ಅಧ್ಯಕ್ಷ ಎಂ.ರಾಮೇಗೌಡರು, ಆಟೋ ಶಿವು, ಮಂಜು, ರಾಜು, ಕಾಂತಣ್ಣ, ಆಟೋ ರಘು, ಶಿವು ಇತರರು ಉಪಸ್ಥಿತರಿದ್ದರು.



ಮೈಸೂರು ವಿವಿಯಿಂದ ಪಿಹೆಚ್.ಡಿ ಪದವಿ ಪಡೆದ ಜಯಪುರದ ಶ್ರೀಕಂಠ ಅವರನ್ನು ಸಮಾಜ ಸೇವಕ ಎಸ್.ಶ್ರೀಕಾಂತ್ ಅಭಿನಂದಿಸಿದರು. ತಾಪಂ ಮಾಜಿ ಸದಸ್ಯ ಜವರನಾಯಕ, ಉದ್ಯಮಿ ಮುಹಿಂಯುದ್ದೀನ್, ಕೆಂಪರಾಜು, ರಂಗಸ್ವಾಮಿ, ನಾಗರಾಜು, ಮಹದೇವಸ್ವಾಮಿ, ಮಹೇಶ್, ಲೋಕೇಶ್, ರಾಜೇಶ್, ವಕೀಲ ಸಿದ್ದಪ್ಪಾಜಿ ಇದ್ದರು.



ಮೈಸೂರು ತಾಲೂಕಿನ ಹಾರೋಹಳ್ಳಿಯಲ್ಲಿ ದಕ್ಷಿಣ ಬುದ್ಧಗಯ ಟ್ರಸ್ಟ್ ವತಿಯಿಂದ 2570ನೇ ಬುದ್ಧ ಜಯಂತಿ ಆಚರಿಸಲಾಯಿತು. ಬುದ್ಧ ಧಮ್ಮ, ಸಂಘ ವಂದನೆ, ಧ್ಯಾನ, ಪಂಚಶೀಲ ಬೋಧನೆ, ಪ್ರವಚನ ಕಾರ್ಯಕ್ರಮ ನಡೆಯಿತು. ತಾಪಂ ಮಾಜಿ ಸದಸ್ಯ, ಹಾರೋಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಆರ್. ಸುರೇಶ್‌ಕುಮಾರ್, ಹರಿಹರ ಆನಂದಸ್ವಾಮಿ, ಬೆಟ್ಟಯ್ಯ ಕೋಟೆ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ದೀಪಕ್, ಹ.ರಾ.ಕುಮಾರ್, ಶಂಭುಲಿಂಗಸ್ವಾಮಿ, ಮಲ್ಕುಂಡಿ ಮಹದೇವಸ್ವಾಮಿ, ನಟರಾಜು, ಚೂರನಹಳ್ಳಿ ಶಿವಣ್ಣ, ಹಾರೋಹಳ್ಳಿ ಯಜಮಾನ ಚಲುವರಾಜು, ಬುದ್ಧ ಅನುಯಾಯಿಗಳು, ಮುಖಂಡರು ಉಪಸ್ಥಿತರಿದ್ದರು.

ನಿಧನ



ರಾಘವೇಂದ್ರ ಕುಮಾರ್

ಮೈಸೂರು, ಮೇ 2-ಮೈಸೂರಿನ ರಾಜೇಂದ್ರನಗರ(ಕೆಸರೆ) ನಿವಾಸಿ, ದೂರದರ್ಶನದ ಮಾಜಿ ನೌಕರರೂ ಆದ ಬಿ.ರಾಘವೇಂದ್ರ ಕುಮಾರ್ (63) ಶನಿವಾರ ನಿಧನರಾದರು. ಮೃತರು ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು-ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 1 ಗಂಟೆಗೆ ಗಣೇಶನಗರದ ರುದ್ರಭೂಮಿಯಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.




ಜಯಮ್ಮ

ಮೈಸೂರು, ಮೇ 2- ನಂಜನಗೂಡು ಗಣೇಶ ರೈಸ್ ಮಿಲ್‌ನ ಲೇಟ್ ಸಿದ್ದೇಗೌಡರ ಪತ್ನಿ ಜಯಮ್ಮ (84) ಶುಕ್ರವಾರ ನಿಧನರಾದರು. ಮೃತರಿಗೆ ಏಳು ಜನ ಹೆಣ್ಣು ಮಕ್ಕಳು ಮತ್ತು ಇಬ್ಬರು ಗಂಡು ಮಕ್ಕಳಿದ್ದಾರೆ. ಮೃತರ ಅಂತ್ಯಕ್ರಿಯೆ ನಗರದ ಲಿಂಗಪಟ್ಟಣ ಗುಡಿ ಪಕ್ಕದಲ್ಲಿರುವ ಸ್ಮಶಾನದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಾಸಕ ದರ್ಶನ್ ಧ್ರುವನಾರಾಯಣ, ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಸೇರಿದಂತೆ ನಗರದ ಪ್ರಮುಖರು ಮೃತರ ಅಂತಿಮ ದರ್ಶನ ಪಡೆದರು.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

03.5.2026 ಭಾನುವಾರ, ಮಳೆ ನಕ್ಷತ್ರ: ಭರಣಿ 27.04.2026ರಿಂದ 10.05.2026ರವರೆಗೆ
ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ,
ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ವಿಶಾಖ, ರಾಹುಕಾಲ: ಸಂಜೆ 4.30ರಿಂದ 6ರವರೆಗೆ

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ**: ಬೆಳಗ್ಗೆ 6.30ರಿಂದ ದೇಹ-ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಆರೋಗ್ಯ ತಪಾಸಣಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ, ಬೆಳಗ್ಗೆ 9.30ರಿಂದ.

■ **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ** : ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10ರಿಂದ.

■ **ಸುಯೋಗ್ ಆಸ್ಪತ್ರೆ** : ಮೂತ್ರಜನಕಾಂಗದ ಕಲ್ಲುಗಳ ಉಚಿತ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.

■ **ಪರಮಹಂಸ ಶಾರ್ಪ್ ಮೈಂಡ್ಸ್ ಅಕಾಡೆಮಿ** : ಬೇಸಿಗೆ ಶಿಬಿರದ ಸಮಾರೋಪ ಸಮಾರಂಭ, ಉಪಸ್ಥಿತರು : ಶ್ರೀ ನಿತ್ಯಾನಂದಪುರಿ ಸ್ವಾಮೀಜಿ, ನಿವೃತ್ತ ಸಿವಿಲ್ ನ್ಯಾಯಾಧೀಶ ಹೆಭ್ಯಾದ ಮಹದೇವಪ್ಪ, ರಂಗ ನಿರ್ದೇಶಕ ಯೋಗಾನಂದ, ಯೋಗಪ್ರವೀಣ ಶಿವಪ್ರಕಾಶ್ ಗುರೂಜಿ, ಸ್ಥಳ: ಪರಮಹಂಸ ಯೋಗ ಮಹಾವಿದ್ಯಾಲಯ ಇಂಟರ್‌ನ್ಯಾಷನಲ್ ಯೋಗ ಸ್ಕೂಲ್, ರಾಮಕೃಷ್ಣನಗರ, ಬೆಳಗ್ಗೆ 10ಕ್ಕೆ.

■ **ಅನಿಕೇತನ ಸೇವಾ ಟ್ರಸ್ಟ್**: ಕಾಯಕ ಸೇವಾ ಪ್ರಶಸ್ತಿ ಪ್ರದಾನ, ಪ್ರಶಸ್ತಿ ಪುರಸ್ಕೃತರು: ಸೆಸ್ಕ್ ನಿವೃತ್ತ ವ್ಯವಸ್ಥಾಪಕ ನಿರ್ದೇಶಕ ಮುನಿಗೋಪಾಲರಾಜು, ಉತ್ತಮ ಪುಟ ವಿನ್ಯಾಸಕ ರಂಗು ಸಂದೇಶ್, ಅಧ್ಯಕ್ಷತೆ: ಮುಡಾ ಮಾಜಿ ಅಧ್ಯಕ್ಷ ಎಚ್.ವಿ.ರಾಜೀವ್, ಮುಖ್ಯ ಅತಿಥಿಗಳು: ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್, ಪಾಲಿಕೆ ಮಾಜಿ ಸದಸ್ಯ ಬಿ.ಎಲ್.ಭೈರಪ್ಪ, ಪ್ರಾಸ್ತಾವಿಕ ನುಡಿ: ಬಸವ ಬಳಗಗಳ ಒಕ್ಕೂಟದ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಪತ್ರಕರ್ತರಾದ ಸಿ.ಕೆ.ಮಹೇಂದ್ರ, ಕೆ.ದೀಪಕ್, ಧರ್ಮಾಪುರ ನಾರಾಯಣ್, ಬಿ.ಆರ್.ಶಿವಕುಮಾರ್, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಬೆಳಗ್ಗೆ 10.30ಕ್ಕೆ.

■ **ಪ್ರೊ. ಕೆ. ವೆಂಕಟಗಿರಿಗೌಡ ಸಾಂಸ್ಕೃತಿಕ ಮತ್ತು ಶೈಕ್ಷಣಿಕ ಪರಿಷತ್, ಹನ್ಯಾಳು ಪ್ರಕಾಶನ** : ಆಲಕೆರೆ ಜೆ. ರಾಮಲಿಂಗೇಗೌಡ ಅವರು ಇಂಗ್ಲೀಷ್‌ನಿಂದ ಕನ್ನಡಕ್ಕೆ ಅನುವಾದಿಸಿರುವ ನಂಬಲಸಾಧ್ಯವಾದ ಸಾಯಿಬಾಬಾ, ನೇತಾಜಿ, ಡೀಪ್ ವರ್ಕ್, ಸಮುದ್ರದತ್ತ ಸವಾರರು ಕೃತಿಗಳ ಲೋಕಾರ್ಪಣೆ ಸಮಾರಂಭ, ಉಪಸ್ಥಿತರು: ಡಾ. ದಿವ್ಯ ಬಿ.ಎಸ್., ಪ್ರೊ. ಜಿ. ಚಂದ್ರಶೇಖರ್, ಶ್ರೀಮತಿ ರೇಖಾ ಮ್ಯಾಥ್ಯೂ, ಅಧ್ಯಕ್ಷತೆ : ಲೇಖಕ ಪ್ರಸನ್ನಕುಮಾರ್ ಕೆರಗೋಡು, ಸ್ಥಳ: ರೋಟರಿ ವೆಸ್ಟ್ ಸರಸ್ವತಿಪುರಂ, ಬೆಳಗ್ಗೆ 10.30ಕ್ಕೆ.

■ **ಕನ್ನಡ ಪುಸ್ತಕ ಪ್ರಾಧಿಕಾರ, ಜಿಲ್ಲಾ ಜಾಗೃತ ಸಮಿತಿ:** ಮನೆಗೊಂದು ಗ್ರಂಥಾಲಯ ಅನುಷ್ಠಾನ ಸಮಾರಂಭ, ಉದ್ಘಾಟನೆ: ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ, ಅಧ್ಯಕ್ಷತೆ: ಸಂಚಾಲಕ ಎಂ.ಚಂದ್ರಶೇಖರ್, ಮುಖ್ಯ ಅತಿಥಿಗಳು: ಸಾಹಿತಿ ಮ.ಗು.ಸದಾನಂದಯ್ಯ, ಕಲಾವಿದ ಎಲ್. ಶಿವಲಿಂಗಪ್ಪ, ಸ್ಥಳ: ಎಲ್.ಶಿವಲಿಂಗಪ್ಪರವರ ಮೈಸೂರು ಆರ್ಟ್ ಗ್ಯಾಲರಿ, ರಾಮಾನುಜ ರಸ್ತೆ, ಬೆಳಗ್ಗೆ 10.30ಕ್ಕೆ.

■ **ಇಂಚರ ಸಾಂಸ್ಕೃತಿಕ ಪ್ರತಿಷ್ಠಾನ:** ಡಾ.ರಾಜ್ ಜನ್ಮದಿನೋತ್ಸವ, ಡಾ.ರಾಜ್ ಸಾಧನಾ ಪ್ರಶಸ್ತಿ ಪ್ರದಾನ ಸಮಾರಂಭ, ಸಾನ್ನಿಧ್ಯ: ಇಳೈ ಆಳ್ವಾರ್ ಸ್ವಾಮೀಜಿ, ಉದ್ಘಾಟನೆ: ಕೃಷಿ ವಿಜ್ಞಾನಿ ಡಾ. ವಸಂತಕುಮಾರ್ ತಿಮಕಾಪುರ, ಅಧ್ಯಕ್ಷತೆ: ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಉಪಸ್ಥಿತರು: ಡಾ.ನಾಗರಾಜ್ ವಿ.ಭೈರಿ, ಡಾ.ರಘುರಾಂ ವಾಜಪೇಯಿ, ಡಾ.ಸತೀಶ್‌ಚಂದ್ರ, ಡಾ.ನಟರಾಜ್ ಜೋಯ್ಸ್, ನಿವೇದಿತಾ, ರಂಗನಾಥ್ ಮೈಸೂರು, ಸ್ಥಳ: ನಮನ ಕಲಾ ಮಂಟಪ, ಕೃಷ್ಣಮೂರ್ತಿಪುರಂ, ಬೆಳಗ್ಗೆ 10.30ಕ್ಕೆ.

■ **ಸುರಭಿ ಗಾನ ಕಲಾಮಂದಿರ ಚಾರಿಟಬಲ್ ಟ್ರಸ್ಟ್** : ಶ್ರೀ ಸ್ವಾತಿ ತಿರುನಾಳ್ ಮಹಾರಾಜರ ಕೃಷ್ಣಪರ ರಚನೆಗಳ ಅಧ್ಯಯನ ಶಿಬಿರ, ಸ್ಥಳ: ಶ್ರೀಮತಿ ಲೀಲಾ ನಾಗರಾಜ್ ಅವರ ಸ್ವಗೃಹ, 13ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಸಂಜೆ 4 ರಿಂದ.

■ **ಲಗೋರಿ ಅಂಗಳ, ಮೈಸೂರು ಕ್ರಿಯಾ ಸಂಸ್ಥೆ** : ತಿಂಗಳ ಮಾತುಕತೆ, ವಿಷಯ : ಇಕ್ಕಿಗಾಯ್ : ದೀರ್ಘಾಯುಷ್ಯ ಮತ್ತು ಸಂತಸದಾಯಕ ಜೀವನ ಸೂತ್ರಗಳು, ಮಾತು : ಬಿ.ಸಿ. ದೊಡ್ಡೇಗೌಡ, ಕಥೆ : ದಿನೇಶ್ ಅಫಲಯ, ಸ್ಥಳ: ಕ್ರಿಯಾ ಸಭಾಂಗಣ, ಬೋಗಾದಿ, ಸಂಜೆ 4.30ಕ್ಕೆ.

■ **ಶ್ರೀ ರಾಮಕೃಷ್ಣ ಆಶ್ರಮ** : ಸ್ವಾಮಿ ಅಘಹರಾನಂದ ಅವರಿಂದ ಹಿಂದೂ ಧರ್ಮದ ಮೂಲಭೂತ ಸಿದ್ಧಾಂತಗಳು ಕುರಿತು ಪ್ರವಚನ, ಸ್ಥಳ: ಸ್ವಾಮಿ ಶಾಂಭವಾನಂದಜೀ ಸ್ಮಾರಕ ಸಭಾಂಗಣ, ಯಾದವಗಿರಿ, ಸಂಜೆ 6 ರಿಂದ.

■ **ಶ್ರೀ ಕೃಷ್ಣ ಗಾನಸಭಾ** : ಬೆಳಗ್ಗೆ 6 ರಿಂದ ಚೈತನ್ಯಯೋಗ ಕೇಂದ್ರದಿಂದ ಯೋಗಾಸನ, ಸಂಜೆ 6.30 ರಿಂದ ದಿವಂಗತ ಶ್ರೀಮತಿ ಜಾನಕಿ ಆಳ್ವಾರ್ ಸ್ಮರಣಾರ್ಥ ನೃತ್ಯ ಕಾರ್ಯಕ್ರಮ, ನೃತ್ಯಗಾರ್ತಿ ಡಾ.ವಸುಂಧರಾ ದೊರೆಸ್ವಾಮಿ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ಪ್ರದಾನ, ಮುಖ್ಯ ಅತಿಥಿಗಳು : ಶಾಸಕ ಶ್ರೀವತ್ಸ, ಅಧ್ಯಕ್ಷತೆ: ಶ್ರೀ ಕೃಷ್ಣ ಗಾನಸಭಾ ಅಧ್ಯಕ್ಷ ಬಿ.ಎಸ್. ಶ್ರೀಧರರಾಜ್ ಅರಸ್, ಗೌರವ ಅತಿಥಿಗಳು : ಉದ್ಯಮಿ ಡಾ. ಜಗನ್ನಾಥ್ ಶೆಣೈ, ಸ್ಥಳ: ಆಳ್ವಾರ್ ಕಲಾ ಭವನ, ಶ್ರೀ ಕೃಷ್ಣ ದೇವಸ್ಥಾನದ ಆವರಣ, ಗೋಕುಲಂ.

■ **ನಿತ್ಯ ನಿರಂತರ ಟ್ರಸ್ಟ್** : ನಾದಬ್ರಹ್ಮ ಪುಟ್ಟರಾಜ ಗವಾಯಿಗಳ ಜೀವನ ಚರಿತ್ರೆಯ ನಾಟಕ, ಸ್ಥಳ: ಟ್ರಸ್ಟ್ ಆವರಣ, ಸಂಜೆ 6.30ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ-ಡಾ.ಪದ್ಮಿನಿ ನಾಗರಾಜ್, 6.35 ಮತ್ತು ಸಂಜೆ 6.10 ಸಿನೆಮಾ ಯಾನ-ಜನ ಮೆಚ್ಚಿದ ಕನ್ನಡ ಚಿತ್ರಗಳ ನೆನಪಿನ ಮಾಲೆ, ಪ್ರಸ್ತುತಿ : ಶ್ರೀನಿವಾಸ್ ಪ್ರಸಾದ್, 6.40 ಪದಸಂಸ್ಕೃತಿ-ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ ಕೃಪಾಕರ ಸೇನಾನಿ ಅವರ ಕೆನ್ನಾಯಿಯ ಜಾಡಿನಲಿ ಕೃತಿಯ ಬಾನುಲಿ ಓದು. ಪ್ರಸ್ತುತಿ: ಜಿ ಶಾಂತಕುಮಾರ್, 8.30 ಮತ್ತು ಸಂಜೆ 5.30 ಚೂಟಿ ಚೂಟಿ ಚುಟುಕ್ ಗುಳುಂ ಗುಟುಕ್-ಶಿಶುಗೀತೆಗಳ ಕಾರ್ಯಕ್ರಮ, 9.05 ವಿಶ್ವ ಪತ್ರಿಕಾ ಸ್ವಾತಂತ್ರ್ಯ ದಿನ, 9.30 ಚಿತ್ರಗೀತೆಗಳು, 9.40 ನಮ್ಮ ಆರೋಗ್ಯ-ಅಂಕೋಲೈಸಿಂಗ್ ಸ್ಪಾಂಡಿಲೈಟಿಸ್ ಕುರಿತು ರುಮ್ಟೊಟಾಲಜಿ ತಜ್ಞರಾದ ಡಾ ಶಿವಪ್ರಸಾದ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ಬೇದ್ರೆ ಮಂಜುನಾಥ್, 10.00 ಕೇಳಿಗಿಳಿಗಳೇ-ಕಥೆ ಹೇಳ್ತಿಯೋ ಹಾಡು ಹೇಳ್ತಿಯೋ ನೇರ ಫೋನ್-ಇನ್ ಕಾರ್ಯಕ್ರಮ, 10.30 ಮಕ್ಕಳ ಮಂಟಪ- ಚೈತನ್ಯ ಚಿಲುಮೆ ಮಾಲಿಕೆಯಲ್ಲಿ ಬಹುಮುಖ ಪ್ರತಿಭೆ ಪ್ರಣವ್.ಪಿ ಹಾಗೂ ಅವರ ತಂದೆ ಎಸ್.ಪ್ರಸಾದ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ-ದಿಗ್ವಿಜಯ್.ಬಿ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.05 ವನಿತಾ ವಿಹಾರ -ಶಿಕ್ಷಣ ಸಂಶೋಧನೆ ಮತ್ತು ಸಮಾಜ ಸೇವೆಯ ಸಂಗಮ ಡಾ ಉಮಾ.ಕೆ ರಾವ್ ಅವರೊಂದಿಗೆ ಸಂದರ್ಶನ. ಇವರೊಂದಿಗೆ : ಆಶಾ, 12.35 ಭಕ್ತಿಗೀತೆಗಳು : ರೇಖಾ ವೆಂಕಟೇಶ್, 12.45 ಜನಪದ ಸಂಗೀತ -ಬನ್ನೂರು ಹೋಬಳಿ ಮಾರಗೌಡನ ಹಳ್ಳಿ ಭಾಗ್ಯಮ್ಮ ಮತ್ತು ಸಂಗಡಿಗರಿಂದ ಗದ್ದೆಮಾಸ್ತಮ್ಮನ ಹಾಡು, 1.00 ಪ್ರಗತಿ ಪಥ-ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ PM BLUE REVOLUTION ಕುರಿತು ಮಾಹಿತಿ, 1.20 ಭಾವಗೀತೆಗಳು-ಎಂ.ವಿ.ಪ್ರಭಾಮಣಿ ಮಂಜುನಾಥ್, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 2.40 ನಕ್ಷತ್ರಲೋಕ-ಸಿನಿ ಸೆಲೆಬ್ರಿಟಿಗಳೊಂದಿಗೆ ಮಾತುಕತೆ. ಭಾಗವಹಿಸಲಿರುವ ಅತಿಥಿ-ಕನ್ನಡ ಚಲನಚಿತ್ರ ನಿರ್ದೇಶಕ ಹಾಗೂ ಬರಹಗಾರ-ಪ್ರಕಾಶ್‌ರಾಜ್ ಮೇಹು, ಪ್ರಸ್ತುತಿ-ಶ್ರೀಮಾನ್.ಎಸ್, 3.40 ಸಿರಿಗನ್ನಡಂ ಗೆಲ್ಗೆ, ಪ್ರಸ್ತುತಿ: ಜಿ.ಕೆ.ರವೀಂದ್ರಕುಮಾರ್, 3.45 ಯಕ್ಷಗಾನ -ತಾಳಮದ್ದಲೆ.ಪ್ರಸಂಗ-ಭಕ್ತ ಚಂದ್ರಹಾಸ, ಪ್ರಸ್ತುತಿ-ಶ್ರೀ ವಿನಾಯಕ ಯಕ್ಷಗಾನ ಮಂಡಲಿ ತಡಂಬೈಲ್, ಸುರತ್ಕಲ್, 4.45 ಚಿತ್ರಗೀತೆಗಳು, 6.50 ಕೃಷಿರಂಗ: ಹಟ್ಟಿಹರಟೆ-ವಾರದ ಗ್ರಾಮೀಣ ಚರ್ಚೆ, ಪ್ರಸ್ತುತಿ: ಎನ್.ಕೇಶವಮೂರ್ತಿ, ಆರ್.ಲೋಕೇಶ್ವರಿ, ಡಾ.ಮೈಸೂರು ಉಮೇಶ್, ಕೃಷಿ ಲೋಕ, ಕೃಷಿ ದರ್ಪಣ-ವಾರದ ಕೃಷಿರಂಗ/ಕಿಸಾನ್ ವಾಣಿ ಕಾರ್ಯಕ್ರಮಗಳ ಮುನ್ನೋಟ, ಪ್ರಸ್ತುತಿ: ಆರ್. ಲೋಕೇಶ್ವರಿ, 7.45 ಕನ್ನಡದಲ್ಲಿ ಭಾಷಣ, 8.00 ಫಸ್ಟ್ ಫಿಲ್ಮ್, ಪ್ರಸ್ತುತಿ-ಎಸ್.ಶ್ರೀಮಾನ್, 8.30 ಹಿಂದಿ ಚಿತ್ರಗೀತೆಗಳು, 9.15 ರಂಗಗೀತೆಗಳು-ಸುಭದ್ರಾ ಕಲ್ಯಾಣ ನಾಟಕದ ಹಾಡುಗಳು, 9.30 ಸವಿನೆನಪು, 10.00 ರವಿವಾಸರೀಯ ಅಖಿಲ ಭಾರತೀಯ ಸಂಗೀತ ಸಭಾ-ನೀರಜ್ ಮಿಶ್ರಾ-ಸಿತಾರ್ ವಾದನ



ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 3 ಭಾನುವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 47 | ಸಂಚಿಕೆ: 17 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ರಾಜಕಾರಣಿಗಳ ಓಲೈಕೆ ಬಿಡಿ; ಅಭಿವೃದ್ಧಿ ಕಡೆ ಗಮನ ಕೊಡಿ

■ ವಿವಿಧ ಇಲಾಖಾ ಕಾರ್ಯದರ್ಶಿ, ಪ್ರಧಾನ ಕಾರ್ಯದರ್ಶಿಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಾಕೀತು
■ ಮಂತ್ರಿಗಳ ಮೆಚ್ಚಿಸಲು ಸತ್ಯ ಹೇಳದಿರಬೇಡಿ ■ ಮಧ್ಯವರ್ತಿಗಳ ದೂರವಿಡಿ; ಕಾನೂನಿನಡಿ ಕೆಲಸ ಮಾಡಿ


ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ವಿವಿಧ ಇಲಾಖಾ ಮುಖ್ಯಸ್ಥರೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ತುರ್ತು ಸಭೆ ನಡೆಸಿದರು.

ಬೆಂಗಳೂರು, ಮೇ 2(ಕೆಎಂಶಿ)– ಅಧಿಕಾರಿಗಳು ರಾಜಕಾರಣಿಗಳ ಓಲೈಕೆ ಬಿಟ್ಟು ಅಭಿವೃದ್ಧಿ ಕಡೆ ಗಮನ ಹರಿಸಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲಾಖಾ ಪ್ರಧಾನಕಾರ್ಯದರ್ಶಿ ಮತ್ತು ಕಾರ್ಯದರ್ಶಿಗಳಿಗೆ ಇಂದಿಲ್ಲಿ ತಾಕೀತು ಮಾಡಿದ್ದಾರೆ.

ಓಲೈಕೆ ರಾಜಕಾರಣದಿಂದ ಆಡಳಿತ ಸಂಪೂರ್ಣವಾಗಿ ಕುಸಿಯುವುದಲ್ಲದೆ, ಸರ್ವಾಧಿಕಾರಿ ಧೋರಣೆಗೆ ದಾರಿ ಮಾಡಿಕೊಡುತ್ತದೆ. ಇದಕ್ಕೆ ಅವಕಾಶ ಮಾಡಿಕೊಡಬೇಡಿ ಎಂದಿದ್ದಾರೆ. ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಉಪಮುಖ್ಯಮಂತ್ರಿ ಸೇರಿದಂತೆ ಸಚಿವರನ್ನು ದೂರವಿಟ್ಟು, ಇಲಾಖಾ ಮುಖ್ಯಸ್ಥರೊಂದಿಗೆ ತುರ್ತು ಸಭೆ ನಡೆಸಿದ ಮುಖ್ಯಮಂತ್ರಿ, ಮಧ್ಯವರ್ತಿಗಳನ್ನು ದೂರವಿಟ್ಟು ಕಾನೂನು ಚೌಕಟ್ಟಿನಲ್ಲಿ ಕಾರ್ಯ ನಿರ್ವಹಿಸಿ ಎಂದು ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಚಿವರಿಗೆ ಕಾನೂನು ವ್ಯಾಪ್ತಿಯೊಳಗೆ ಸಲಹೆಗಳನ್ನು ನೀಡಿ, ಸರ್ಕಾರಕ್ಕೆ ಒಳ್ಳೆಯ ಹೆಸರು ತರುವುದು ಕಾರ್ಯದರ್ಶಿಗಳ ಕರ್ತವ್ಯದ ಮೇಲೆ ಅವಲಂಬಿತವಾಗಿದೆ. ಆದರೆ, ಕೆಲವರು ▶ 10ನೇ ಪುಟಕ್ಕೆ

ಬಜೆಟ್ ಘೋಷಣೆ ಜಾರಿಯಾಗಿಲ್ಲ

“ಬಜೆಟ್ ಘೋಷಣೆಗಳನ್ನು ಜಾರಿಗೊಳಿಸುವ ಕಾರ್ಯ ಅಧಿಕಾರಿಗಳದ್ದು. ಕಳೆದ ವರ್ಷದ ಬಜೆಟ್‌ನ 15 ಘೋಷಣೆಗಳು ಇನ್ನೂ ಜಾರಿ ಆಗಿಲ್ಲ. ಇದಕ್ಕೆ ಯಾರು ಹೊಣೆ, ಆಯವ್ಯಯದಲ್ಲಿ 218 ಹೊಸ ಘೋಷಣೆಗಳು ಸೇರಿ ಒಟ್ಟಾರೆ 565 ಘೋಷಣೆಗಳನ್ನು ಮಾಡಿದ್ದೇವೆ. ಎಲ್ಲಾ ಘೋಷಣೆಗಳನ್ನು ಅದೇ ಆರ್ಥಿಕ ವರ್ಷದಲ್ಲಿ ಜಾರಿ ಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ, ಬಜೆಟ್ ಘೋಷಣೆಗಳು ಯಾವುದೇ ಕಾರಣಕ್ಕೂ ಅನುಷ್ಠಾನಗೊಳ್ಳದೆ ಇರಬಾರದು, ಅನುಷ್ಠಾನದಲ್ಲಿನ ಪ್ರಾಯೋಗಿಕ ತೊಡಕುಗಳನ್ನು ನೇರವಾಗಿ ನನ್ನ ಅಥವಾ ಮುಖ್ಯ ಕಾರ್ಯದರ್ಶಿ ಗಮನಕ್ಕೆ ತರಬೇಕು. ಈ ತಿಂಗಳಾಂತ್ಯದೊಳಗೆ ಎಲ್ಲಾ ಸರ್ಕಾರಿ ಆದೇಶ ಜಾರಿಗೊಳಿಸಿ, ಅನುಷ್ಠಾನ ಕಾರ್ಯ ಆರಂಭಿಸಬೇಕು. ತಪ್ಪಿದರೆ, ಆಯಾ ಕಾರ್ಯದರ್ಶಿಗಳನ್ನೇ ಜವಾಬ್ದಾರರನ್ನಾಗಿ ಮಾಡಲಾಗುವುದು.

–ಸಿದ್ದರಾಮಯ್ಯ, ಮುಖ್ಯಮಂತ್ರಿ

ಜನಸ್ಪಂದನಾ ಸಭೆಯ 15334ರಲ್ಲಿ 15295 ಅರ್ಜಿ ವಿಲೇವಾರಿ

ರಾಜ್ಯಮಟ್ಟದ ಎರಡು ಜನಸ್ಪಂದನ ಸಭೆಯಲ್ಲಿ ಸ್ವೀಕರಿಸಿದ್ದ 15,334 ಅರ್ಜಿಗಳ ಪೈಕಿ 15,295 ವಿಲೇವಾರಿ ಮಾಡಲಾಗಿದೆ. ಬಾಕಿಯಿರುವ 45 ಅರ್ಜಿಗಳನ್ನು ವಿಲೇವಾರಿ ಮಾಡಿ.

ಸಾರ್ವಜನಿಕ ಕುಂದುಕೊರತೆಯ 3,27,052 ಅರ್ಜಿಗಳ ಪೈಕಿ 3,17,576 ವಿಲೇವಾರಿ ಮಾಡಲಾಗಿದೆ. 1,828 ಅರ್ಜಿಗಳ ವಿಲೇವಾರಿಗೆ ಕಾಲಾವಧಿ ಮುಗಿದಿದೆ. ಸಕಾಲದಲ್ಲಿ ವಿಲೇವಾರಿ ಮಾಡದಿದ್ದರೆ ಜನರಿಗೆ ಸರ್ಕಾರದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಇದಕ್ಕೆ ಅವಕಾಶ ನೀಡಬಾರದು, ಸಕಾಲದಲ್ಲಿ ವಿಲೇವಾರಿ ಮಾಡಬೇಕು.

ಹುದ್ದೆಗಳ ಭರ್ತಿಗೆ ತಕ್ಷಣ ಕ್ರಮ ಕೈಗೊಳ್ಳಬೇಕು. ಆರ್ಥಿಕ ಇಲಾಖೆಯಿಂದ 24,300 ಹುದ್ದೆಗಳ ಭರ್ತಿಗೆ ಮಂಜೂರಾತಿ ನೀಡಲಾಗಿದೆ. ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ವೃಂದ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗದೇ 32,132 ಹುದ್ದೆ ಬಾಕಿ ಇವೆ. ಇದನ್ನು ಆದಷ್ಟು ಬೇಗ ಪೂರ್ಣಗೊಳಿಸಬೇಕು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಗುತ್ತಿಗೆದಾರರಿಗೆ 2 ಕೋಟಿ ರೂ.ವರೆಗೆ ಮೀಸಲಾತಿ ಕಲ್ಪಿಸಲಾಗಿದೆ. ವಿವಿಧ ಕಾಮಗಾರಿ ▶ 10ನೇ ಪುಟಕ್ಕೆ

ವಿನಯ್ ಕುಲಕರ್ಣಿ ಶಾಸಕ ಸ್ಥಾನ ಅನರ್ಹ

ವಿಧಾನಸಭೆ ಕಾರ್ಯದರ್ಶಿ ಆದೇಶ


ವಿನಯ್ ಕುಲಕರ್ಣಿ

ಬೆಂಗಳೂರು: ದೀರ್ಘಕಾಲದ ಕಾನೂನು ಹೋರಾಟ ಮತ್ತು ರಾಜಕೀಯ ಜಿದ್ದಾಜಿದ್ದಿನ ನಂತರ, ಧಾರವಾಡ ಗ್ರಾಮೀಣ ಕ್ಷೇತ್ರದ ಶಾಸಕ ವಿನಯ್ ಕುಲಕರ್ಣಿ ಅವರ ಶಾಸಕತ್ವದಿಂದ ಅನರ್ಹಗೊಳಿಸಿ ಶನಿವಾರ ವಿಧಾನಸಭೆ ಕಾರ್ಯದರ್ಶಿ ಮಹತ್ವದ ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಪಂಚಾಯತ್ ಸದಸ್ಯ ಯೋಗೀಶ್‌ಗೌಡ ಕೊಲೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ ಅವರಿಗೆ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದ ನಂತರದ ಕೆಲವೇ ▶ 10ನೇ ಪುಟಕ್ಕೆ

ಶೃಂಗೇರಿ ಕ್ಷೇತ್ರ ಮರು ಮತ ಎಣಿಕೆಯಲ್ಲೂ ರಾಜೇಗೌಡರಿಗೆ ಗೆಲುವು


ಟಿ.ಡಿ.ರಾಜೇಗೌಡ

ಚಿಕ್ಕಮಗಳೂರು: ಸಾಕಷ್ಟು ಕುತೂಹಲಕ್ಕೆ ಕಾರಣವಾಗಿದ್ದ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಮತ ಎಣಿಕೆಯಲ್ಲಿ ಕೊನೆಗೂ ಕಾಂಗ್ರೆಸ್ ಶಾಸಕ ಟಿ.ಡಿ. ರಾಜೇಗೌಡ ಗೆಲುವು ಸಾಧಿಸಿದ್ದಾರೆ. ಚುನಾವಣಾ ಅಧಿಕಾರಿಗಳಿಂದ ಅಧಿಕೃತ ಘೋಷಣೆಯೊಂದೇ ಬಾಕಿ ಇದೆ. ಆ ಮೂಲಕ ಎದುರಾಗಿದ್ದ ದೊಡ್ಡ ಅಗ್ನಿಪರೀಕ್ಷೆಯಲ್ಲೂ ಜಯಗಳಿಸಿದ್ದಾರೆ. ಸದ್ಯ ಚಿಕ್ಕಮಗಳೂರಿನ ಐಡಿಎಸ್‌ಜಿ ಕಾಲೇಜು ಮುಂಭಾಗದಲ್ಲಿ ಸಂಭ್ರಮಾಚರಣೆ ▶ 10ನೇ ಪುಟಕ್ಕೆ

ಮಕ್ಕಳ ಕೈಯ್ಯಲ್ಲಿ ಮಾದಕ ವಸ್ತು

ವಿವಿಧ ಇಲಾಖೆಗಳ 13 ಅಧಿಕಾರಿಗಳ ವಿರುದ್ಧ ಸುಮೋಟೋ ಪ್ರಕರಣ : ಉಪಲೋಕಾಯುಕ್ತ ನ್ಯಾ.ವೀರಪ್ಪ ಸೂಚನೆ


ನ್ಯಾ.ಬಿ.ವೀರಪ್ಪ

ಶ್ರೀರಂಗಪಟ್ಟಣ, ಮೇ 2– ತಾಲೂಕಿನ ಗಂಜಾಮ್ ಗ್ರಾಮದಲ್ಲಿ ಅಪ್ರಾಪ್ತ ಮಕ್ಕಳ ಕೈಯ್ಯಲ್ಲಿ ಮಾದಕ ವಸ್ತು ಪತ್ತೆಯಾದ ಹಿನ್ನೆಲೆಯಲ್ಲಿ ವಿವಿಧ ಇಲಾಖೆಗಳ 13 ಅಧಿಕಾರಿಗಳ ವಿರುದ್ಧ ಸುಮೋಟೋ ಪ್ರಕರಣ ದಾಖಲಿಸುವಂತೆ ಉಪಲೋಕಾಯುಕ್ತ ನ್ಯಾ.ಬಿ.ವೀರಪ್ಪ ಅವರು ಸೂಚನೆ ನೀಡಿದ್ದಾರೆ.


ಅಪ್ರಾಪ್ತ ಮಕ್ಕಳಿಗೂ ಗಾಂಜಾ, ಚರಸ್, ಅಫೀಮು ಇನ್ನಿತರ ಮಾದಕ ವಸ್ತುಗಳು ಸುಲಭವಾಗಿ ಸಿಗುತ್ತಿರುವ ಬಗ್ಗೆ ಸುದ್ದಿ ಮಾಧ್ಯಮದಲ್ಲಿ ಬಿತ್ತರವಾದ ವರದಿ ಆಧಾರದಲ್ಲಿ ಕ್ರಮ ವಹಿಸಿರುವ ನ್ಯಾ. ವೀರಪ್ಪ ಶ್ರೀರಂಗಪಟ್ಟಣ ಠಾಣೆ ಸಬ್‌ಇನ್ಸ್‌ಪೆಕ್ಟರ್ ಜನಾಬಾಯಿ ಕಡಪಟ್ಟಿ, ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಕುಮಾರ್, ಡಿಎಸ್ಪಿ ಯು.ಡಿ. ಕೃಷ್ಣ ಕುಮಾರ್, ತಹಶೀಲ್ದಾರ್ ಚೇತನಾ ಯಾದವ್, ಪಾಂಡವಪುರ ಉಪ ವಿಭಾಗದ ಎಸಿ ಶ್ರೀನಿವಾಸ್, ಜಿಲ್ಲಾ ಆರೋಗ್ಯಾಧಿಕಾರಿ ಕೆ.ಮೋಹನ್, ತಾಲೂಕು ಆರೋಗ್ಯಾಧಿಕಾರಿ ಎಂ. ಆಶಾಲತಾ, ಡಿಡಿಪಿಐ ಜಿ.ಎ. ಲೋಕೇಶ್, ಬಿಇಓ ನಂದೀಶ್, ಡಿಡಿಪಿಯು ಚೆಲುವಯ್ಯ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕಿ ಆಶಾ, ಪುರಸಭೆ ಮುಖ್ಯಾಧಿಕಾರಿ ರಾಜಣ್ಣ ಹಾಗೂ ಶಿಶು ಅಭಿವೃದ್ಧಿ ಯೋಜನಾ ಅಧಿಕಾರಿ ಸಕಾಲೇಶ್ ವಿರುದ್ಧ ಸ್ವಯಂ ಪ್ರೇರಿತ ದೂರು (ಸುಮೋಟೋ) ದಾಖಲಿಸಲು ▶ 10ನೇ ಪುಟಕ್ಕೆ

ಮೇ 14ರ ನಂತರ ಭಾರತಕ್ಕೆ ಮುಂಗಾರು ಪ್ರವೇಶ

ಸಾಮಾನ್ಯಕ್ಕಿಂತ ಹೆಚ್ಚಿನ ಮಳೆ ಸಾಧ್ಯತೆ

ನವದೆಹಲಿ: ಮೇ 14ರ ನಂತರ ಭಾರತಕ್ಕೆ ಮುಂಗಾರು ಪ್ರವೇಶವಾಗಲಿದೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ದೇಶಾದ್ಯಂತ ಉರಿ ಬಿಸಿಲಿನ ಪರಿಸ್ಥಿತಿಯಿಂದ ಜನ ತತ್ತರಿಸಿ ಹೋಗಿದ್ದಾರೆ. ಮೇ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಮಳೆಯಾಗುವ ಸಾಧ್ಯತೆ ಇದೆ. ಮೇ 14ರಿಂದ 16ರ ಸುಮಾರಿಗೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳಲ್ಲಿ ನೈಋತ್ಯ ಮಾನ್ಸೂನ್ ಆಗಮನವಾಗಲಿದೆ. ಹಿಮಾಲಯದ ತಪ್ಪಲಿನ ಕೆಲವು ಭಾಗಗಳು, ಪೂರ್ವ ಕರಾವಳಿ ರಾಜ್ಯಗಳು, ಗುಜರಾತ್ ಮತ್ತು ಮಹಾರಾಷ್ಟ್ರಗಳಲ್ಲಿ ಈ ತಿಂಗಳಲ್ಲಿ ಸಾಮಾನ್ಯಕ್ಕಿಂತ ಹೆಚ್ಚಿನ ಶಾಖದ ಅಲೆಯ ▶ 10ನೇ ಪುಟಕ್ಕೆ





ಎರಡು ಪ್ರತ್ಯೇಕ ಪ್ರಕರಣ: ಕೆಆರ್‌ಎಸ್ ಹಿನ್ನೀರಲ್ಲಿ ಮೂವರ ದುರ್ಮರಣ

● ಇನ್ನು ಮೂವರು ಪಾರು ● ಮಧ್ಯಪ್ರದೇಶದ ಜಬಲ್‌ಪುರ್‌ನಲ್ಲಿ ಪ್ರವಾಸಿಗರ ದೋಣಿ ದುರಂತದ ಮಾದರಿ ಘಟನೆ ● ಬೋಟಿಂಗ್ ವೇಳೆ ದಂಪತಿ; ಮೀನಿಗೆ ಮೇವು ಹಾಕುವಾಗ ಯುವಕ ಜಲಸಮಾಧಿ

ಪಾಂಡವಪುರ, ಮೇ2(ಎಸ್‌ಎನ್‌ಎಸ್)–ಬೇಸಿಗೆ ರಜೆಯನ್ನು ಸಂತೋಷದಿಂದ ಕಳೆಯಲು ಪ್ರವಾಸಕ್ಕೆಂದು ಬಂದಿದ್ದ ಒಂದೇ ಕುಟುಂಬದ ಐವರು ಕೆಆರ್‌ಎಸ್ ಹಿನ್ನೀರಿನಲ್ಲಿ ಬೋಟಿಂಗ್ ವೇಳೆ ಭಾರೀ ಬಿರುಗಾಳಿಗೆ ಸಿಲುಕಿ ಬೋಟ್ ಮುಗುಚಿದ್ದರಿಂದ ನೀರಿನಲ್ಲಿ ಮುಳಗಿದವರಲ್ಲಿ ದಂಪತಿ ಮೃತಪಟ್ಟು, ಮಗು ಸೇರಿದಂತೆ ಮೂವರು ಪ್ರಾಣಾಪಾಯದಿಂದ ಪಾರಾಗಿರುವ ದುರಂತ ಶುಕ್ರವಾರ ಸಂಜೆ ಸಂಭವಿಸಿದೆ. ಈ ದುರ್ಘಟನೆ ಮಧ್ಯಪ್ರದೇಶದ ಜಬಲ್‌ಪುರದಲ್ಲಿ ನಡೆದ ಪ್ರವಾಸಿಗರ ದೋಣಿ ದುರಂತವನ್ನು ಹೋಲುವಂತಿದೆ.



ದುರಂತದಲ್ಲಿ ಮಂಜುನಾಥ್ (72), ಮತ್ತವರ ಪತ್ನಿ ಜಸ್ವಿ ಮಂಜುನಾಥ್(70)ಮೃತಪಟ್ಟಿದ್ದು, ಇವರ ಮಗಳು ಶ್ವೇತ, ಅಳಿಯ ಜಸ್ವಿನ್ ಹಾಗೂ ಪುತ್ರ ಅಯ್ಯನ್ ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೂಲತಃ ಕೇರಳದ ಕೊಚ್ಚಿ ನಿವಾಸಿಗಳಾಗಿದ್ದು, ಹಾಲಿ ಬೆಂಗಳೂರಿನಲ್ಲಿ ನೆಲೆಸಿರುವ ಇವರು, ಬೇಸಿಗೆ ರಜೆ ಹಿನ್ನೆಲೆಯಲ್ಲಿ ಪಾಂಡವಪುರ ತಾಲೂಕಿನ ಗಿರಿಯಾರಹಳ್ಳಿ–ಅಂತನಹಳ್ಳಿ ಸಮೀಪ ಇರುವ ಆರ್‌ಎಂಎಸ್‌ಸಿ ರೆಸಾರ್ಟ್ ಹಾಗೂ ಬೋಟಿಂಗ್ ಟ್ರೈನಿಂಗ್ ಸ್ಟೇಷನ್‌ಗೆ ಬಂದು ಶುಕ್ರವಾರ ಇಲ್ಲೇ ತಂಗಿದ್ದರು. ಸಂಜೆ ಕೆಆರ್‌ಎಸ್ ಹಿನ್ನೀರಿನಲ್ಲಿ ಕುಟುಂಬ ಸಮೇತ ಬೋಟಿಂಗ್ ಮಾಡುತ್ತಿದ್ದರು. ಈ ವೇಳೆ ಆಕಸ್ಮಿಕ ಬಿರುಗಾಳಿ ಸಹಿತ ಭಾರೀ ಮಳೆಗೆ ಬೋಟ್ ಮಗುಚಿ ಐವರು ನೀರಿನಲ್ಲಿ ಮುಳುಗಿದ್ದಾರೆ. ಈ ಐವರೂ ▶ 10ನೇ ಪುಟಕ್ಕೆ

ಸೇಫ್ಟಿ ಜಾಕೆಟ್ ಗುಣಮಟ್ಟ ಅನುಮಾನ

ಸೇಫ್ಟಿ ಜಾಕೆಟ್ ಧರಿಸಿದ್ದರೂ ಇಬ್ಬರು ಕೆಆರ್‌ಎಸ್ ಹಿನ್ನೀರಿನಲ್ಲಿ ಮೃತಪಟ್ಟಿರುವುದು ಸೇಫ್ಟಿ ಜಾಕೆಟ್‌ನ ಗುಣಮಟ್ಟದ ಬಗ್ಗೆ ಸಾಕಷ್ಟು ಅನುಮಾನ ಹುಟ್ಟುಹಾಕಿದೆ.





ನಕ್ಕರೆ ಅದೇ ಸ್ವರ್ಗ

ಗುಂಡ : ನಾನು ಆಸ್ಪತ್ರೆಯಲ್ಲಿ ಇದ್ದೀನಿ. ಆಮೇಲೆ ಕಾಲ್ ಮಾಡ್ತೀನಿ.
ತಿಮ್ಮ : ಯಾಕೋ ಏನಾಯ್ತು?
ಗುಂಡ : ನನ್ನ ತಮ್ಮ ಮಾತಾಡ್ತಾ ಇಲ್ಲ, ನಡಿತಾ ಇಲ್ಲ!
ತಿಮ್ಮ : ಯಾಕೆ?
ಗುಂಡ : ಏನಿಲ್ಲ ಈಗ ಎರಡು ಗಂಟೆ ಆಯ್ತು ಅವನು ಹುಟ್ಟಿ... ಆದರೂ...

ಮೈಸೂರು ಮಿತ್ರ

ಭಾನುವಾರ, ಮೇ 3, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ವೇದಗಳನ್ನು ಓದಿದವರು ದೊಡ್ಡವರಾಗುವುದಿಲ್ಲ. ಜನರ ವೇದನೆಗಳನ್ನು ಅರಿತವರು ಮಾತ್ರ ದೊಡ್ಡವರಾಗುತ್ತಾರೆ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಎಲ್ಲ ಕೆಡುಕಿಗೂ ಮೂಲ ಹೊಟ್ಟೆಕಿಚ್ಚು.

ನಿಮ್ಮ ಪತ್ರಗಳು

ತಿ.ನರಸೀಪುರದ ಸಾರಿಗೆ ಬಸ್ ನಿಲ್ದಾಣದಲ್ಲಿ ಆಟೋಗಳ ಹಾವಳಿ ತಪ್ಪಿಸಿ...!

ಮಾನ್ಯರೆ,

ಆಟೋಗಳ ಸೇವೆ ಮನುಷ್ಯನ ಜೀವನದ ಅವಿಭಾಜ್ಯ ಅಂಗವಾಗಿ ಕಾರ್ಯ ನಿರ್ವಹಿಸುತ್ತಿರುವುದು ಶ್ಲಾಘನೀಯ. ಆಟೋದವರು ನಗರ, ಪಟ್ಟಣ ಸೇರಿದಂತೆ ಎಲ್ಲಿಯಾದರೂ ಸಾರ್ವಜನಿಕರಿಗೆ ತಮ್ಮ ಸೇವೆ ನೀಡುವಾಗ ಕೆಲವು ಸರ್ಕಾರದ ನಿಯಮಗಳನ್ನೂ ಪಾಲಿಸಬೇಕು, ಪಾಲಿಸಬೇಕಾದ್ದು ಅವರ ಆದ್ಯ ಕರ್ತವ್ಯ ಕೂಡ. ಆದರೆ ಇವರಲ್ಲಿ ಕೆಲವು ಆಟೋ ಚಾಲಕರು ತಮ್ಮ ಸ್ವಾರ್ಥ ಸಾಧನೆಗಾಗಿ ಸರ್ಕಾರಿ ಕಾನೂನುಗಳನ್ನು ಗಾಳಿಗೆ ತೂರಿ ಆಟೋಗಳನ್ನು ಚಲಾಯಿಸುವುದು ಉಂಟು.

ಅಂತಹದ್ದೇ ಘಟನೆಗಳು ತಿ.ನರಸೀಪುರದ ಸರ್ಕಾರಿ ಬಸ್ ನಿಲ್ದಾಣದಲ್ಲಿ ದಿನ ನಿತ್ಯ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ವಿಚಾರದಲ್ಲಿ ನಾನು ಕಂಡ ಒಂದು ಸತ್ಯ ಘಟನೆಯನ್ನು ನಿಮ್ಮ ಮುಂದೆ ತರಲು ಬಯಸುತ್ತೇನೆ. ನಾನು ದಿನಾಂಕ: 30–4–2026ರ ಗುರುವಾರ ಮೈಸೂರಿನಿಂದ ತಿ.ನರಸೀಪುರಕ್ಕೆ ಸರ್ಕಾರಿ ಸಾರಿಗೆ ಬಸ್‌ನಲ್ಲಿ ಪ್ರಯಾಣಿಸಿ ಸುಮಾರು ಮಧ್ಯಾಹ್ನ 11.40 ಗಂಟೆಯಲ್ಲಿ ತಿ.ನರಸೀಪುರ ಬಸ್ ನಿಲ್ದಾಣ ತಲುಪಿದೆ. ಈ ವೇಳೆ ಪ್ರಯಾಣಿಕರನ್ನು ಹುಡುಕುವ ಧಾವಂತದಲ್ಲಿದ್ದ ಕೆಲವು ಆಟೋ ಚಾಲಕರು ಅಂದರೆ 4 ರಿಂದ ಐದು ಆಟೋಗಳು ಬಸ್ ಬಂದ ತಕ್ಷಣ ಬಸ್ ನಿಲ್ದಾಣಕ್ಕೆ ನುಗ್ಗಿದವು. ಈ ವೇಳೆ ಬೇರೆ ಬೇರೆ ಬಸ್‌ಗಳಿಂದ ಇಳಿದ ಪ್ರಯಾಣಿಕರು ಹೊರ ಬರುತ್ತಿರುವಾಗ ಒಬ್ಬ ಹಳ್ಳಿ ಮುಗ್ದ ಮಹಿಳೆಯ ಸೀರೆ ಅಂಚು ಒಂದು ಆಟೋದ ಹಿಂಭಾಗದ ಬಂಪರ್‌ಗೆ ಸಿಲುಕಿತ್ತು. ಇದನ್ನು ಗಮನಿಸದ ಆಟೋ ಚಾಲಕ ಪ್ರಯಾಣಿಕರನ್ನು ಹತ್ತಿಸಿಕೊಂಡು ಹೊರಟಾಗ ಆಟೋ ಹಿಂಭಾಗ ನಿಂತಿದ್ದ ಮಹಿಳೆ ಚೀರಿಕೊಂಡು ತನ್ನ ಸೀರೆಯನ್ನು ಹಿಂದಕ್ಕೆ ಕೀಳುವಾಗ ಸೀರೆ ಹರಿದುಹೋಯಿತು. ಇದನ್ನು ನೋಡಿದ ಆಟೋ ಚಾಲಕ ತಕ್ಷಣ ಅಲ್ಲಿಂದ ಪರಾರಿಯಾದ.

ಅಕಸ್ಮಾತ್ ಆಟೋಗೆ ಸಿಲುಕಿಕೊಂಡಿದ್ದ ಸೀರೆಯನ್ನು ತಕ್ಷಣ ಹಿಂದಕ್ಕೆ ಮಹಿಳೆ ಎಳೆದುಕೊಳ್ಳದಿದ್ದರೆ ಮಹಿಳೆ ಬಿದ್ದು ಪ್ರಾಣ ಕಳೆದುಕೊಳ್ಳುವ ಸಂಭವವೂ ಇತ್ತು. ನಾನು ಸ್ವಲ್ಪ ದೂರದಲ್ಲಿದ್ದ ಕಾರಣ ನಾನು ಬರುವಷ್ಟರಲ್ಲಿ ಆಟೋ ಕ್ಷಣಾರ್ಧದಲ್ಲಿ ಅಲ್ಲಿಂದ ಹೊರಗಡೆ ಹೋದದ್ದರಿಂದ ಆ ಆಟೋ ನಂಬರ್ ಕೂಡ ನೋಡಲು ಸಾಧ್ಯವಾಗಲಿಲ್ಲ. ಘಟನೆಯಲ್ಲಿ ಸಿಲುಕಿದ್ದ ಗ್ರಾಮೀಣ ಮುಗ್ದ ಮಹಿಳೆ ಈ ವಿಚಾರವನ್ನು ಯಾರ ಗಮನಕ್ಕೂ ತಾರದೆ ಕಣ್ಣೀರಿಡುತ್ತಾ ಹೊರನಡೆದರು.

ಇಂತಹ ಘಟನೆಗೆ ಕೆಲವು ಆಟೋ ಚಾಲಕರೇ ಕಾರಣವಾಗುವುದರಿಂದ ಸಂಬಂಧಪಟ್ಟ ಅಂದರೆ ಪೊಲೀಸ್ ಇಲಾಖೆ ಅಥವಾ ಸಾರಿಗೆ ಇಲಾಖೆ ಸಿಬ್ಬಂದಿ ಗಮನಿಸಿ ಈ ರೀತಿ ನಿಯಮಬಾಹಿರವಾಗಿ ಬಸ್‌ನಿಲ್ದಾಣಕ್ಕೆ ನುಗ್ಗುವ ಆಟೋ ಚಾಲಕರ ವಿರುದ್ಧ ಕಾನೂನು ಕ್ರಮ ಕೈಗೊಂಡು ಇಂತಹ ಅನಾಹುತ ನಡೆಯದಂತೆ ಮುಂಜಾಗ್ರತೆ ವಹಿಸಬೇಕೆಂದು ನನ್ನ ಮನವಿ.

–ಎಂ.ಮಹೇಶ್ ನಿಲಸೋಗೆ, ಗಿರಿದರ್ಶಿನಿ ಬಡಾವಣೆ, ಮೈಸೂರು.

ಚಾಮರಾಜಪುರಂ ರಸ್ತೆ ಸರಿಪಡಿಸಿ



ಮಾನ್ಯರೆ,

ಕಳೆದ ಜನವರಿಯಲ್ಲಿ ಮೈಸೂರಿನ ಚಾಮರಾಜಪುರಂ ವಿಷ್ಣುವರ್ಧನ ರಸ್ತೆಯ ಹಿಂಭಾಗದ ರಸ್ತೆಯಲ್ಲಿ ಒಳ ಚರಂಡಿ ಕೊಳವೆ ಹಾಕುವ ಕೆಲಸ ನಡೆಯಿತು. ಆಗ ಕುಡಿಯುವ ನೀರಿನ ಕೊಳವೆಗಳು ಜಖಂಗೊಂಡಿತು. ರಸ್ತೆಯೂ ಸರಿ ಹೋಗಲಿಲ್ಲ. ಒಡೆದ ನೀರಿನ ಕೊಳವೆಯನ್ನೂ ಸರಿಪಡಿಸಲಿಲ್ಲ. ಹೀಗಾಗಿ ಇಲ್ಲಿ ಓಡಾಡುವವರಿಗೆ ನರಕ ಯಾತನೆ ತಪ್ಪಿದ್ದಲ್ಲ. ಪಾಲಿಕೆಯ ಸಿಬ್ಬಂದಿಯಾಗಲಿ, ನಮ್ಮ ಶಾಸಕರಾಗಲಿ ಈ ಕಡೆ ಸುಳಿಯುವುದೇ ಇಲ್ಲವಾದ ಕಾರಣ ಅವರನ್ನು ದೂಷಿಸಿ ಫಲವಿಲ್ಲ. ಶಾಸಕರನ್ನು ನಾವು ಆಯ್ಕೆ ಮಾಡಿದ್ದೇವಷ್ಟೇ. ಅವರಿಂದ ಚಾಮರಾಜಪುರಂ ನಿವಾಸಿಗಳಿಗೆ ಏನೊಂದೂ ಉಪಯೋಗವಾಗಿಲ್ಲ., ಪಾಲಿಕೆ, ವಾಣಿವಿಲಾಸ ನೀರು ಸರಬರಾಜು ಕೇಂದ್ರದ ಸಿಬ್ಬಂದಿ ಈ ಕಡೆ ಮುಖ ಮಾಡಿ ಒಡೆದ ಕೊಳವೆಯನ್ನು ಸರಿಪಡಿಸುವರೇ ಎಂದು ಜಾತಕ ಪಕ್ಷಿಯಂತೆ ಕಾಯುತ್ತಿದ್ದೇವೆ.

–ಕೊ.ಸು.ನರಸಿಂಹ ಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು.

ದೊಡ್ಡ ಹೋಬಳಿಯ ದೊಡ್ಡ ಆಸ್ಪತ್ರೆಯ ದುಸ್ಥಿತಿ

ಮಾನ್ಯರೆ,

ಹುಣಸೂರು ತಾಲೂಕಿನ ಹೋಬಳಿ ಕೇಂದ್ರವಾದ ಹನಗೋಡು ಗ್ರಾಮದಲ್ಲಿ ಸರ್ಕಾರಿ ಆಸ್ಪತ್ರೆಯೊಂದಿದ್ದು, ಒಬ್ಬರು ಪುರುಷ ವೈದ್ಯರನ್ನು ಬಿಟ್ಟರೆ ಮಹಿಳಾ ವೈದ್ಯರಿಲ್ಲ.

ಆಸ್ಪತ್ರೆ ಆರಂಭವಾದಾಗ ನಿರ್ಮಾಣವಾದ ಕಾಂಪೌಂಡ್ ಕುಸಿದು ಬಿದ್ದಿದ್ದು ನರ್ಸ್ ಮನೆ ಹಾನಿಯಾಗಿದ್ದು ಆಸ್ಪತ್ರೆಯ ಆವರಣ ಗಿಡಗಂಟಿಗಳಿಂದ ತುಂಬಿದೆ.

ಇದಕ್ಕೆ ಸಂಬಂಧಪಟ್ಟ ಜನಪ್ರತಿನಿಧಿಗಳಾಗಲಿ, ತಮ್ಮ ಹೆಸರಿನ ಮುಂದೆ ಊರಿನ ಹೆಸರು ಇಟ್ಟುಕೊಂಡಿರುವ ಮಹನೀಯರಾಗಲಿ, ಸರ್ಕಾರದ ಅಧಿಕಾರಿಗಳಾಗಲಿ ಗಮನ ಹರಿಸದೆ ಇರುವುದು ದೊಡ್ಡ ವಿಪರ್ಯಾಸವೇ ಸರಿ. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಗಮನಹರಿಸಬೇಕೆಂದು ಈ ಮೂಲಕ ಪಾರ್ಥಿಸುತ್ತೇನೆ.

–ಎಸ್.ಮಲ್ಲಿಕಾರ್ಜುನ, ಯುವಜನ ವಿಚಾರ ವೇದಿಕೆ, ಹನಗೋಡು

ಗ್ರಾಹಕರ ದೂರಿಗೆ ಸ್ಪಂದಿಸದ ಸೆಸ್ಕ್ ಮೈಸೂರು

ಮಾನ್ಯರೆ,

ಮೈಸೂರು ನಗರ ಭಾಗದಲ್ಲಿ ಗುರುವಾರ ಹಾಗೂ ಶುಕ್ರವಾರ ಸುರಿದದ್ದು ಸ್ವಲ್ಪ ಮಳೆ; ಹಾಗೂ ಸ್ವಲ್ಪ ಜೋರಾದ ಗಾಳಿ. ಪ್ರತಿ ವರ್ಷದ ಮೇ ತಿಂಗಳಂತೆ ಸೆಸ್ಕ್ ರೂಪಾನಗರ ಫೀಡರ್ ಸಂಪರ್ಕ ಹೊಂದಿರುವ ಲೇಔಟ್‌ಗಳಲ್ಲಿ ವಿದ್ಯುತ್ ಕಡಿತದ ಸಮಸ್ಯೆ. ಶನಿವಾರ ಬೆಳಗ್ಗೆ ಏಳು ಗಂಟೆಗೆ ಹೋದ ವಿದ್ಯುತ್ ಗಂಟೆಗಳ ಕಾಲವಾದರೂ ಮರಳಿ ಬಂದಿಲ್ಲ. ಈಗ ಸಿಂಗಲ್ ಲೈನ್ ವಿದ್ಯುತ್ ಪೂರೈಕೆ. ಪ್ರತಿ ಕ್ಷಣವೂ ವೋಲ್ಟೇಜ್ ಏರಿಳಿತವಾಗುತ್ತಿದೆ. ಈ ಬಗ್ಗೆ ದೂರು ದಾಖಲಿಸಲು 1912 ಅಥವಾ 18005990062ಗೆ ಕರೆ ಮಾಡಿದರೆ ಕರೆ ಸಂಪರ್ಕವಾಗುತ್ತಿಲ್ಲ. ಈ ಹಿಂದೆ, ಈ ಭಾಗದ ವಿದ್ಯುತ್ ಪೂರೈಕೆ ಸಮಸ್ಯೆ ಬಗ್ಗೆ ಅಧಿಕಾರಿಗಳಿಗೆ ಅದೆಷ್ಟು ದೂರು ನೀಡಿದರೂ ಪ್ರಯೋಜನವಾಗಿಲ್ಲ. ಈಗಲಾದರೂ ಇದರ ಬಗ್ಗೆ ಅಧಿಕಾರಿಗಳು ಎಚ್ಚೆತ್ತುಕೊಳ್ಳಬೇಕಾಗಿ ಮನವಿ.


–ಸುರಭಿ ಭಟ್, ರೂಪ ನಗರ ಮುಖ್ಯ ರಸ್ತೆ, ಮೈಸೂರು.

ನಮ್ಮೂರ ಆದರ್ಶಪ್ರಾಯರು...



ಕಳೆದ ವರ್ಷ 'ಮೈಸೂರು ಮಿತ್ರ'ದಲ್ಲಿ ನಾನು ಬರೆದ ಮೈಸೂರಿನ 50 ಗಣ್ಯಾತಿಗಣ್ಯರ ಅಂಕಣ, 'ನಮ್ಮ ಮೈಸೂರಿನ ಅಸಾಮಾನ್ಯರು' ಪ್ರಕಟವಾಗಿ, ಆ ಲೇಖನಗಳನ್ನು ಓದುಗರು ಮೆಚ್ಚಿ ನಿರೀಕ್ಷೆಗೂ ಮೀರಿ ಪ್ರತಿಕ್ರಿಯೆಗಳನ್ನು ವ್ಯಕ್ತಪಡಿಸಿದರು. ಮರೆತುಹೋಗಿದ್ದ ಈ ಐವತ್ತು ಗಣ್ಯರ ಪರಿಚಯ ಮಾಡಿ ನಾನು ನಿಲ್ಲಿಸಿದ್ದೆ. ಆದರೆ ಈ ಅಂಕಣವನ್ನು ಮುಂದುವರಿಸುವಂತೆ ಬಹಳಷ್ಟು ಓದುಗರು ಒತ್ತಾಯಿಸುತ್ತಾ ಬರುತ್ತಿದ್ದಾರೆ. ಓದುಗರ ವಿಶ್ವಾಸಕ್ಕೆ ಮಣಿದು ನಾನು ಎರಡನೇ ಕಂತಿನ ಈ ಲೇಖನ ಮಾಲೆಯನ್ನು 'ನಮ್ಮೂರ ಆದರ್ಶಪ್ರಾಯರು' ಹೆಸರಿನಲ್ಲಿ ಮುಂದುವರಿಸುತ್ತಿದ್ದೇನೆ. ಈಗ ಪ್ರಕಟವಾಗುವ ಗಣ್ಯರ ತ್ಯಾಗಮಯ ಸೇವೆಯೂ ಅದೇ ರೀತಿ ದಾಖಲಾಗಿ ಉಳಿಯಲಿ ಎಂದು ನಾನಾದರೋ ಬಯಸುತ್ತೇನೆ. ಓದುಗರ ಪ್ರತಿಕ್ರಿಯೆಯೂ ಅಷ್ಟೇ ಮುಕ್ತವಾಗಿ ದೊರೆಯಲಿ ಎಂದು ಆಶಿಸುತ್ತೇನೆ. ಈ ಲೇಖನ ಮಾಲೆಯನ್ನು ಬರೆಯುವಾಗ ಈ ಮಹಾನುಭಾವರ ಚಿತ್ರಗಳು ಸಿಗದೆ ಹೋಗಬಹುದು. ಆ ಸಾಧ್ಯತೆಗಳೇ ಹೆಚ್ಚು. ದೊರೆತಮರ ಚಿತ್ರಗಳು ಲೇಖನದ ಜೊತೆಗೆ ಪ್ರಕಟವಾಗುತ್ತವೆ. ಇಲ್ಲವೇ ಸಂದರ್ಭಕ್ಕೆ ಸರಿಹೊಂದುವ ಚಿತ್ರಗಳನ್ನು ಬಳಸಿಕೊಳ್ಳಲಾಗುವುದು. ಅವೂ ಲಭ್ಯವಾಗದೆ ಹೋದಲ್ಲಿ ಚಿತ್ರವಿಲ್ಲದೆಯೂ ಪ್ರಕಟಿಸಬೇಕಾಗಿ ಬರಬಹುದು ಎಂಬ ಮಾತನ್ನು ತಿಳಿಸಬಯಸುತ್ತೇನೆ. ಈ ಮಾಲಿಕೆಯ ಮೊದಲ ಲೇಖನ 'ಮೈಸೂರು ಮಿತ್ರ' ವಾರ್ಷಿಕ ಸಂಚಿಕೆಯಲ್ಲಿ ಪ್ರಕಟವಾಗುವ ಮೂಲಕ ಪ್ರಾರಂಭವಾಗಿರುವುದು ಶುಭಾರಂಭವೇ ಹೌದು.

4. ಬಿಡಿಂಗನವಲೆ ಭಕ್ಷಿ ಕಡಾಂಬಿ ವೆಂಕಟಾಚಾರ್





ಗೌರಿ ಸತ್ಯ
ಹಿರಿಯ ಪತ್ರಕರ್ತರು
ಮೊ. 87627 88685

ಮುಮ್ಮಡಿ ಕೃಷ್ಣರಾಜ ಒಡೆಯರು ಮತ್ತು ಅವರ ಹಿಂದಿನ ಕೆಲವು ಮಹಾರಾಜರ ಚರಿತ್ರೆಯನ್ನು ಅವಲೋಕಿಸಿದಾಗ ನಮಗೆ ಬರೀ ಮೈಸೂರಿನಲ್ಲಿ ಹುಟ್ಟಿ ಬೆಳೆದವರಲ್ಲದೆ ಹೊರ ರಾಜ್ಯಗಳಿಂದಲೂ ಬಂದು ಮೈಸೂರು ಸಂಸ್ಥಾನದಲ್ಲಿ ಸೇವೆ ಮಾಡಿರುವವರ ಕೆಲವು ನಿದರ್ಶನಗಳು ಗಮನಕ್ಕೆ ಬರದೆ ಹೋಗುವುದಿಲ್ಲ. ಅದರಲ್ಲಿಯೂ ಮಹಾರಾಷ್ಟ್ರದಿಂದ ಬಂದ ಸುಮಾರು ಅಧಿಕಾರಿಗಳು ಸೈನ್ಯದಲ್ಲಿ ಮಾತ್ರವಲ್ಲದೆ, ಆಡಳಿತದಲ್ಲಿಯೂ ನೇರವಾಗಿ ದುಡಿದಿರುವುದು ಅರಿವಿಗೆ ಬರುತ್ತದೆ. ಅವರಲ್ಲಿ ಹಲವಾರು ಮಂದಿ ಶ್ರದ್ಧೆಯಿಂದ ಕರ್ತವ್ಯ ನಿರ್ವಹಿಸಿ ಹೆಸರು ಪಡೆದಿದ್ದಾರೆ. ತಾವು ದುಡಿಯುತ್ತಿದ್ದ ಮೇಲಿನವರಿಗೂ, ರಾಜ್ಯಕ್ಕೂ ಕೀರ್ತಿ ತಂದಿದ್ದಾರೆ. ಅಂತಹವರಲ್ಲಿ ಒಬ್ಬರು ಬಿಂಡಿಗನವಲೆ ಭಕ್ಷಿ ಕಡಾಂಬಿ ವೆಂಕಟಾಚಾರ್.

ಹದಿನೆಂಟನೆಯ ಶತಮಾನದಲ್ಲಿ ಅನೇಕ ತಂಡಗಳು ಮಹಮದೀಯರು ಮತ್ತಿತರರ ಹಾವಳಿಯನ್ನು ತಡೆಯಲಾರದೆ ಮಹಾರಾಷ್ಟ್ರವನ್ನು ಬಿಟ್ಟು ಇತರ ರಾಜ್ಯಗಳ ಕಡೆಗೆ ತೆರಳಿದರು. ಅದೇ ರೀತಿ ಮೈಸೂರು ಪ್ರಾಂತ್ಯದಿಂದಲೂ ಅನೇಕ ಕುಟುಂಬಗಳು ಇತರ ಪ್ರದೇಶಗಳಿಗೆ ವಲಸೆ ಹೋದವು. ಇಂತಹ ಒಂದು ಸಂದರ್ಭದಲ್ಲಿ ಬೆಂಕಿ ತಿಮ್ಮಪ್ಪ ಎಂಬುವರು ದಕ್ಷಿಣ ಮರಾಠ ದೇಶದ ಗಜೇಂದ್ರಗಡಕ್ಕೆ ವಲಸೆ ಬಂದು ಕೆಲಸ ಕಂಡುಕೊಂಡಿದ್ದರು. ಆದರೆ ಅಲ್ಲಿಯೂ ಸುರಕ್ಷತೆ ಇರಲಿಲ್ಲ. ಇಂತಹ ಪರಿಸ್ಥಿಯಲ್ಲಿ ತಿಮ್ಮಪ್ಪನವರ ಮಗ ತಿಮ್ಮಯ್ಯ ಅವರನ್ನು ಕೂಸಾಗಿದ್ದಾಗಲೇ ಅವರ ತಾಯಿ ರಕ್ಷಿಸಿ ಕಳುಹಿಸಿದ್ದರು. ಈ ಕಾರಣ ಅವರನ್ನು ಮಾವು ತಿಮ್ಮಯ್ಯ ಎಂದೂ ಕರೆಯಲಾಗುತ್ತಿತ್ತು. ನಂತರ ಅವರನ್ನು ಗಜೇಂದ್ರಗಡಕ್ಕೆ ವಾಪಸ್ ಕರೆದುತರಲಾಗಿತ್ತು. ಅವರು ಬೆಳೆದ ಮೇಲೆ 1778–79ರಲ್ಲಿ ಟೀಪು ಸುಲ್ತಾನನ ಸೈನ್ಯದಲ್ಲಿ ಅಂಚೆ ಮುತ್ಸದ್ದಿ ಕೆಲಸಕ್ಕೆ ಸೇರಿದ್ದರು. ಅವರು ಕಾಲವಾದ ಮೇಲೆ ಹಾಗೂ ಟೀಪು ಸುಲ್ತಾನನ ಆಡಳಿತ ಕೊನೆಗೊಂಡ ಮೇಲೆ ಪತಿ ಮಾವು ತಿಮ್ಮಪ್ಪನವರನ್ನು ಕಳೆದು ಕೊಂಡಿದ್ದ ತಿಮ್ಮಮ್ಮ ಗಜೇಂದ್ರಗಡ ಬಿಟ್ಟು ಮೈಸೂರು ಪ್ರಾಂತ್ಯಕ್ಕೆ ಹಿಂತಿರುಗಿ ಬಂದು ತುಮಕೂರು ಜಿಲ್ಲೆಯ ಮಾಯಸಂದ್ರದಲ್ಲಿ ಸ್ವಲ್ಪ ಜಮೀನು ಖರೀದಿಸಿ ತಮ್ಮ ಮೂವರು ಮಕ್ಕಳೊಂದಿಗೆ ಜೀವನ ನಿರ್ವಹಿಸುತ್ತಿದ್ದರು.

ಆ ಮೂವರು ಮಕ್ಕಳ ಪೈಕಿ ಮೂರನೆಯ ಮಗ ಬೇಗನೇ ಕಾಲವಾದರು. ಎರಡನೇ ಮಗ ವೆಂಕಟರಾಮಯ್ಯ ಅವರಿಗೆ ಅವರದೇ ಹೆಸರಿನ ವೆಂಕಟರಾಮಯ್ಯ ಎಂಬ ಪುತ್ರನಿದ್ದು ಆತ 1824ರ ಕಿತ್ತೂರು ಯುದ್ಧದಲ್ಲಿ ಕಾಣೆಸಿಕೊಂಡಿದ್ದ. ಹಿರಿಯ ಪುತ್ರ ವೆಂಕಟರಾಯ (ಇನ್ನೊಂದು ಹೆಸರು ಅಣ್ಣಾಜೈಯ್ಯಂಗಾರ್) ಅವರಿಗೆ ಮೊದಲನೆಯ ಹೆಂಡತಿಯಲ್ಲಿ ವೆಂಕಟಾಚಾರ್ ಅವರ ತಂದೆ ತಿಮ್ಮಪ್ಪಯ್ಯ ಹಾಗೂ ವೆಂಕಟರಾಮಯ್ಯ ಎಂಬ ಇಬ್ಬರು ಮಕ್ಕಳು ಹುಟ್ಟಿದ್ದರು. ಅವರಲ್ಲಿ ತಿಮ್ಮಪ್ಪ 1795ರಲ್ಲಿ ಜನಿಸಿದರು. ಪ್ರಾರಂಭದ ಸ್ವಲ್ಪ ವಿದ್ಯಾಭ್ಯಾಸದ ನಂತರ ಅವರು ಸಿರಾದ ಬ್ರಿಟಿಷ್ ಅಂಚೆ ಕಚೇರಿಯಲ್ಲಿ ಕೆಲಸಕ್ಕಿದ್ದು, ನಂತರ ಅವರನ್ನು ಹರಿಹರಕ್ಕೆ ವರ್ಗಾಯಿಸಲಾಗಿತ್ತು. 1815ರಲ್ಲಿ ಅವರನ್ನು ಅಲ್ಲಿಂದ ಹುಣಸೂರಿಗೆ ವರ್ಗಾ ಮಾಡಿ ಸಾರ್ವಜನಿಕ ಪಶು ಇಲಾಖೆಯಲ್ಲಿ ಮುಖ್ಯ ಹಸ್ತಲಿಪಿಕಾರರನ್ನಾಗಿ ನೇಮಿಸಲಾಯಿತು. ತಿಮ್ಮಪ್ಪಯ್ಯನವರು 42 ವರ್ಷಗಳ ದುಡಿದು 1854ರಲ್ಲಿ ನಿವೃತ್ತಿ ಪಡೆದರು. ತಮ್ಮ ಸೇವಾ ಅವಧಿಯಲ್ಲಿ ವೆಂಕಟಾಚಾರ್ ಅವರ ತಂದೆಯವರಾದ ಇವರು ಮೇಲಿನ ಅಧಿಕಾರಿಗಳ ಶ್ಲಾಘನೆಗೆ ಪಾತ್ರರಾಗಿದ್ದರು. ಮೈಸೂರಿನ ಮೊದಲ ಕಮೀಷನರ್ ಜನರಲ್ ಸರ್ ಮಾರ್ಕ್ ಕಬ್ಬನ್ ಕೂಡ ಇವರ ಕಾರ್ಯದಕ್ಷತೆಯನ್ನು ಮೆಚ್ಚಿ ಅವರ ಮಗ ವೆಂಕಟಾಚಾರ್ ಅವರನ್ನು ತಿಮ್ಮಪ್ಪಯ್ಯನವರ ಮಗ ಎಂದೇ ಗುರುತಿಸುತ್ತಿದ್ದನು. ತಿಮ್ಮಪ್ಪನವರ ಸಹೋದರರಾದ ವೆಂಕಟರಾಮಯ್ಯ ಅವರು ಅಮೃತಮಹಲ್ ಇಲಾಖೆಯಲ್ಲಿ ಭಕ್ಷಿಯಾಗಿ ಕೆಲಸ ಕಂಡುಕೊಂಡಿದ್ದರು.

ಮೇಲಿನದು ವೆಂಕಟಾಚಾರ್ ಅವರ ಪೂರ್ವಿಕರ ವಿಷಯವಾದರೆ ಅವರ ತಾಯಿ ಲಕ್ಷ್ಮಮ್ಮ ಅವರು ಗುಬ್ಬಿ ವೆಂಕಪ್ಪಯ್ಯನವರ ಪುತ್ರಿ. ಗುಬ್ಬಿ ವೆಂಕಪ್ಪಯ್ಯನವರ ವಂಶಸ್ಥರು ತುಮಕೂರು ಜಿಲ್ಲೆಯ ಕಡಬ ಸ್ಥಳದವರಾಗಿದ್ದರು. ಗುಬ್ಬಿ ವೆಂಕಪ್ಪಯ್ಯನವರ ತಂದೆ ಟೀಪು ಸುಲ್ತಾನ್ ಮತ್ತು ಹೈದರ್ ಅಲಿ ಕಾಲದಲ್ಲಿ ಶ್ರೀರಂಗಪಟ್ಟಣದ ಗಂಜಾಂ ಬಜಾರಿನ ಶಿರಸ್ತೆದಾರ್ ಆಗಿದ್ದು, ನಂತರ ಅಂಚೆ ಕಚೇರಿಯ ಶಿರಸ್ತೆದಾರ್ ಆಗಿದ್ದರು. 90ರ ವಯಸ್ಸಿನಲ್ಲಿ ಅವರು ಕಡಬಕ್ಕೆ ಹಿಂತಿರುಗಿ 95ನೇ ವಯಸ್ಸಿನವರೆಗೆ ಬದುಕಿದ್ದರು. ಅವರ ಮಗನೂ ಗುಬ್ಬಿ ವೆಂಕಪ್ಪಯ್ಯನವರ ಹೆಸರಿನವನಾಗಿದ್ದು, ಮುಮ್ಮಡಿ ಕೃಷ್ಣರಾಜರ ಕಾಲದಲ್ಲಿ ಗುಬ್ಬಿ ತಾಲೂಕಿನ ಶಿರಸ್ತೆದಾರ್ ಆಗಿದ್ದರು. ನಂತರ ಕನಕುಪ್ಪ ಮತ್ತು ದೇವರಾಯದುರ್ಗ ತಾಲೂಕುಗಳ ಅಮಲ್ದಾರ್ ಆಗಿದ್ದರು. ಸ್ವಲ್ಪ ಕಾಲದ ನಂತರ ಮುಮ್ಮಡಿಯವರು ಅವರನ್ನು ಹೊಳಲಕೆರೆಯ ಅಮಲ್ದಾರರಾಗಿ ನೇಮಿಸಿದ್ದರು.

ದೃಢಕಾಯರಾದ ವೆಂಕಟಾಚಾರ್ ಸೇವೆಯಲ್ಲಿ ಅತ್ಯುತ್ತಮ ದಕ್ಷತೆ ಹಾಗೂ ಸಾಮರ್ಥ್ಯವನ್ನು ತೋರುತ್ತಿದ್ದರು. ಅವರ ತಂದೆ ತಿಮ್ಮಪ್ಪನವರು ನೆಲೆ ಕಂಡುಕೊಂಡಿದ್ದ ಹುಣಸೂರಿನಲ್ಲಿ 1822ರ ಜನವರಿ 22ರಂದು ಅವರ ಜನನವಾಯಿತು. ಅವರ ತಾಯಿ ಲಕ್ಷ್ಮಮ್ಮ ವೆಂಕಟಾಚಾರ್ ಅಲ್ಲದೆ ಇನ್ನಿಬ್ಬರಿಗೆ ಜನ್ಮ ನೀಡಿದ್ದು ಹಿರಿಯರಾದ ವೆಂಕಟವರದೈಯ್ಯನವರು ಬಳ್ಳಾರಿ ಮತ್ತಿತರ ಜಾಗಗಳಲ್ಲಿ ಕಮೀಷನರ್ ಅವರ ಕಚೇರಿಯಲ್ಲಿ ಕೆಲಸ ಮಾಡುತ್ತಿದ್ದರು. ಇನ್ನೊಬ್ಬರಾದ ಗರುಡಾಚಾರ್ ಅವರು ಅಮೃತ ಮಹಲ್ ಇಲಾಖೆಯಲ್ಲಿ ಮೊದಲಿಗೆ ಗುಮಾಸ್ತೆಯಾಗಿ ನಂತರ ಮೈಸೂರು ರೆಸಿಡೆನ್ಸಿ ಇಲಾಖೆಯಲ್ಲಿ ಚೀಫ್ ಕಮೀಷನರ್ ಅವರ ಕಚೇರಿಯಲ್ಲಿ ಉದ್ಯೋಗ ಮಾಡುತ್ತಿದ್ದರು. ಲಕ್ಷ್ಮಮ್ಮನಿಗೆ ತಿಮ್ಮಾಜಮ್ಮ ಮತ್ತು ಲಕ್ಷ್ಮಮ್ಮ ಹೆಸರಿನ ಇಬ್ಬರು ಪುತ್ರಿಯರಿಗೂ ಹುಟ್ಟಿದ್ದರು. ತಾಯಿ ಲಕ್ಷ್ಮಮ್ಮ 25ನೇ ವಯಸ್ಸಿಗೆ ತಿರುಮಕೂಡಲು ನರಸೀಪುರದಲ್ಲಿ ಕಾಲವಾಗಿದ್ದರಿಂದ ಪತಿ ತಿಮ್ಮಪ್ಪ ಅವರು ಯದುಗಿರಿಯಮ್ಮ ಎಂಬಾಕೆಯನ್ನು ಮದುವೆಯಾಗಿದ್ದರು. ಯದುಗಿರಿಯಮ್ಮನನ್ನು ಯಗ್ಗಮ್ಮ ಎಂದೂ ಕರೆಯಲಾಗುತ್ತಿತ್ತು. ವೆಂಕಟಾಚಾರ್ ತಮ್ಮ ಮಲತಾಯಿಯ ಬಗ್ಗೆಯೂ ಗೌರವ ಹೊಂದಿದ್ದರು.

ವೆಂಕಟಾಚಾರ್ ಅವರ ಪ್ರಾರಂಭಿಕ ಶಿಕ್ಷಣ ಕನ್ನಡ, ಮರಾಠಿ ಮತ್ತು ಸಂಸ್ಕೃತ ಭಾಷೆಗಳಿಗೆ ಸೀಮಿತವಾಗಿದ್ದರೂ ಅವರು ಇಂಗ್ಲಿಷ್ ಭಾಷೆಯನ್ನೂ ಚೆನ್ನಾಗಿ ಕಲಿತರು. ಜೊತೆಗೆ ತಮಿಳು, ತೆಲುಗು, ಮರಾಠಿ ಮತ್ತು ಹಿಂದೂಸ್ಥಾನಿ ಭಾಷೆಗಳ ಪರಿಚಯವೂ ಚೆನ್ನಾಗಿತ್ತು. ಅವರ ಮದುವೆ ನಾಚಾರಮ್ಮ ಎಂಬಾಕೆಯ ಜೊತೆ ನೆರವೇರಿತ್ತು. ಆಕೆಯನ್ನು ತಾಚಮ್ಮ ಎಂದೂ ಕರೆಯಲಾಗುತ್ತಿತ್ತು. ಆಕೆ ಅಮೃತ ಮಹಲ್ ಇಲಾಖೆಯ ಪ್ರಧಾನ ದರೋಗ ಹುದ್ದೆಯಲ್ಲಿ ಸೇವೆ ಸಲ್ಲಿಸುತ್ತಿದ್ದ ವೆಂಕುರಾವ್ ಅಥವಾ ವೆಂಕಟರಾಮಯ್ಯ ಅವರು ಪುತ್ರಿ.

ವೆಂಕಟಾಚಾರ್ ಅವರ ಸಾರ್ವತ್ರಿಕ ಜೀವನ 20ನೆ ವರ್ಷದಲ್ಲಿಯೇ ಸಾರ್ವಜನಿಕ ಪಶು ಇಲಾಖೆಯಲ್ಲಿ ಹದಿನೇಳೂವರೆ ರೂಪಾಯಿ ಸಂಬಳದ ಮೇಲೆ ಹುಣಸೂರಿನಲ್ಲಿ ಪ್ರಾರಂಭವಾಯಿತು. ಅವರು ಈ ಹುದ್ದೆಯಲ್ಲಿ ಹನ್ನೊಂದು ವರ್ಷ ಸೇವೆ ಮಾಡಿದ ನಂತರ ಉಪ ಲೆಕ್ಕಾಧಿಕಾರಿಯಾಗಿ ಮಸಲೀಪಟ್ಟಣದ ಕಮೀಷನರ್ ಇಲಾಖೆಗೆ ವರ್ಗಾವಣೆಯಾಗಬೇಕಾಯಿತು. ನಂತರ ಮಹಾರಾಜರ ಆಡಳಿತ ಪ್ರದೇಶಗಳ ಕಮೀಷನರ್ ಸರ್ ಮಾರ್ಕ್ ಕಬ್ಬನ್ ಅವರ ಮಿಲಿಟರಿ ಸಹಾಯಕರ ಕಚೇರಿಯಲ್ಲಿ ಮುಖ್ಯ ಗುಮಾಸ್ತರಾದರು. ಮಧ್ಯೆ ಮಧ್ಯೆ ಅವರು ಕಬ್ಬನ್ ಅವರ ಕೆಳಗೆ ನೇರವಾಗಿಯೇ ಕೆಲಸ ಮಾಡಬೇಕಾಗುತ್ತಿತ್ತು. 9 ವರ್ಷ ಕಾಲ ಈ ಹುದ್ದೆಯಲ್ಲಿ ಸೇವೆ ಸಲ್ಲಿಸಿದ ಮೇಲೆ ಅವರಿಗೆ ಸವಾರ್ ಕಚೇರಿಯಲ್ಲಿ ಮುನೀಬ್ ಜಾಗಕ್ಕೆ ನೇಮಿಸಲಾಯಿತು. 300 ರೂ. ವೇತನದ ಮೇಲೆ ಇಲ್ಲಿ 8 ವರ್ಷಗಳು ಕರ್ತವ್ಯ ನಿರ್ವಹಿಸಿದ ಮೇಲೆ ಸವಾರ್ ಮತ್ತು ಬಾರ್ ಕಚೇರಿಯಲ್ಲಿ ಸಿವಿಲ್ ಭಕ್ಷಿಯಾಗಿ ಸುಮಾರು 9 ವರ್ಷಗಳು 400 ರೂ ವೇತನದ ಮೇಲೆ ಅಧಿಕಾರದಲ್ಲಿದ್ದರು. ಈ ಹುದ್ದೆಯಲ್ಲಿದ್ದಾಗಲೂ ಭಕ್ಷಿ ವೆಂಕಟಾಚಾರ್ ಹೆಚ್ಚಿನ ಶ್ರದ್ಧೆಯಿಂದ ಕಾರ್ಯ ನಿರ್ವಹಿಸಿ ಬ್ರಿಟಿಷ್ ಅಧಿಕಾರಿಗಳ ಮೆಚ್ಚುಗೆ ಪಡೆದುಕೊಂಡರು. ಅವರು ಅಲ್ಲಿ ಕೆಲಸ ಮಾಡುತ್ತಿದ್ದಾಗ ಮೈಸೂರು ಸೈನ್ಯದ ತುಕಡಿಗಳಲ್ಲಿ ಸಾಕಷ್ಟು ಬದಲಾವಣೆಗಳಾದವು. ವೆಂಕಟಾಚಾರ್ ಅವರಿಗೆ ಹಲವಾರು ಗಣ್ಯರ ಸಮಾರಂಭಗಳಿಗೆ ಆಹ್ವಾನ ಬರುತ್ತಿತ್ತು. ಅವರ ದಕ್ಷತೆಯನ್ನು ಗಮನಕ್ಕೆ ತೆಗೆದುಕೊಂಡು ವೆಂಕಟಾಚಾರ್ ಅವರ ಸೇವೆಯನ್ನು ಇನ್ನೂ ಎರಡು ವರ್ಷಗಳಿಗೆ ವಿಸ್ತರಿಸಲಾಯಿತು. ಒಟ್ಟು 37 ವರ್ಷಗಳ ಸೇವೆ ಸಲ್ಲಿಸಿ 1879ರಲ್ಲಿ ಅವರು ನಿವೃತ್ತರಾದರು. ನಿವೃತ್ತಿ ನಂತರ ಸುಮಾರು 25 ವರ್ಷಗಳು ಬದುಕಿ, ಶ್ರೀವೈಷ್ಣವರಾದ ಅವರು ಧಾರ್ಮಿಕ, ಆಧ್ಯಾತ್ಮಿಕ ಕಾರ್ಯಗಳಲ್ಲಿ ತೊಡಗಿಕೊಂಡಿದ್ದರು. ವ್ರತ ನಿಯಮಗಳನ್ನು ತಪ್ಪದೆ ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದರು.

ಸಾವು ಸಮೀಪಿಸುತ್ತಿದೆಯೆಂದು ಅರಿತ ಭಕ್ಷಿ ವೆಂಕಟಾಚಾರ್ ಸಾತ್ವಿಕ ಬದುಕಿಗೆ ಅಂತ್ಯ ಹೇಳುವ ಮುನ್ನ ಮಕ್ಕಳಿಗೆ ನೆಲದ ಮೇಲೆ ಬಿಳಿ ಬಟ್ಟೆಯನ್ನು ಹಾಸುವಂತೆ ಹೇಳಿ, ಅದರ ಮೇಲೆ ದರ್ಭೆಯನ್ನು ಹರಡುವಂತೆ ತಿಳಿಸಿದರು. ಅದರ ಮೇಲೆ ಮಲಗಿ ತೈತ್ತರೋಪನಿಷತ್ ಮತ್ತಿತರ ವೇದ, ಉಪನಿಷತ್ತುಗಳ ಪಠನವನ್ನು ಕೇಳುತ್ತಾ 1904ರ ಆಗಸ್ಟ್ ತಿಂಗಳ ಏಕಾದಶಿ ದಿನದಂದು ತಮ್ಮ 82ನೇ ವಯಸ್ಸಿನಲ್ಲಿ ಪರಮಪದವನ್ನು ಹೊಂದಿದರು. ಮಹಾರಾಜರ ಸರ್ಕಾರದಲ್ಲಿ ಹೆಚ್ಚಿನ ದಕ್ಷತೆ, ಸಾಮರ್ಥ್ಯದಿಂದ ಕೆಲಸ ಮಾಡಿ ತಾವು ಹೆಸರು ಪಡೆದಿದ್ದಲ್ಲದೆ, ರಾಜ್ಯಕ್ಕೂ ಹೆಸರು ತಂದಿದ್ದ ಭಕ್ಷಿ ಕಡಾಂಬಿ ವೆಂಕಟಾಚಾರ್ ಅವರಿಗೆ ಬೆಂಗಳೂರಿನ ತುಳಸೀತೋಟದಲ್ಲಿ ನಡೆದ ಸಾರ್ವಜನಿಕ ಸಭೆ ದಿವಾನರಾಗಿ ನಿವೃತ್ತರಾಗಿದ್ದ ಪಿ.ಎನ್.ಕೃಷ್ಣಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಶ್ರದ್ಧಾಂಜಲಿಯನ್ನು ಅರ್ಪಿಸಿತು.

ಹಿಂದೂ ಸ್ವಯಂ ಸೇವಕ ಸಂಘ



ನಾದಲಹರಿ
ಡಾ.ರಮಾ ವಿ. ಬೆಣ್ಣೂರ್
ಸಂಗೀತ ವಿಮರ್ಶಕರು
ಮೊ: 99452 82346



ಅಂದು ಮಗಳು ಬಂದು ಅಮ್ಮ, ಭಾನುವಾರ ನಾಕು ಗಂಟೆಗೆ ತಯಾರಾಗಿರು, ನಾವು ಆರ್‌ಎಸ್‌ಎಸ್‌ಗೆ ಹೋಗಬೇಕು ಎಂದು ಹೇಳಿದಾಗ, ಆಶ್ಚರ್ಯದಿಂದ ನನ್ನ ಕಿವಿಗಳು ನೆಟ್ಟಗಾದುವು. ಅಮೆರಿಕಾದಲ್ಲಿ ಆರೆಸ್ಸೆಸ್! ಭಾರತದ ರಾಷ್ಟ್ರೀಯ ಸ್ವಯಂಸೇವಕ ಸಂಘವು ವಿದೇಶಗಳಲ್ಲೆಲ್ಲ ತನ್ನ ಶಾಖಾವನ್ನು ಹೊಂದಿದೆ ಎಂಬುದನ್ನು ಕೇಳಿ ತಿಳಿದಿದ್ದೆನಾದರೂ ಈಗ ನಾನೆ ಅದರ ಒಂದು ಶಾಖಾಗೆ ಭೇಟಿ ನೀಡಲಿದ್ದೇನೆ ಎಂಬುದು ನಿಜಕ್ಕೂ ಮೈಮನಗಳಲ್ಲಿ ಪುಳಕ ತಂದಿತ್ತು. ಭಾನುವಾರಕ್ಕಾಗಿ ಕುತೂಹಲದಿಂದ ಕಾಯತೊಡಗಿದೆ.

ವಿದೇಶೀ ನೆಲದಲ್ಲಿ ಪ್ರಥಮ ಶಾಖೆಯು ಆರಂಭವಾದುದು 1947ರಲ್ಲಿ ಅದೂ ಕೀನ್ಯಾದಲ್ಲಿ. ಅಲ್ಲಿ ವಲಸೆ ಹೋಗಿದ್ದ ಭಾರತೀಯರು ತಮ್ಮ ಸಂಸ್ಕೃತಿಯ ಚಟುವಟಿಕೆಗಳನ್ನು ಮುಂದುವರೆಸಲೆಂದು ಅಲ್ಲಿ ಶಾಖೆಯನ್ನು ಆರಂಭಿಸಲು ಇಚ್ಛಿಸಿದರು. ಭಾರತದಲ್ಲಿ ಶ್ರೀ ಕೇಶವ ಹೆಡಗೇವಾರರಿಂದ 1925ರಿಂದ ಸ್ಥಾಪಿಸಲ್ಪಟ್ಟ ರಾಷ್ಟ್ರೀಯ ಸ್ವಯಂ ಸೇವಕ ಸಂಘದಿಂದ ಸ್ಪೂರ್ತಿಯನ್ನು ಪಡೆದ ಹಿಂದೂ ಸ್ವಯಂ ಸೇವಕ ಸಂಘವು ವಿದೇಶ ಗಳಲ್ಲಿ ಇದೇ ಹೆಸರಿನಿಂದ ಚಾಲ್ತಿಯಲ್ಲಿದೆ. ಅದರ ಚಟುವಟಿಕೆಗಳಾದ ಶಾರೀರಿಕ, ಬೌದ್ಧಿಕ ಮತ್ತು ಸೇವಾ ಕಾರ್ಯಕ್ರಮಗಳೆಲ್ಲವೂ ಭಾರತದಲ್ಲಿ ಇರುವ ಮೂಲ ಸಂಘವನ್ನೇ ಅನುಸರಿಸಲು ಯತ್ನಿಸುತ್ತವೆ.

ಈಗ ನಾನು ಪರಿಚಯ ಮಾಡಿಸಲಿರುವುದು ವಾಷಿಂಗ್ಟನ್ ಸ್ಟೇಟಿನ ಒಂದು ಊರಾದ ಸಿಯಾಟಲ್ ಎಂಬ ನಗರದಲ್ಲಿ ಇರುವ ಶಾಖಾದ ಬಗ್ಗೆ. ಅಮೆರಿಕಾದಲ್ಲಿ ಹಿಂದೂ ಸ್ವಯಂ ಸೇವಕ ಸಂಘವು 1989ರಲ್ಲಿ ತನ್ನ ಚಟುವಟಿಕೆಗಳನ್ನು ಪ್ರಥಮವಾಗಿ ಆರಂಭಿಸಿತು. ಹಿಂದೂ ಸ್ವಯಂ ಸೇವಕ ಸಂಘ ಯುಎಸ್‌ಎ ಎಂದು ತನ್ನನ್ನು ಕರೆದುಕೊಳ್ಳುವ ಇವು ಅಂದಿನಿಂದ ಮೊದಲುಗೊಂಡು ಅಮೆರಿಕಾದ ಅನೇಕ ರಾಜ್ಯಗಳಲ್ಲಿ ತನ್ನ ಸಮೂಹ ಸೇವೆಯನ್ನು ಒಳಗೊಂಡಂತೆ ಸಂಘದ ಹಲವಾರು ಚಟುವಟಿಕೆಗಳನ್ನು ನಡೆಸಿಕೊಂಡು ಬರುತ್ತಿವೆ. ಈಗಾಗಲೇ ಎಂಟು ಶಾಖೆಗಳನ್ನು ಹೊಂದಿರುವ ಸಿಯಾಟಲ್ಲಿನ ಬೆಲ್ವ್ಯೂ ಎಂಬಲ್ಲಿ ಇರುವ ಈ ಶಾಖಾ ಸುಮಾರು ಹತ್ತು ಹನ್ನೆರಡು ಕುಟುಂಬಗಳನ್ನು ಸದಸ್ಯರನ್ನಾಗಿ ಹೊಂದಿ, ಕಡಿಮೆ ಎಂದರೂ ಸುಮಾರು ನಲವತ್ತು ಮಂದಿ ಪ್ರತೀ ಭಾನುವಾರ ಇಲ್ಲಿಯ ವಿಶಾಲವಾದ ಸಾಯಿ ಮಂದಿರ್‌ನಲ್ಲಿ ಭೇಟಿ ಆಗುತ್ತಾರೆ. ಅಮೆರಿಕಾದಂತಹ ದೇಶಗಳಲ್ಲಿ ಈ ರೀತಿಯ ಚಟುವಟಿಕೆಗಳನ್ನು ನಡೆಸಿಕೊಂಡು ಹೋಗುವುದು ಸುಲಭ ಕಾರ್ಯ ಖಂಡಿತಾ ಅಲ್ಲ. ಅಲ್ಲಿ ಉದ್ಯೋಗದಲ್ಲಿ ಇರುವ ಅತ್ಯಂತ ಭೀಕರವಾದ ಒತ್ತಡ, ಸಾಂಸಾರಿಕ ಕಾರ್ಯದ ಒತ್ತಡಗಳು ಇಲ್ಲಿ ಮನೆಗೆಲಸದವರು ಇರುವುದಿಲ್ಲ. ಪ್ರತಿಯೊಂದನ್ನೂ ನಾವೇ ಮಾಡಿಕೊಳ್ಳಬೇಕು. ಮಕ್ಕಳನ್ನು ಶಾಲೆಯೇತರ ಚಟುವಟಿಕೆಗಳಿಗಾಗಿ ಕರೆದೊಯ್ಯುವ ಕರ್ತವ್ಯ ಹೀಗೆ ಒಬ್ಬ ವ್ಯಕ್ತಿ, ಅದು ಗಂಡಸೇ ಇರಲಿ, ಹೆಂಗಸೇ ಇರಲಿ ಪ್ರತಿ ಒಬ್ಬರಿಗೂ ಕೈತುಂಬ, ಮೈತುಂಬ ಕೆಲಸ ಮತ್ತು ಅದರ ಒತ್ತಡ ಇರುತ್ತದೆ. ಅಂತಹುದರಲ್ಲಿ ತಮ್ಮ ಬೇರುಗಳನ್ನು ಮರೆಯದೇ, ಜತನವಾಗಿ ಇಡುವ, ಮತ್ತು ತಮ್ಮ ಮುಂದಿನ ಪೀಳಿಗೆಗೂ ಅದನ್ನು ರವಾನಿಸುವ, ಸ್ವದೇಶದಿಂದ ದೂರವಿದ್ದರೂ ಅದರ ನೆನಪನ್ನು ಹಸಿರಾಗಿಸಿಕೊಳ್ಳಲು ನೆರವಾಗುವ ಇಂತಹ ಚಟುವಟಿಕೆಗಳನ್ನು ಮಾಡಲು ಉದ್ಯುಕ್ತರಾಗುವುದು ನಿಜಕ್ಕೂ ಸವಾಲಿನ ಕೆಲಸ ಎಂಬುವುದು ಅಲ್ಲಿನ ಬದುಕನ್ನು ನಿಕಟವಾಗಿ ಕಂಡಿರುವ ಎಲ್ಲರೂ ಒಪ್ಪುವ ಮಾತು. ಅಂತಹುದರಲ್ಲಿ ಕೆಲವು ಕುಟುಂಬಗಳು ಶಾಖೆ ಕೆಲಸವೂ ನಮ್ಮ ಕರ್ತವ್ಯದ ಒಂದು ಭಾಗ ಎಂದು ತಿಳಿದು, ತಮ್ಮ ಚಟುವಟಿಕೆಗಳಲ್ಲಿ ಅದನ್ನೂ ಸೇರಿಸಿ ಕೊಂಡಿರುವುದು ಕೇವಲ ಅವರ ದೇಶ ಭಕ್ತಿಯ ದ್ಯೋತಕ ಎಂದೇ ನನ್ನ ಅನಿಸಿಕೆ.

ಈ ಶಾಖೆಯಲ್ಲಿ ಬೇರೆ ಬೇರೆ ವಯಸ್ಸಿನವರಿಗಾಗಿ ಬೇರೆ ಬೇರೆ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡಿರುವುದನ್ನು ಕಾಣಬಹುದು. ಭಾರತದಲ್ಲಿರುವಂತೆ ಚಿಕ್ಕ ಮಕ್ಕಳನ್ನು ನೋಡಿಕೊಳ್ಳಲು ಹಿರಿಯರು ಯಾರೂ ಅವರ ಮನೆಯಲ್ಲಿ ಇರುವುದಿಲ್ಲ. ಹೀಗಾಗಿ ಯಾವುದೇ ವಯಸ್ಸಿನ ಮಕ್ಕಳನ್ನೂ ಶಾಖೆಗೆ ಕರೆದುಕೊಂಡು ಬರುವುದು ಅಲ್ಲಿ ಅನಿವಾರ್ಯ. ಪುಟ್ಟ ಮಕ್ಕಳಿಗಾಗಿ, ಹದಿಹರೆಯದವರಿಗಾಗಿ ಮತ್ತು ಪ್ರೌಢರಿಗಾಗಿ ಮೂರು ವಯೋಮಾನದವರಿಗಾಗಿ ಇಲ್ಲಿಯ ಆಟ–ಪಾಠಗಳು ನಿಯುಕ್ತವಾಗಿರುತ್ತವೆ. ಇಲ್ಲಿ, ಶಾರೀರಿಕ ಮತ್ತು ಬೌದ್ಧಿಕ ಎಂಬ ಎರಡು ರೀತಿಯ ವಿಭಜನೆಯನ್ನು ಕಾಣಬಹುದು. ಶಾರೀರಿಕ ಚಟುವಟಿಕೆಗಳಲ್ಲಿ ಕಾರ್ಯಕರ್ತರು ಸೂರ್ಯ ನಮಸ್ಕಾರ, ಯೋಗಾಸನ ಮತ್ತು ಹಲವಾರು ರೀತಿಯ ಆಟಗಳನ್ನು ಆಡುವುದು ಸೇರಿರುತ್ತದೆ. ಬೌದ್ಧಿಕ ಚಟುವಟಿಕೆಯು ಪ್ರಸ್ತುತ ವಿಷಯಗಳ ಬಗ್ಗೆ ಚರ್ಚೆ, ವ್ಯಕ್ತಿತ್ವ ವಿಕಸನ, ಇತಿಹಾಸ, ಉತ್ಸವಗಳ ಪ್ರಾಮುಖ್ಯತೆ ಇತ್ಯಾದಿ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತವೆ. ಅಷ್ಟೇ ಅಲ್ಲದೆ ಅಮೃತವಾಚನ, ಸುಭಾಷಿತಗಳ ವ್ಯಾಖ್ಯಾನದಿಂದಾಗಿ ಸದಸ್ಯರಲ್ಲಿ ಒಳ್ಳೆಯ ಮೌಲ್ಯಗಳು ಮೈಗೂಡುತ್ತವೆ. ಬೌದ್ಧಿಕ ಒಳನೋಟಗಳು ಲಭ್ಯವಾಗುತ್ತವೆ. ಅಲ್ಲದೆ ಶಕ್ತಿಯುತವಾದ ಹೇಳಿಕೆ ಮತ್ತು ಪದ್ಯಗಳಿಂದ ನಮ್ಮ ಸಮಾಜವನ್ನು ರೂಪಿಸಿದ ಮಹನೀಯರ ಬಗೆಗೂ ತಿಳುವಳಿಕೆ ಉಂಟಾಗುತ್ತದೆ.

ಮಕ್ಕಳ ಬೌದ್ಧಿಕ ಚಟುವಟಿಕೆಯಲ್ಲಿ ಅವರ ವಯಸ್ಸಿಗೆ ಅನುಗುಣವಾಗಿ ನಮ್ಮ ದೇಶದ ಮಹಾನ್ ವ್ಯಕ್ತಿಗಳನ್ನು ಕುರಿತಾದ ಕತೆಗಳನ್ನು ಹೇಳುವುದು, ಕಲೆಗೆ ಸಂಬಂಧಿಸಿದ ಕೈಗೆಲಸಗಳು, ವಿವಿಧ ಸ್ಥಳಗಳು ಮತ್ತು ಕಾರ್ಯಕ್ರಮಗಳ ಬಗ್ಗೆ ಪ್ರಶ್ನೋತ್ತರಗಳ ಮೂಲಕ ಅಥವಾ ಕ್ವಿಜ್ ಮೂಲಕ ಆಸಕ್ತಿ ಉಂಟಾಗುವಂತೆ ಮಾಡಲಾಗುತ್ತದೆ. ಇದರಿಂದ ಅವರ ಕಲಿಕಾ ಶಕ್ತಿಯೂ ಹೆಚ್ಚುತ್ತದೆ. ಭಾರತದ ಬಗ್ಗೆ ಅವರಿಗೆ ಗೌರವ ಹುಟ್ಟುವುದರಲ್ಲಿ ಸಂಶಯವಿಲ್ಲ. ಈ ಎಲ್ಲ ಚಟು ವಟಿಕೆಗಳನ್ನು ಕಾರ್ಯಕರ್ತರು ಮುಂಚಿತವಾಗಿಯೇ ಆಲೋಚಿಸಿ, ತಯಾರು ಮಾಡಿಕೊಂಡಿರುತ್ತಾರೆ. ಅದಕ್ಕೆ ತಕ್ಕಂತೆ ಶಾರೀರಿಕ ಟೋಳಿ, ಬೌದ್ಧಿಕ ಟೋಳಿ ಮತ್ತು ಬಾಲ ಟೋಳಿಯು ತನ್ನ ಪಾಲಿನ ಕೆಲಸವನ್ನು ನಿರ್ವಹಿಸುತ್ತದೆ.

ಇಷ್ಟೆಲ್ಲವನ್ನೂ ಮಾಡುವುದು ಭಾನುವಾರಗಳ ಸಂಜೆಯಲ್ಲಿ. ಈ ರೀತಿಯ ಶಾಖಾ ಕೆಲಸಗಳಲ್ಲದೆ ಕಾರ್ಯಕರ್ತರು ಸೇವಾ ಕಾರ್ಯಕ್ರಮದಲ್ಲೂ ಭಾಗಿ ಆಗುತ್ತಾರೆ. ದೀಪಾವಳಿಯಂತಹ ವಿಶೇಷ ಹಬ್ಬದ ದಿನಗಳಲ್ಲಿ ಅನಾಥರಿಗೆ ಊಟವನ್ನು ಒದಗಿಸು ವುದು, ರಸ್ತೆಯ ಸ್ವಚ್ಛತೆ ಮಾಡುವುದು, ಗೋಶಾಲೆಗಳನ್ನು ಸ್ವಚ್ಛಗೊಳಿಸುವುದು ಇತ್ಯಾದಿ. ಇದನ್ನು ಮತ್ತಷ್ಟು ವಿವರಿಸುವುದಾದರೆ, ಹಬ್ಬಗಳಂದು ಪರಿಚಯದ ಭಾರತೀಯರ ಮನೆಗೆ ಹೋಗಿ ಅವರಿಂದ ಆಹಾರವನ್ನು ತೆಗೆದುಕೊಂಡು ಫುಡ್ ಬ್ಯಾಂಕ್‌ಗೆ ಹೋಗಿ ನೀಡುತ್ತಾರೆ. ಅವರು, ಅಲ್ಲಿಯ ನಿರಾಶ್ರಿತರಿಗೆ, ಅನಾಥರಿಗೆ ಅದನ್ನು ತಲುಪಿಸುವ ವ್ಯವಸ್ಥೆಯನ್ನು ಮಾಡುತ್ತಾರೆ. ಅಮೆರಿಕದ ಕೆಲವು ಹೈವೇಗಳಲ್ಲಿ ಓಡಾಡುವಾಗ, ಅಡಾಪ್ಟರ್ ರೋಡ್ ಎಂಬ ಫಲಕಗಳು ಕಂಡುಬರುತ್ತವೆ. ಅಂದರೆ, ಅವುಗಳನ್ನು ನೀವು ದತ್ತು ಸ್ವೀಕರಿಸಬಹುದು ಎಂದರ್ಥ. ಅದು ಹೈವೇ ರಸ್ತೆ ಆಗಿದ್ದರೆ, ದೊಡ್ಡ ದೊಡ್ಡ ಕಾರ್ಪೊರೇಟ್ ಕಂಪನಿಗಳು ಅವುಗಳ ನಿರ್ವಹಣಾ ಜವಾಬ್ದಾರಿಯನ್ನು ಹೊತ್ತು, ಇತರ ಕಂಪನಿಗಳಿಗೆ ಅವುಗಳ ಸ್ವಚ್ಛತಾ ಕೆಲಸವನ್ನು ನಿರ್ವಹಿಸಲು ಹೇಳಬಹುದು. ಆದರೆ ಈ ಸ್ವಯಂ ಸೇವಕರು ಊರಿನಲ್ಲಿರುವಂತಹ ಸಣ್ಣ ರಸ್ತೆಗಳನ್ನು ಆಯ್ದುಕೊಂಡು, ಅದರ ಸ್ವಚ್ಛತೆಯನ್ನು ಮಾಡುತ್ತಾರೆ. ಅಮೆರಿಕದ ಶಾಲೆಗಳಲ್ಲಿ ವರ್ಷಕ್ಕಾಗುವಷ್ಟು ಓದಿನ, ಅದರಲ್ಲೂ ಬರವಣಿಗೆಯ ಸಾಮಗ್ರಿಗಳನ್ನು ಪೋಷಕರು ಶಾಲೆಯ ಆರಂಭದಲ್ಲೇ ಶಾಲೆಗೆ ಕೊಟ್ಟುಬಿಡಬೇಕಾದ ಪದ್ಧತಿ ಇದೆ. ಸಾಮಾನ್ಯವಾಗಿ ಒಂದೇ ರೀತಿಯ ಪರಿಕರಗಳನ್ನು ಪೋಷಕರು ನೀಡಿರುತ್ತಾರೆ. ಅದನ್ನು ವರ್ಷವಿಡೀ ಶಿಕ್ಷಕರು ಇಡೀ ತರಗತಿಗೆ ಹಂಚುವ ಕೆಲಸವನ್ನು ನೋಡಿಕೊಳ್ಳುತ್ತಾರೆ. ಅದನ್ನು ನೀಡಲಾಗದ ಪೋಷಕರೂ ಇರಬಹುದಲ್ಲ? ಅಂತಹ ವರಿಗಾಗಿ ಸಹಾಯ ಮಾಡಲು ಈ ಸ್ವಯಂ ಸೇವಕರು ಮುಂದಾಗುತ್ತಾರೆ. ಸದಸ್ಯರೆಲ್ಲರೂ ಸೇರಿ ತಮಗೆ ಆದಷ್ಟು ಹಣವನ್ನು ನೀಡುತ್ತಾರೆ. ಅದರಿಂದ ಕೊಂಡ ಸಾಮಗ್ರಿ ಗಳನ್ನು ಶಾಲೆಗೆ ಸೇರಿದ ಒಂದು ಸಹಾಯಕ ವಿಭಾಗಕ್ಕೆ ನೀಡಲಾಗುತ್ತದೆ. ಅವರು ಅದನ್ನು ಪ್ರಾಮಾಣಿಕವಾಗಿ ಅವಶ್ಯಕತೆ ಇರುವ ವಿದ್ಯಾರ್ಥಿ ಗಳಿಗೆ ತಲುಪಿಸುವ ಜವಾಬ್ದಾರಿಯನ್ನು ಹೊತ್ತುಕೊಳ್ಳುತ್ತಾರೆ. ಇದೆಲ್ಲವೂ ಪರಸ್ಪರ ನಂಬಿಕೆ ಮೇಲೆ ನಡೆಯುತ್ತದೆ. ಸಹಾಯವನ್ನು ಪಡೆದವರು ಯಾರೆಂಬುದನ್ನು ಕೊಟ್ಟವರು ತಿಳಿಯಬೇಕಿಲ್ಲ ಅಲ್ಲವೇ?

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ನಗರಗಳ ಸಮಗ್ರ ಅಭಿವೃದ್ಧಿಗೆ ಟಿಡಿಆರ್ ಅತ್ಯಂತ ಪೂರಕ ಪರಿಹಾರ

● ಯೋಜನಾ ವಿಭಾಗದ ಹೆಚ್ಚುವರಿ ನಿರ್ದೇಶಕ ಎಂ.ಸಿ.ಶಶಿಕುಮಾರ್ ಅಭಿಮತ
● ನರೆಡ್ಕೊ ವತಿಯಿಂದ ಟಿಡಿಆರ್, ಬಫರ್ ವಲಯ ಕುರಿತ ಜಾಗೃತಿ ಕಾರ್ಯಕ್ರಮ



ರಾಜ್ಯ ನಗರ ಮತ್ತು ಗ್ರಾಮೀಣ ಯೋಜನಾ ವಿಭಾಗದ ಹೆಚ್ಚುವರಿ ನಿರ್ದೇಶಕ ಎಂ.ಸಿ.ಶಶಿಕುಮಾರ್ ಜ್ಯೋತಿ ಬೆಳಗಿಸುವ ಮೂಲಕ ಟಿಡಿಆರ್ ಮತ್ತು ಬಫರ್ ವಲಯ ಕುರಿತ ಜಾಗೃತಿ ಕಾರ್ಯಕ್ರಮ ಉದ್ಘಾಟಿಸಿದರು.

ಮೈಸೂರು, ಮೇ 2(ವಿವಿಹೆಚ್)– ರಾಜ್ಯ ಸರ್ಕಾರ ಜಾರಿಗೆ ತಂದಿರುವ ಟಿಡಿಆರ್ (ವರ್ಗಾವಣೆ ಮಾಡಬಹುದಾದ ಹಕ್ಕುಗಳು) ಯೋಜನೆಯಿಂದ ಭೂ ಸಂತ್ರಸ್ತರಿಗೆ ಹಣಕಾಸಿನ ಪರಿಹಾರದ ಬದಲಿಗೆ ಅಭಿವೃದ್ಧಿಯ ಹಕ್ಕು ನೀಡಿದಂತಾಗುತ್ತದೆ ಎಂದು ರಾಜ್ಯ ನಗರ ಮತ್ತು ಗ್ರಾಮೀಣ ಯೋಜನಾ ವಿಭಾಗದ ಹೆಚ್ಚುವರಿ ನಿರ್ದೇಶಕ ಎಂ.ಸಿ.ಶಶಿಕುಮಾರ್ ತಿಳಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ರಾಷ್ಟ್ರೀಯ ರಿಯಲ್ ಎಸ್ಟೇಟ್ ಡೆವಲಪ್ಮೆಂಟ್ ಕೌನ್ಸಿಲ್ (ನರೆಡ್ಕೊ) ವತಿಯಿಂದ ಶನಿವಾರ ಆಯೋಜಿಸಿದ್ದ ಟಿಡಿಆರ್ ಮತ್ತು ಬಫರ್ ವಲಯ ಕುರಿತ ಜಾಗೃತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮೈಸೂರು ನಗರ ಸೇರಿದಂತೆ ಎಲ್ಲಾ ನಗರ, ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಪೂರಕವಾಗಿ ರಾಜ್ಯ ಸರ್ಕಾರ ಈ ಟಿಡಿಆರ್ ಯೋಜನೆಯನ್ನು ಸಿದ್ಧಪಡಿಸಿದೆ. ನಗರಗಳ ಸಮಗ್ರ ಅಭಿವೃದ್ಧಿಗೆ ಟಿಡಿಆರ್ ಪರಿಹಾರವಾಗಿದೆ ಎಂದು ಅವರು ಅಭಿಪ್ರಾಯಿಸಿದರು.

ಯಾವುದೇ ನಗರದ ಯೋಜಿತ ಬೆಳವಣಿಗೆಗೆ ನಗರ ಮಹಾ ಯೋಜನೆಯ ಅಗತ್ಯವಿದೆ. ಆದರೆ ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಆಳ್ವಿಕೆಗೆ ಒಳಪಟ್ಟ 332 ನಗರಗಳಿವೆ. ಅವುಗಳ ಪೈಕಿ 176 ನಗರಗಳಿಗೆ ಮಾತ್ರ ಮಹಾನಗರ ಯೋಜನೆಗಳನ್ನು ರೂಪಿಸಿದ್ದೇವೆ. ಇನ್ನು 108 ನಗರಗಳಿಗೆ ಸ್ಥಳೀಯ ಯೋಜನಾ ಪ್ರದೇಶಗಳನ್ನಾಗಿಯೂ ಗುರುತಿಸಲು ಸಾಧ್ಯವಾಗಿಲ್ಲ. ಹಾಗೆಯೇ 41 ಪಟ್ಟಣಗಳಿಗೆ ಮಾಸ್ಟರ್ ಪ್ಲಾನ್ ಮಾಡಬೇಕಿದೆ. 2006ರಲ್ಲಿ ರಾಜ್ಯ ಸರ್ಕಾರ ತಂದ ಈ ಟಿಡಿಆರ್ ಯೋಜನೆ ಬೆಂಗಳೂರು ಮತ್ತು ಮಂಗಳೂರಿನಲ್ಲಿ ಮಾತ್ರವೇ ಜಾರಿಯಲ್ಲಿದೆ ಎಂದು ವಿವರಿಸಿದರು.

ಟಿಡಿಆರ್‌ನಲ್ಲಿ ಭೂಸ್ವಾಧೀನಕ್ಕೆ ಹಣ ವ್ಯಯಿಸದೇ ಜಾಗ ವಶಕ್ಕೆ ಪಡೆದು ಅಭಿವೃದ್ಧಿಪಡಿಸಲು ಅವಕಾಶ ಇದೆ. ಇಲ್ಲಿ ಜಮೀನು ಕಳೆದುಕೊಂಡವರಿಗೆ ಸರ್ಕಾರದಿಂದ ಕೆಲವು ಹಕ್ಕು ಸಿಗಲಿದೆ. ರಸ್ತೆ ಅಗಲೀಕರಣ ಸೇರಿದಂತೆ ಹೊಸ ಬಡಾವಣೆಗಳ ನಿರ್ಮಾಣ, ಯೋಜನೆಗಳಿಗೆ ಭೂಮಿ ಪಡೆಯುವುದು ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳಿಗೆ ಇದರಿಂದ ಅನಕೂಲವಾಗಲಿದೆ ಎಂದರು.


ಮೈಸೂರು ನಗರದಲ್ಲಿ ಸಿಐಟಿಬಿ ಮೂಲಕ ನಗರ ಮಹಾ ಯೋಜನೆಯು ಅನುಷ್ಠಾನಕ್ಕೆ ಬಂದಿತು. ಇದರಿಂದ ಮೈಸೂರು ನಗರವು ವ್ಯವಸ್ಥಿತವಾಗಿ ಅಭಿವೃದ್ಧಿಯಾಗುತ್ತಿದೆ. ಮಹಾಯೋಜನೆ ಅಂಗವಾಗಿ ನಗರದ 100 ಪ್ರಮುಖ ರಸ್ತೆಗಳ ವಿಸ್ತರಣೆಗೆ ಪ್ರಸ್ತಾವ ಸಲ್ಲಿಸಲಾಗಿದೆ ಎಂದರು.

ಹೊಸ ಬಡಾವಣೆಗಳನ್ನು ನಿರ್ಮಿಸಿ ನೂರಾರು ನಿವೇಶನಗಳನ್ನು ಹಂಚಿಕೆ ಮಾಡಿ ಮೈಸೂರು ನಗರವನ್ನು ಅಭಿವೃದ್ಧಿ ಮಾಡುವುದಕ್ಕಿಂತ ವರ್ಟಿಕಲ್ ಮಾದರಿಯಲ್ಲಿ ಮೈಸೂರು ನಗರವನ್ನು ಅಭಿವೃದ್ಧಿ ಪಡಿಸುವುದು ಉತ್ತಮ ಎಂದೂ ಈ ವೇಳೆ ಸಲಹೆ ನೀಡಿದರು.

ಬೆಂಗಳೂರು ಮತ್ತು ಮಂಗಳೂರಿನಲ್ಲಿ ಟಿಡಿಆರ್ ಅನ್ನು ಜಾರಿಗೊಳಿಸಿರುವಂತೆ ಮೈಸೂರು ನಗರದಲ್ಲಿಯೂ ಟಿಡಿಆರ್ ಜಾರಿಗೊಳಿಸಲು ಕ್ರಮವಹಿಸಬೇಕು ಎಂದು ನಿರ್ಣಯ ಕೈಗೊಂಡು ಸರ್ಕಾರಕ್ಕೆ ಸಲ್ಲಿಸಲಾಗುವುದು ಎಂದು ನರೆಡ್ಕೋ ಮೈಸೂರು ವಿಭಾಗದ ಉಪಾಧ್ಯಕ್ಷ ಎ.ಪಿ.ನಾಗೇಶ್ ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ನರೆಡ್ಕೋ ಮೈಸೂರು ಅಧ್ಯಕ್ಷ ಡಾ.ಎಂ.ಡಿ.ರಾಘವೇಂದ್ರ ಪ್ರಸಾದ್, ಛೇರ್ಮನ್ ವಿ.ಸಿ.ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಪಿ.ಎಸ್.ಗಗನ್‌ದೀಪ್, ಖಜಾಂಚಿ ಡಾ.ಎಸ್.ಎಚ್.ಜಗದೀಶ್, ಜಂಟಿ ಕಾರ್ಯದರ್ಶಿ ಪಿ.ನಂಜುಂಡ ಸ್ವಾಮಿ ಉಪಸ್ಥಿತರಿದ್ದರು.

ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ಡಾ.ಆರ್.ಬಾಲಸುಬ್ರಮಣ್ಯಂ ನೇಮಕ



ಮೈಸೂರು,ಮೇ 2(ಪಿಎಂ)– ನೀತಿ ಆಯೋಗದ ಪೂರ್ಣಾವಧಿ ಸದಸ್ಯರಾಗಿ ಸ್ವಾಮಿ ವಿವೇಕಾನಂದ ಯೂತ್ ಮೂವ್‌ಮೆಂಟ್ ಸಂಸ್ಥಾಪಕ ಅಧ್ಯಕ್ಷ ಡಾ.ಆರ್.ಬಾಲಸುಬ್ರಮಣ್ಯಂ ಅವರನ್ನು ಕೇಂದ್ರ ಸರ್ಕಾರ ನೇಮಿಸಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು, ದೇಶದ ಆಡಳಿತ ವ್ಯವಸ್ಥೆಯ ಸುಧಾರಣೆ ಮತ್ತು ನೀತಿ ನಿಯಮಗಳಲ್ಲಿ ಪ್ರಮುಖ ಪಾತ್ರ ವಹಿಸುವ ನೀತಿ ಆಯೋಗಕ್ಕೆ ಸ್ವಯಂ ಸೇವಾ ಕ್ಷೇತ್ರದಲ್ಲಿ ಹಲವು ದಶಕಗಳಿಂದ ಕಾರ್ಯನಿರ್ವಹಿಸುತ್ತಿರುವ ಬಾಲಸುಬ್ರಮಣ್ಯಂ ಅವರನ್ನು ಪೂರ್ಣಾವಧಿಗೆ ಸದಸ್ಯರಾಗಿ ನೇಮಕ ಮಾಡಿದೆ.

ಈ ಹಿಂದೆ ಬಾಲಸುಬ್ರಮಣ್ಯಂ ಅವರು ಮಿಷನ್ ಕರ್ಮಯೋಗಿ ಕ್ಷಮತಾ ವಿಕಾಸ ಆಯೋಗದ ಸದಸ್ಯರಾಗಿ ಐದು ವರ್ಷ ಸೇವೆ ಸಲ್ಲಿಸಿದ್ದರು. ಮೈಸೂರು ಮೂಲದ ಡಾ.ಆರ್.ಬಾಲಸುಬ್ರಮಣ್ಯಂ ಅವರ ಜೊತೆಗೆ ಡಾ.ಜೋರಾಮ್ ಅನಿಯಾ ಅವರನ್ನು ಸಹ ಪೂರ್ಣಾವಧಿ ಸದಸ್ಯರಾಗಿ ನೇಮಕ ಮಾಡಲಾಗಿದೆ. ನೂತನ ಸದಸ್ಯರನ್ನು ಪ್ರಧಾನಿ ನರೇಂದ್ರ ಮೋದಿಯವರು ತಮ್ಮ ಎಕ್ಸ್ ಖಾತೆಯಲ್ಲಿ ಅಭಿನಂದಿಸಿದ್ದಾರೆ.

ಬಾಲಸುಬ್ರಮಣ್ಯಂ ಹರ್ಷ: ಪ್ರಧಾನಿ ನರೇಂದ್ರ ಮೋದಿ ಅವರು ನೀತಿ ಆಯೋಗ ಸದಸ್ಯರಾಗಿ ನೇಮಕ ಮಾಡುವ ಮೂಲಕ ಸಮಾಜ ಸೇವಾ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹರನ್ನು ಗುರುತಿಸಿ ಅವಕಾಶ ಮಾಡಿಕೊಟ್ಟಿರುವುದು ಸಂತಸ ಉಂಟು ಮಾಡಿದೆ ಎಂದು ಅವರು ಹರ್ಷ ವ್ಯಕ್ತಪಡಿಸಿದ್ದಾರೆ. ಬಾಲಸುಬ್ರಮಣ್ಯಂ ಅವರು ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಅವರ ಅಳಿಯ.

ಭುಗತಗಳ್ಳಿಯಲ್ಲಿ ಬುದ್ಧ ಜಯಂತಿ


ಭುಗತಗಳ್ಳಿ ಗ್ರಾಮದ ಡಾ.ಬಿ.ಆರ್.ಅಂಬೇಡ್ಕರ್ ಅವರ ಪ್ರತಿಮೆ ಎದುರು ಶುಕ್ರವಾರ ಮೇಣದಬತ್ತಿ ಬೆಳಗಿಸುವ ಮೂಲಕ ಭಗವಾನ್ ಬುದ್ಧರ 2570ನೇ ಜಯಂತಿಯನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಗ್ರಾಮದ ಯಜಮಾನರಾದ ಕೆಂಚಣ್ಣ, ಕರಿಯಪ್ಪಣ್ಣ, ಚೆನಕಾ, ಅಣ್ಣಯ್ಯ, ನೀಲಿಸಿದ್ದಯ್ಯ, ಅಹಿಂದ ಯುವ ಮುಖಂಡರಾದ ಸುನಿಲ್‌ಬುದ್ಧ, ರಾಚಾ, ಸಿದ್ದು, ಮಂಟಿ, ಚೇತನ್, ಸೃಜನ್, ನರಸಿಂಹಮೂರ್ತಿ, ಅಭಿ ಸೇರಿದಂತೆ ಗ್ರಾಮಸ್ಥರು ಭಾಗವಹಿಸಿದ್ದರು.

ಯುವ ಕಾಂಗ್ರೆಸ್‌ನ ಮೈಸೂರು ನಗರಾಧ್ಯಕ್ಷ ಸೈಯದ್ ಅಬ್ರಾರ್ ಸೇರಿದಂತೆ

ನಾಲ್ವರು ಜಿಲ್ಲಾ ಯುವ ಕಾಂಗ್ರೆಸ್ ಅಧ್ಯಕ್ಷರ ವಿರುದ್ಧ ಪಕ್ಷದಿಂದ ಶಿಸ್ತು ಕ್ರಮ

ಅವರವರ ಸ್ಥಾನಗಳಿಂದ ತಾತ್ಕಾಲಿಕ ಬಿಡುಗಡೆ


ಅಬ್ರಾರ್

ಮೈಸೂರು,ಮೇ 2(ಪಿಎಂ)– ಯುವ ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷರ ವಿರುದ್ಧ ಕಾಂಗ್ರೆಸ್ ಹೈಕಮಾಂಡ್ ಶಿಸ್ತು ಕ್ರಮ ಕೈಗೊಂಡಿದೆ.

ಯುವ ಕಾಂಗ್ರೆಸ್‌ನ ಮೈಸೂರು ನಗರಾಧ್ಯಕ್ಷ ಸೈಯದ್ ಅಬ್ರಾರ್, ಕೋಲಾರ ಜಿಲ್ಲಾಧ್ಯಕ್ಷ ಸೈಯದ್ ಅಫ್ರೀದ್ ಪಾಷಾ, ವಿಜಯನಗರ ಜಿಲ್ಲಾಧ್ಯಕ್ಷ ಅಶೋಕ್ ಬಿ.ನಾಯ್ಕ್ ಹಾಗೂ ತುಮಕೂರು ಜಿಲ್ಲಾಧ್ಯಕ್ಷ ನಿಖಿಲ್ ರಾಜ್ ಅವರನ್ನು ತಾತ್ಕಾಲಿಕವಾಗಿ ಜವಾಬ್ದಾರಿಯಿಂದ ಬಿಡುಗಡೆ ಮಾಡಲಾಗಿದೆ. ಇಂಡಿಯನ್ ಯೂತ್ ಕಾಂಗ್ರೆಸ್ ಈ ಆದೇಶ ಹೊರಡಿಸಿದ್ದು, ಈ ಅಧಿಸೂಚನೆ ತಕ್ಷಣವೇ ಜಾರಿಗೆ ಬರಲಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ. ನಿಮ್ಮ ಕರ್ತವ್ಯ ಮತ್ತು ಜವಾಬ್ದಾರಿಗಳಿಂದ ನಿಮ್ಮನ್ನು ತಾತ್ಕಾಲಿಕವಾಗಿ ಬಿಡುಗಡೆಗೊಳಿಸಲಾಗಿದೆ. ಏಕೆಂದರೆ ನಿಮಗೆ ನೀಡಿದ್ದ ಸ್ಥಾನಗಳಿಗೆ ಬಲವಾದ ನಾಯಕತ್ವ, ಸಾಂಸ್ಥಿಕ ಕಾರ್ಯಕ್ರಮಗಳ ಸಕ್ರಿಯ ಅನುಷ್ಠಾನ ಅಗತ್ಯ. ಆದರೆ ನಿಮಗೆ ವಹಿಸಿಕೊಟ್ಟ ಜವಾಬ್ದಾರಿಗಳನ್ನು ಸಮರ್ಪಕವಾಗಿ ನಿರ್ವಹಿಸುವಲ್ಲಿ ವಿಫಲತೆ ಕಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಕ್ರಮ ವಹಿಸಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಬಿಎಸ್‌ವೈ ಮನೆಗೆ ಬಿ.ಎಲ್.ಸಂತೋಷ್ ಭೇಟಿ



ಬೆಂಗಳೂರು, ಮೇ 2(ಕೆಎಂಶಿ)–ಬಿಜೆಪಿ ರಾಷ್ಟ್ರೀಯ ಸಂಘಟನಾ ಪ್ರಧಾನ ಕಾರ್ಯದರ್ಶಿ ಬಿ.ಎಲ್.ಸಂತೋಷ್ ಕರ್ನಾಟಕದ ಮಾಜಿ ಮುಖ್ಯಮಂತ್ರಿ, ಹಿರಿಯ ನಾಯಕ ಬಿ.ಎಸ್.ಯಡಿಯೂರಪ್ಪ ಮನೆಗೆ ಇಂದು ಸೌಹಾರ್ದ ಭೇಟಿ ನೀಡಿದರು.

ಪಂಚರಾಜ್ಯಗಳ ವಿಧಾನಸಭಾ ಚುನಾವಣಾ ಫಲಿತಾಂಶ ನಿರೀಕ್ಷೆಯಲ್ಲಿರುವ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಲಿದೆ ಎಂಬ ಆತ್ಮವಿಶ್ವಾಸವನ್ನು ಅವರು ಈ ಸಂದರ್ಭದಲ್ಲಿ ವ್ಯಕ್ತಪಡಿಸಿದರು. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಬಿಜೆಪಿ ಐತಿಹಾಸಿಕ ಗೆಲುವು ಸಾಧಿಸಲಿದೆ ಎಂಬುದಾಗಿ ಸಂತೋಷ್ ತಿಳಿಸಿದರೆಂದು ಯಡಿಯೂರಪ್ಪ ತಮ್ಮ ಜಾಲತಾಣ ಖಾತೆಯಲ್ಲಿ ಟ್ವೀಟ್ ಮಾಡಿದ್ದಾರೆ.

ಮನೆಗೆ ಸೌಹಾರ್ದಯುತ ಭೇಟಿ ನೀಡಿ ನನ್ನೊಂದಿಗೆ ಉಪಹಾರ ಸೇವಿಸಿದ ಸಂತೋಷ್, ಪಕ್ಷದ ಹಿರಿಯ ನಾಯಕರಲ್ಲಿ ಒಬ್ಬರಾಗಿದ್ದು, ದೇಶಾದ್ಯಂತ ಸಂಘಟನೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಅವರ ಸಂಘಟನಾ ಸಾಮರ್ಥ್ಯ ಮತ್ತು ಚತುರತೆ ಪಕ್ಷದ ಪ್ರತಿಯೊಬ್ಬ ಕಾರ್ಯಕರ್ತನಿಗೂ ಸ್ಫೂರ್ತಿಯ ಸೆಲೆಯಾಗಿದೆ.

ನನ್ನ 50 ವರ್ಷಗಳ ಯಶಸ್ವಿ ರಾಜಕೀಯ ಪಯಣಕ್ಕೆ ಸಂತೋಷ್ ಆತ್ಮೀಯ ಶುಭಾಶಯ ಸಲ್ಲಿಸಿದರು ಎಂದು ಯಡಿಯೂರಪ್ಪ ಟ್ವೀಟ್‌ನಲ್ಲಿ ತಿಳಿಸಿದ್ದಾರೆ.

ಭಾರೀ ಗಾಳಿ-ಮಳೆ ಹಿನ್ನೆಲೆ

ಮುಂಜಾಗ್ರತಾ ಕ್ರಮದ ಬಗ್ಗೆ ಪಾಲಿಕೆ ಆಯುಕ್ತರೊಡನೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಮಾಲೋಚನೆ


ಮೈಸೂರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರನ್ನು ಶನಿವಾರ ಅವರ ಕಚೇರಿಯಲ್ಲಿ ಭೇಟಿ ಮಾಡಿದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ಮಳೆಗಾಲದಲ್ಲಿ ಕೈಗೊಳ್ಳಬೇಕಾದ ಮುಂಜಾಗ್ರತಾ ಕ್ರಮಗಳ ಬಗ್ಗೆ ಕೆಲವು ಸಲಹೆ ನೀಡಿದರು.

ಮೈಸೂರು, ಮೇ 2(ಬಿಎಲ್‌ಯು)– ಮಳೆಗಾಲ ಆರಂಭವಾಗಿರುವ ಹಿನ್ನೆಲೆಯಲ್ಲಿ ಶಿಥಿಲ ಮರಗಳ ತೆರವು ಸೇರಿದಂತೆ ಇತರೆ ಮುಂಜಾಗ್ರತಾ ಕ್ರಮ ಕೈಗೊಳ್ಳುವಂತೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಅವರು ನಗರ ಪಾಲಿಕೆ ಆಯುಕ್ತ ಷೇಕ್ ತನ್ವೀರ್ ಆಸೀಫ್ ಅವರನ್ನು ಆಗ್ರಹಿಸಿದ್ದಾರೆ.

ಮೈಸೂರು ನಗರ ಪಾಲಿಕೆಯಲ್ಲಿ ಇಂದು ಆಯುಕ್ತರನ್ನು ಭೇಟಿ ಮಾಡಿ ಮಳೆಗಾಲದಲ್ಲಿ ಕೈಗೊಳ್ಳಬೇಕಾದ ಕ್ರಮಗಳ ಕುರಿತಂತೆ ಸಮಾಲೋಚನೆ ನಡೆಸಿದರು.

ಶಿಥಿಲವಾದ ಮರಗಳನ್ನು ತೆರವು ಮಾಡಬೇಕು, ದೊಡ್ಡ ಮೋರಿಗಳಲ್ಲಿ ಹೂಳೆತ್ತಬೇಕು, ಅಭದ್ರ ಗೋಡೆಗಳನ್ನು ಗುರುತಿಸಿ ಅವುಗಳನ್ನು ದುರಸ್ತಿ ಮಾಡಿಸಬೇಕು, ಅಸ್ಥಿರ ಮನೆಗಳನ್ನು ಗುರುತಿಸಿ, ಅವುಗಳನ್ನು ನೆಲಸಮಗೊಳಿಸುವಂತೆ ವಾರಸುದಾರರಿಗೆ ನೋಟಿಸ್ ಜಾರಿ ಮಾಡಬೇಕು ಎಂದು ಹೇಳಿದರು.

ಅಲ್ಲದೆ ಪಾರ್ಕ್‌ಗಳಲ್ಲಿ ವಾಯು ವಿಹಾರ ಮಾಡುವವರ ಮೇಲೆ ಮರದ ರೆಂಬೆಗಳು ಬೀಳದಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಬೇಕು. ಮಳೆಯಾದಾಗ ನೀರು ನಿಲ್ಲುವ ತಗ್ಗು ಪ್ರದೇಶಗಳನ್ನು ಗುರುತಿಸಿ ಕೂಡಲೇ ಪರಿಹಾರ ಕ್ರಮ ಕೈಗೊಳ್ಳಬೇಕು. ದೇವಸ್ಥಾನಗಳ ಬಳಿ ದೊಡ್ಡ ಮರಗಳ ಕೆಳಗೆ ಕುಳಿತು ಪೂಜಾ ಸಾಮಗ್ರಿ ಮಾರಾಟ ಮಾಡುವವರಿಗೆ ಎಚ್ಚರಿಕೆ ನೀಡಬೇಕು, ಮಣ್ಣು ಮಿಶ್ರಿತ ಕುಡಿಯುವ ನೀರು ಸರಬರಾಜು ಆಗದಂತೆ ಕ್ರಮ ಕೈಗೊಳ್ಳಬೇಕೆಂದು ಸೋಮಶೇಖರ್ ಅವರು ಆಯುಕ್ತರಲ್ಲಿ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಶ್ರೀಧರ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹದೇವು ಹಾಜರಿದ್ದರು.

ಮೈಸೂರಲ್ಲಿ ಕಾರ್ಮಿಕರ ದಿನಾಚರಣೆ

ಕಾರ್ಮಿಕರ ಮೇಲಿನ ಶೋಷಣೆ ತಡೆಗೆ ಆಗ್ರಹ



ಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರಲ್ಲಿ ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಮೆರವಣಿಗೆ ನಡೆಸಿ ಹಕ್ಕೊತ್ತಾಯ ಮಾಡಿದರು.

ಮೈಸೂರು,ಮೇ 2(ಎಂಟಿವೈ)– ಕಾರ್ಮಿಕ ಸಂಘಟನೆಗಳ ಜಂಟಿ ಸಮಿತಿ ನೇತೃತ್ವದಲ್ಲಿ ಎಐಟಿಯುಸಿ, ಸಿಐಟಿಯು, ಎಐಯುಟಿಯುಸಿ, ಎಐಸಿಸಿಟಿಯು ಸಂಘಟನೆಗಳ ವತಿಯಿಂದ ಮೈಸೂರಲ್ಲಿ ಕಾರ್ಮಿಕ ದಿನಾಚರಣೆ ಆಚರಿಸಲಾಯಿತು.

ಕಾರ್ಮಿಕರ ದಿನಾಚರಣೆ ಅಂಗವಾಗಿ ಮೈಸೂರಿನ ಪುರಭವನದ ಆವರಣಕ್ಕೆ ಆಗಮಿಸಿದ್ದ ವಿವಿಧ ಕಾರ್ಮಿಕ ಸಂಘಟನೆಯ ಮುಖಂಡರು, ಕಾರ್ಮಿಕರು ಕೈಯ್ಯಲ್ಲಿ ಕೆಂಪುಭಾವುಟ ಹಿಡಿದಿದ್ದ ಕಾರ್ಮಿಕ ಮುಖಂಡರು ಪುರಭವನ ಆವರಣದಿಂದ ಕೆಟಿ ಸ್ಟ್ರೀಟ್, ಆಯುರ್ವೇದ ವೃತ್ತ, ಪ್ರಭಾಚಿತ್ರ ಮಂದಿರ ಮೂಲಕ ಹಾದು ಪುರಭವನ ಆವರಣದ ವರೆಗೆ ಮೆರವಣಿಗೆ ನಡೆಸಿದರು. ಮೆರವಣಿಗೆಯುದ್ದಕ್ಕೂ ಕಾರ್ಮಿಕರ ಮೇಲಿನ ಶೋಷಣೆ ತಡೆಗಟ್ಟುವಂತೆ ಘೋಷಣೆ ಕೂಗಿದರು.

ಕಾರ್ಮಿಕ ವಿರೋಧಿ ನೀತಿ: ಇದೇ ವೇಳೆ ಪುರಭವನದ ಆವರಣದಲ್ಲಿ ನಡೆದ ಕಾರ್ಮಿಕರ ಸಭೆಯಲ್ಲಿ ಎಐಟಿಯುಸಿ ರಾಷ್ಟ್ರೀಯ ಉಪಾಧ್ಯಕ್ಷ ಹೆಚ್.ಆರ್.ಶೇಷಾದ್ರಿ ಮಾತನಾಡಿ, ಕೇಂದ್ರ ಸರ್ಕಾರ ಜಾರಿಗೆ ತಂದಿರುವ ನೂತನ ನಾಲ್ಕು ಕಾರ್ಮಿಕ ಸಂಹಿತೆ ಕಾರ್ಮಿಕ ವಿರೋಧಿಯಾಗಿದೆ. ಈ ಸಂಹಿತೆಗಳು ಕಾರ್ಮಿಕರ ಹಕ್ಕುಗಳನ್ನು ಮೊಟಕುಗೊಳಿಸಿದ್ದು, ಮಾಲೀಕರ ಪರವಾಗಿವೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

44 ಕಾರ್ಮಿಕ ಕಾನೂನುಗಳನ್ನು ರದ್ದುಗೊಳಿಸಿ, ಹೊಸದಾಗಿ ಜಾರಿಗೆ ತಂದಿರುವ 4 ಕಾರ್ಮಿಕ ಸಂಹಿತೆಗಳು ಕಾರ್ಮಿಕರ ಸಂಕಷ್ಟಕ್ಕೆ ತಂದೊಡ್ಡಲಿವೆ. ಕಾರ್ಮಿಕರ ಉದ್ಯೋಗ ಭದ್ರತೆಯನ್ನು ಕಸಿದುಕೊಳ್ಳುತ್ತಿವೆ. ಹೊಸ ನಿಯಮಗಳ ಪ್ರಕಾರ ಶೇ. 60 ರಿಂದ 70 ಕೈಗಾರಿಕೆಗಳಿಗೆ ಸರ್ಕಾರದ ಅನುಮತಿಯಿಲ್ಲದೆ ನೌಕರರನ್ನು ಕೆಲಸದಿಂದ ತೆಗೆದುಹಾಕುವ ಅಧಿಕಾರವನ್ನು ನೀಡಿರುವುದು ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಎಐಟಿಯುಸಿ ಜಿಲ್ಲಾಧ್ಯಕ್ಷ ಎನ್.ಕೆ.ದೇವದಾಸ್, ಕಾರ್ಯದರ್ಶಿಗಳಾದ ಸಂಧ್ಯಾ, ಕೆ.ಜೆ.ಸೋಮರಾಜೇ ಅರಸ್, ಸಿಐಟಿಯು ಜಿಲ್ಲಾಧ್ಯಕ್ಷ ಅಣ್ಣಪ್ಪ, ಕಾರ್ಮಿಕ ಮುಖಂಡ ಜಯರಾಂ ಹಾಗೂ ಇತರರು ಇದ್ದರು.

ಮುಂಬೈ ಇಂಡಿಯನ್ಸ್ ವಿರುದ್ಧ ಚೆನ್ನೈಸೂಪರ್ ಕಿಂಗ್ಸ್‌ಗೆ ಜಯ



ಚೆನ್ನೈ, ಮೇ 2(ವಿವಿಹೆಚ್)– ನಾಯಕ ಋತುರಾಜ್ ಗಾಯಕ್ವಾಡ್ ಮತ್ತು ಕಾರ್ತಿಕ್ ಶರ್ಮಾ ಅವರ ಅರ್ಧ ಶತಕದ ಬಲದಿಂದ ಚೆನ್ನೈ ಸೂಪರ್ ಕಿಂಗ್ಸ್ ತಂಡವು 8 ವಿಕೆಟ್‌ಗಳಿಂದ ಪ್ರವಾಸಿ ಮುಂಬೈ ಇಂಡಿಯನ್ಸ್ ತಂಡವನ್ನು ಸೋಲಿಸಿತು.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಐಪಿಎಲ್ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ತಂಡವು ನಿಗದಿತ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 159 ರನ್ ಗಳಿಸಿತ್ತು. ಈ ಮೊತ್ತವನ್ನು ಸರಾಗವಾಗಿ ಬೆನ್ನತ್ತಿದ ಚೆನ್ನೈ 18.1 ಓವರ್‌ಗಳಲ್ಲಿ 2 ವಿಕೆಟ್ ಕಳೆದುಕೊಂಡು 160ರನ್ ಗಳಿಸಿ ಗೆಲುವಿನ ನಗೆ ಬೀರಿತು. ಮುಂಬೈ ನೀಡಿದ ಸಾಧಾರಣ ಮೊತ್ತ ಬೆನ್ನತ್ತಿದ ಚೆನ್ನೈಗೆ ಆರಂಭಿಕ ಆಘಾತ ವಾಯಿತು. ಆರಂಭಿಕ ಸಂಜು ಸ್ಯಾಮ್ಸನ್ 11(9) ರನ್ ಗಳಿಸಿ ನಿರ್ಗಮಿಸಿದರೆ, ಬಳಿಕ ಬಂದ ಊರ್ವಿಲ್ ಪಟೇಲ್ 24(12) ಅಲ್ಪ ಮೊತ್ತಕ್ಕೆ ಪೆವಿಲಿಯನ್ ಸೇರಿಕೊಂಡರು.

ಈ ವೇಳೆ ಜೊತೆಯಾದ ಋತುರಾಜ್ ಹಾಗೂ ಕಾರ್ತಿಕ್ ಶರ್ಮಾ ಕೊನೆವರೆಗೂ ನಿಂತು ಪಂದ್ಯ ಗೆಲ್ಲಿಸಿಕೊಟ್ಟರು. ಈ ಜೋಡಿ, ಮುಂಬೈ ಬೌಲರ್‌ಗಳನ್ನು ಬೆಂಡೆತ್ತಿದರು. ನಾಯಕ ಋತುರಾಜ್ ಗಾಯಕ್ವಾಡ್ 48 ಎಸೆತಗಳಲ್ಲಿ 5 ಬೌಂಡರಿ, 2 ಸಿಕ್ಸರ್ ಸಹಿತ ಅಜೇಯ 67 ರನ್ ಗಳಿಸಿದರೆ, ಕಾರ್ತಿಕ್ ಶರ್ಮಾ 40 ಎಸೆತಗಳಲ್ಲಿ 4 ಬೌಂಡರಿ, 3 ಸಿಕ್ಸರ್ ಸಹಿತ ಅಜೇಯ 54 ರನ್ ಬಾರಿಸುವ ಮೂಲಕ ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಇತ್ತ ಮುಂಬೈ ಪರ ಜಸ್ಪ್ರಿತ್ ಬುಮ್ರಾ ಹಾಗೂ ಘಜನ್ಫರ್ ತಲಾ ಒಂದೊಂದು ವಿಕೆಟ್ ಪಡೆದರು.

ಇದಕ್ಕೂ ಮೊದಲು ಬ್ಯಾಟಿಂಗ್ ಮಾಡಿದ ಮುಂಬೈ ನಮನ್ ಧಿರ್ (57 ರನ್, 37ಎ, 4ಬೌ, 3ಸಿ) ಹಾಗೂ ರಿಯಾನ್ ರಿಕೆಲ್ಟನ್ (37ರನ್, 24ಎ, 5ಬೌ) ಸಹಾಯದಿಂದ ನೂರರ ಗಡಿದಾಟಿತು. ಇವರಿಗೆ ನೆರವಾದ ಸೂರ್ಯಕುಮಾರ್ ಯಾದವ್ 21(12), ಹಾರ್ದಿಕ್ ಪಾಂಡ್ಯ 18(23) ಬಿಟ್ಟರೆ ಮತ್ಯಾರೂ ಒಂದಂಕಿ ಮೊತ್ತ ದಾಟದೇ ಇದ್ದದ್ದು ಮುಂಬೈ ಸೋಲಿಗೆ ಕಾರಣವಾಯಿತು.

ಉಳಿದಂತೆ ವಿಲ್ ಜಾಕ್ಸ್ 1(5), ತಿಲಕ್ ವರ್ಮಾ 5(8), ರೋಬಿನ್ ಮಿನ್ಜ್ 5(3), ಕ್ರಿಶ್ ಭಗತ್ ಅಜೇಯ 3(6) ಹಾಗೂ ಟ್ರೆಂಟ್ ಬೌಲ್ಟ್ ಅಜೇಯ 7(2) ರನ್ ಗಳಿಸಿದರು. ಸಿಎಸ್‌ಕೆ ಪರ ಅಂಶುಲ್ ಕಾಂಬೋಜ್ 3 ವಿಕೆಟ್, ನೂರ್ ಅಹ್ಮದ್ 2 ವಿಕೆಟ್, ರಾಮಕೃಷ್ಣ ಘೋಷ್ ಹಾಗೂ ಜೇಮಿ ಓವರ್‌ಟನ್ ತಲಾ ಒಂದೊಂದು ವಿಕೆಟ್ ಪಡೆದು ಮಿಂಚಿದರು. ನಾಯಕ ಋತುರಾಜ್ ಗಾಯಕ್ವಾಡ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದುಕೊಂಡರು.

ಡೆಲ್ಲಿ ಕ್ಯಾಪಿಟಲ್ಸ್‌ಗೆ ಜಯ

ಜೈಪುರ್‌ನ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ರಾಜಸ್ಥಾನ್ ರಾಯಲ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವೆ ಶುಕ್ರವಾರ ನಡೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ 7 ವಿಕೆಟ್‌ಗಳಿಂದ ಗೆದ್ದು ಬೀಗಿತು.

ಈ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ರಾಜಸ್ಥಾನ್ ನಾಯಕ ರಿಯಾನ್ ಪರಾಗ್ 90(50ಎ), ಡೊನೊವನ್ ಫೇರಿರಾ ಅಜೇಯ 47(14) ರನ್‌ಗಳ ಸಹಾಯದಿಂದ ನಿಗದಿತ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 225 ರನ್ ಗಳಿಸಿತು.

ಈ ಬೃಹತ್ ಮೊತ್ತ ಬೆನ್ನತ್ತಿದ ಡೆಲ್ಲಿ ಕ್ಯಾಪಿಟಲ್ಸ್ ಕೆ.ಎಲ್.ರಾಹುಲ್ 75(40), ಪಥುಮ್ ನಿಸ್ಸಾಂಕ 62(33) ಅರ್ಧಶತಕದ ಬಲದಿಂದ 19.1 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡು 226 ರನ್ ಗಳಿಸಿ ಗೆಲುವಿನ ನಗೆ ಬೀರಿತು. ಭರ್ಜರಿ ಬ್ಯಾಟಿಂಗ್ ಪ್ರದರ್ಶನದ ಮೂಲಕ ಡೆಲ್ಲಿ ಗೆಲುವಿಗೆ ಕಾರಣರಾದ ಕೆ.ಎಲ್.ರಾಹುಲ್ ಪಂದ್ಯಶ್ರೇಷ್ಠ ಪ್ರಶಸ್ತಿಗೆ ಭಾಜನರಾದರು.

CHANGE OF NAME

Know all men by these presents, I, **Anna Cherian,** wife of Karthik John Varkie, aged about 36 years, Residing at No. M 36, The Orchards, Gaddige Road, Sahukar Hundi, Belawadi Post, Mysore-571 130 hereby notify that I was also called **"Kumbukattu Anna Cherian".** My Name in AADHAAR is **"Anna Cherian".** My name in the passport is **"Kumbukattu Anna Cherian".** Therefore in order to have uniformity in all my transactions personal and official, I have re affirmed by this publication that I shall be only called as **Anna Cherian.**

Sd/- **Anna Cherian**

ವರ್ಷದಿಂದ ವರ್ಷಕ್ಕೆ ಕೋಟ್ಯಾಂತರ ಮೌಲ್ಯದ ಲಕ್ಷಾಂತರ ಪುಸ್ತಕಗಳು ಗ್ರಂಥಾಲಯದ ಸ್ಟಾಕ್ ರೂಂ ಸೇರುತ್ತಿವೆ!

●ಗ್ರಂಥಾಲಯ ಆಯುಕ್ತರೂ ಆದ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಬೇಸರ ●ಯುವ ಪೀಳಿಗೆಯ ಮತ್ತೆ ಗ್ರಂಥಾಲಯಗಳಿಗೆ ಕರೆತರಬೇಕಿದೆ ●ಜೆಎಸ್‌ಎಸ್ ವಿದ್ಯಾಪೀಠದ ಐದು ಕೃತಿಗಳು ಬಿಡುಗಡೆ



ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಗ್ರಂಥ ಮಾಲೆ ಸಹಯೋಗದೊಂದಿಗೆ ಆಯೋಜಿಸಿದ್ದ ವಿವಿಧ ಲೇಖಕರ ಐದು ಕೃತಿಗಳನ್ನು ಗ್ರಂಥಾಲಯ ಆಯುಕ್ತರೂ ಆದ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ.ಜಗದೀಶ್ ಬಿಡುಗಡೆಗೊಳಿಸಿದರು.

ಮೈಸೂರು, ಮೇ 2(ಎಸ್‌ಪಿಎನ್)– ವಿದ್ಯಾರ್ಥಿ ಸ್ನೇಹಿ, ಓದುಗ ಸ್ನೇಹಿ ಪುಸ್ತಕಗಳು ರಾಜ್ಯದ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳಲ್ಲಿ ಸುಲಭವಾಗಿ ಸಿಗುವಂತಹ ವಾತಾವರಣ ನಿರ್ಮಿಸಲಾಗುವುದು ಎಂದು ಬೆಂಗಳೂರು ನಗರ ಜಿಲ್ಲಾಧಿಕಾರಿಗಳೂ ಆದ ಸಾರ್ವಜನಿಕ ಗ್ರಂಥಾಲಯ ಆಯುಕ್ತ ಜಿ.ಜಗದೀಶ್ ಓದುಗರಿಗೆ ಭರವಸೆ ನೀಡಿದರು.

ಮೈಸೂರು ಜೆಎಸ್‌ಎಸ್ ಆಸ್ಪತ್ರೆ ಆವರಣದ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಜೆಎಸ್‌ಎಸ್ ಗ್ರಂಥ ಮಾಲೆ ಸಹಯೋಗದೊಂದಿಗೆ ಆಯೋಜಿಸಿದ್ದ ಐದು ಕೃತಿಗಳನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಸಾರ್ವಜನಿಕರು ಇಷ್ಟಪಡುವ ಕೃತಿಗಳು ಗ್ರಂಥಾಲಯಗಳಲ್ಲಿ ಸಿಗುವಂತಾಗಲು ಹೊಸತಾದ ಆಲೋಚನೆಗಳಿಗೆ ಇಲಾಖೆ ತೆರೆದುಕೊಳ್ಳುತ್ತಿದೆ ಎಂದರು.

> “ರಾಜ್ಯದ ಎಲ್ಲಾ ಸಾರ್ವಜನಿಕ ಗ್ರಂಥಾಲಯಗಳಿಗೆ ಓದುಗರನ್ನು ಕರೆತರುವ ಹೊಸ ಆಲೋಚನೆಗಳಿಗೆ ಆಯುಕ್ತರಾದ ಜಿ.ಜಗದೀಶ್ ಅವರು ಆಹ್ವಾನ ನೀಡಿದ್ದಾರೆ. ಈ ನಿರ್ಧಾರ ಯಶಸ್ವಿಯಾದರೆ, ಸಮಾಜದಲ್ಲಿ ಬದಲಾವಣೆ ಪರ್ವಕ್ಕೆ ನಾಂದಿಯಾಗುತ್ತದೆ.
> – ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ

ವರ್ಷದಿಂದ ವರ್ಷಕ್ಕೆ ಕೋಟ್ಯಾಂತರ ಮೌಲ್ಯದ ಲಕ್ಷಾಂತರ ಪುಸ್ತಕಗಳು ಸಾರ್ವಜನಿಕ ಗ್ರಂಥಾಲಯದ ಸ್ಟಾಕ್ ರೂಂ ಸೇರುತ್ತಿವೆ. ಇವುಗಳಲ್ಲಿ ಎಷ್ಟೋ ಪುಸ್ತಕಗಳನ್ನು ಹತ್ತಾರು ವರುಷ ಕಳೆದರೂ ಒಂದು ಹಾಳೆಯನ್ನು ತೆಗೆದು ಸಾರ್ವಜನಿಕರು ನೋಡಲು ಇಷ್ಟಪಡುವುದಿಲ್ಲ. ಹಾಗಾಗಿ ಜನರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಪುಸ್ತಕ ಪ್ರೇಮಿಗಳಿಗೆ ಯಾವುದು ಬೇಕೋ ಅಂತಹ ಪುಸ್ತಕಗಳನ್ನು ನೀಡುವಂತಹ ಗ್ರಂಥಾಲಯಗಳನ್ನು

> “ಪ್ರಸ್ತುತ ದಿನಮಾನಗಳಲ್ಲಿ ಪುಸ್ತಕಗಳ ಗಂಭೀರ ಅಧ್ಯಯನ ಕಡಿಮೆಯಾಗಿದೆ. ಎಲ್ಲರೂ ಮೇಲ್ಪದರದಲ್ಲಿ ಓದುವುದನ್ನು ಅಭ್ಯಾಸ ಮಾಡಿಕೊಂಡಿದ್ದಾರೆ. ಯುವ ಸಮೂಹ ಪ್ರಾಚೀನ ಸಾಹಿತ್ಯವನ್ನು ಗಂಭೀರ ಅಧ್ಯಯನ ಮೂಲಕ ಅರ್ಥೈಸಿಕೊಂಡು ಮುಂದಿನ ಪೀಳಿಗೆಗೆ ತಲುಪಿಸಬೇಕು.
> - ಡಾ.ಸಿ.ನಾಗಣ್ಣ, ಹಿರಿಯ ಸಾಹಿತಿ

ರೂಪಿಸಬೇಕು. ಆಗ ಮಾತ್ರ ಓದುಗರು ತಮಗಿಷ್ಟವಾದ ಪುಸ್ತಕಗಳನ್ನು ಗ್ರಂಥಾಲಯಗಳಿಗೆ ಬಂದು ಓದಲು ಶುರು ಮಾಡುತ್ತಾರೆ ಎಂದು ತಿಳಿಸಿದರು.

ಈ ನಿಟ್ಟಿನಲ್ಲಿ ಗ್ರಂಥಾಲಯಗಳಿಗೆ ಹೊಸದಾದ ರೂಪವನ್ನು ನೀಡಿ ಓದುಗ ಸ್ನೇಹಿಯಾಗಿ ನಿರ್ಮಾಣ ಮಾಡುವ ಆಲೋಚನೆಯಿದೆ. ಇದನ್ನು ಓದುಗರೂ ಸಹಕರಿಸಬೇಕು. ಇದಕ್ಕಾಗಿ ನಮ್ಮ ಗ್ರಂಥಾಲಯ ಇಲಾಖೆಯ ಎಲ್ಲಾ ಅಧಿಕಾರಿಗಳು, ಸಿಬ್ಬಂದಿಗಳಿಂದ ಅಭಿಪ್ರಾಯ, ಸಲಹೆಗಳನ್ನು ಸಂಗ್ರಹಿಸಲಾಗಿದೆ ಎಂದು ತಿಳಿಸಿದರು.

ಗ್ರಂಥಾಲಯಗಳಿಗೆ ಓದುಗರು ಆಸಕ್ತಿಯಿಂದ ಬರುವಂತಾಗಲು ಇಲಾಖೆ ಏನು ಮಾಡಬೇಕು ಸಾರ್ವಜನಿಕರಿಂದಲೂ ಮಾಹಿತಿಯನ್ನು ಕಲೆಹಾಕಲಾಗುತ್ತಿದೆ. ಜನರು, ಓದುಗರು, ಯಾವ ಪುಸ್ತಕಗಳನ್ನು ಮನೆಗೆ ತೆಗೆದುಕೊಂಡು ಹೋಗಲು ಇಷ್ಟಪಡುತ್ತಾರೆ ಎನ್ನುವ ಮಾಹಿತಿಯನ್ನು ಕ್ರೋಢೀಕರಿಸಿ ವಿಶ್ಲೇಷಣೆ ನಡೆಸಿ ಓದುಗರು ಬಯಸುವ ಪುಸ್ತಕಗಳನ್ನು ಖರೀದಿ ಮಾಡಲಾಗುತ್ತದೆ ಎಂದರು.

ಪುಸ್ತಕ ಓದುವವರ ಸಂಖ್ಯೆ ಕಡಿಮೆಯಾಗಿದೆ. ಹೇಳ ತೀರದಷ್ಟು ಕಡಿಮೆಯಾಗಿದೆ ಎನ್ನುವುದು ದಶಕಗಳಿಂದಲೂ ಕೇಳಿ ಬರುತ್ತಿರುವ ಓದುಗರ ಅಭಿಪ್ರಾಯ. ಆದರೆ ಈಗೀಗ ರೈಲು, ಬಸ್ಸು ಏರ್ ಪೋರ್ಟ್ ಹಾಗೂ ವಿಮಾನಗಳಲ್ಲಿ ಪ್ರಯಾಣಿಸುವ ಕೆಲ ಗ್ರಾಹಕರು ತಮಗಿಷ್ಟದ ಪುಸ್ತಕಗಳನ್ನು ಖರೀದಿಸಿ ಓದಲು ಶುರು ಮಾಡಿದ್ದಾರೆ. ಕೆಲವರು ಟ್ಯಾಬ್‌ಗಳಲ್ಲಿ ಡಿಜಿಟಲ್ ವೇದಿಕೆಗಳಲ್ಲಿ ಪುಸ್ತಕಗಳನ್ನು ಓದುತ್ತಿದ್ದಾರೆ. ಇಂತಹ ವಿಷಯಗಳು ಪುಸ್ತಕ ಪ್ರೇಮಿಗಳಿಗೆ ಸ್ವಲ್ಪ ಸಮಾಧಾನ ತರುವ ಅಂಶವಾಗಿದೆ ಎಂದರು.

ಹಳೆ ಪುಸ್ತಕ ಓದಿ ಈಗ ಅಧಿಕಾರಿ ಆಗಿದ್ದೇನೆ

ಮೊಬೈಲ್ ವ್ಯಸನದಲ್ಲಿ ತೊಡಗಿದ್ದ ಕೆಲವರು ನಿಧಾನವಾಗಿ ಪುಸ್ತಕದತ್ತ ಹೊರಳುತ್ತಿರುವುದನ್ನು ನೋಡಿದರೆ ಪುಸ್ತಕ ಲೋಕದ ಗತವೈಭವ ಮತ್ತೆ ಮರಳುತ್ತಿದೆ ಎನ್ನುವಂತೆ ಭಾಸವಾಗುತ್ತಿದೆ. ಓದುಗನಿಗೆ ಪುಸ್ತಕಗಳು, ಗ್ರಂಥಗಳನ್ನು ಓದುವುದರಿಂದ ಅದ್ಭುತ ಅನುಭವ ಉಂಟಾಗುತ್ತದೆ. ಜೀವನದಲ್ಲಿ ಅನೇಕ ಬದಲಾವಣೆಗಳನ್ನು ಕಾಣಬಹುದಾಗಿದೆ. ಪುಸ್ತಕಗಳನ್ನು ಓದಿ ಏನ್ನಾನಾದರೂ ಸಾಧಿಸಬಹುದ ಅಂದರೆ ಅದಕ್ಕೆ ನಾನೇ ಸಾಕ್ಷಿ. ಏಕೆಂದರೆ, ನಾನು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳಲು ಬೆಂಗಳೂರಿನ ಅವಿನ್ಯೂ ರೋಡ್‌ನಲ್ಲಿ ದೊರಕುತ್ತಿದ್ದ ಹಳೆಯ ಪುಸ್ತಕಗಳನ್ನು ಖರೀದಿಸಿ ಓದಿದ ಪರಿಣಾಮ ಇಂದು ಸಾರ್ವಜನಿಕ ಸೇವೆಯಲ್ಲಿ ತೊಡಗಿದ್ದೇನೆ ಎಂದು ಜಗದೀಶ್ ತಿಳಿಸಿದರು.

ಸುತ್ತೂರು ಮಠದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಇಸ್ರೋದ ಮಾಜಿ ಅಧ್ಯಕ್ಷ ಡಾ.ಎ.ಎಸ್.ಕಿರಣ್ ಕುಮಾರ್ ವಹಿಸಿದ್ದರು. ಡಾ.ಸುಜಾತ ಸ್ವಾಮಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಡಾ.ಮಾನಸ ಪುಸ್ತಕಗಳನ್ನು ಪರಿಚಯಿಸಿದರು. ರೂಪಾ ಗುರುಪ್ರಸಾದ್, ಕೆ.ಜಿ.ವಿನುತಾ ಪ್ರಾರ್ಥಿಸಿದರೆ, ಡಾ.ಎಂ.ಎನ್.ನಂದೀಶ್ ಹಂಚೆ ಸ್ವಾಗತಿಸಿದರು. ನಗರ್ಲೆ ಶಿವಕುಮಾರ್ ವಂದಿಸಿದರು. ಡಾ.ಕಟ್ನವಾಡಿ ಪ್ರಭುಸ್ವಾಮಿ ನಿರೂಪಿಸಿದರು.

‘ಮೈಸೂರು ಪ್ರಜಾಪ್ರತಿನಿಧಿ ಸಭೆ ಚಾರಿತ್ರಿಕ ಅವಲೋಕನ–ವಿಚಾರ ಸಂಕಿರಣ’, ದಿ.ಎಚ್.ಗಂಗಾಧರನ್ ರಚಿತ ‘ಗ್ಲಿಂಪ್ಸಸ್ ಆಫ್ ಸುತ್ತೂರು ಮಠ್’, ಸದಾನಂದ ಕನವಳ್ಳಿ ರಚಿತ ‘ವೀರಶೈವ–ಲಿಂಗಾಯತ ಪರಿಕಲ್ಪನೆಗಳು’ ಡಾ. ಜಿ.ಎಸ್. ಕಾಪಸೆ ಸಂಪಾದನೆಯಲ್ಲಿ ಸಿದ್ದರಾಮೇಶ್ವರ ಶರಣರು ಬೆಲ್ದಾಳ ವ್ಯಾಖ್ಯಾನಿಸಿರುವ ‘ಚನ್ನಬಸವಣ್ಣನವರ ವಚನ ವ್ಯಾಖ್ಯಾನ’, ಡಾ. ಎನ್.ಮಹೇಶ್ವರಿ ಸಂಪಾದನೆಯಲ್ಲಿ ಹಾಗೂ ಡಾ. ಎ.ಎಸ್. ಕಿರಣ್ ಕುಮಾರ್ ರಚಿತ ‘ಸ್ಪೇಸ್ ಟೆಕ್ನಾಲಜಿ ಅಂಡ್ ಸೊಸೈಟಲ್ ಅಪ್ಲಿಕೇಷನ್ಸ್ (ಫ್ರೆಂಚ್ ಭಾಷೆ)’ ಪುಸ್ತಕಗಳು ಕಾರ್ಯಕ್ರಮದಲ್ಲಿ ಬಿಡುಗಡೆಗೊಂಡವು.

ಐಪಿಎಸ್‌ಯೇತರ 30 ಅಧಿಕಾರಿಗಳ ಎಸ್ಪಿ ಬಡ್ತಿಗೆ ಹೈಕೋರ್ಟ್ ಆದೇಶ

ಬೆಂಗಳೂರು: ರಾಜ್ಯ ಪೊಲೀಸ್ ಸೇವೆಯಲ್ಲಿದ್ದ 30 ಐಪಿಎಸ್ ಯೇತರ ಅಧಿಕಾರಿಗಳಿಗೆ ಪೊಲೀಸ್ ವರಿಷ್ಠಾಧಿಕಾರಿ (ಎಸ್‌ಪಿ) ವೃಂದಕ್ಕೆ ಬಡ್ತಿ ನೀಡಿ ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ಆದೇಶಿಸಿದೆ.

ಎಸ್‌ಪಿ ಹುದ್ದೆಗೆ ಬಡ್ತಿ ನೀಡುವುದಕ್ಕೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯ ಆಡಳಿತಾತ್ಮಕ ನ್ಯಾಯಮಂಡಳಿ (ಕೆಎಸ್‌ಎಟಿ) 2025ರ ಆಗಸ್ಟ್ 20ರಂದು ನೀಡಿರುವ ಆದೇಶ ರದ್ದುಗೊಳಿಸುವಂತೆ ಕೋರಿ ರಾಜ್ಯ ಗೃಹ ಇಲಾಖೆ ಸಲ್ಲಿಸಿದ್ದ ರಿಟ್ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಜಿ.ಪಂಡಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಆದೇಶ ನೀಡಿದೆ.

ಕೆಎಸ್‌ಎಟಿ ಆದೇಶವನ್ನು ಮಾರ್ಪಾಡು ಮಾಡಿ ಅರ್ಜಿಯನ್ನು ಭಾಗಶಃ ಪುರಸ್ಕರಿಸಿರುವ ನ್ಯಾಯಪೀಠ, ಕರ್ನಾಟಕ ನಾಗರಿಕ ಸೇವಾ ನಿಯಮ (ಕೆಸಿಎಸ್‌ಆರ್) 45ರ ನಿಯಮದಡಿ ಬಡ್ತಿ ಪರಿಗಣನೆ ಮಾಡಬೇಕು ಎಂದು ಆದೇಶಿಸಿದೆ.

ಹುದ್ದೆಗಳು ಖಾಲಿ ಇರುವ ಅಂಶವನ್ನು ನ್ಯಾಯಮಂಡಳಿ ಪರಿಗಣಿಸಬೇಕಿತ್ತು. ಎಸ್‌ಪಿ ಹುದ್ದೆಗಳು ಮತ್ತು ಇಲಾಖಾ ಬಡ್ತಿ ಸಮಿತಿ (ಡಿಪಿಸಿ) ಹುದ್ದೆಗಳ ಲಭ್ಯತೆಯನ್ನು ಆಧರಿಸಿ ಗೃಹ ಸಚಿವರ ಅನುಮೋದನೆ ಪಡೆದು ಎರಡು ತಿಂಗಳಲ್ಲಿ ಪ್ರತಿವಾದಿಗಳಿಗೆ ಎಸ್‌ಪಿ ಹುದ್ದೆಗೆ ಬಡ್ತಿ ನೀಡಲು ತೀರ್ಮಾನಿಸಬೇಕು ಎಂದು ಆದೇಶದಲ್ಲಿ ವಿವರಿಸಿದೆ.

ಮದುವೆ ಸಾಲ ತೀರಿಸಲು ಮಗಳ ಮನೆಗೆ ತಾಯಿ ಕನ್ನ: 16.57 ಲಕ್ಷ ಮೌಲ್ಯದ 110 ಗ್ರಾಂ ಚಿನ್ನ ಕಳ್ಳತನ

ಬೆಳಗಾವಿ: ಮದುವೆ ಸಾಲ ತೀರಿಸಲು ಮಗಳ ಮನೆಗೆ ತಾಯಿಯೇ ಕನ್ನ ಹಾಕಿ ಸಿಕ್ಕಿಬಿದ್ದ ಘಟನೆ ಬೆಳಗಾವಿಯಲ್ಲಿ ನಡೆದಿದೆ. ಬೆಳಗಾವಿಯ ಪಿರಣವಾಡಿ ನಿವಾಸಿ ಉಜ್ವಲಾ ಕಮ್ಮಾರ ಪುತ್ರಿಯರ ಮದುವೆ ಸಾಲ ತೀರಿಸಲು ಹಿರಿಯ ಅಳಿಯನ ಮನೆಯಲ್ಲಿ ಕಳ್ಳತನ ಮಾಡಿದ್ದಾಳೆ.



ಉಜ್ವಲಾ

ಮಗಳು–ಅಳಿಯ ಸ್ನೇಹಿತರ ಮದುವೆಗೆಂದು ಹೋಗಿದ್ದರು ಎನ್ನಲಾಗಿದೆ. ಈ ವೇಳೆ ಮನೆಯಲ್ಲಿದ್ದ ಪುತ್ರಿಯ ಚಿನ್ನದ ಬಳೆ, ಉಂಗುರ, ನೆಕ್ಲೆಸ್, ಗಂಟನ್ ಸೇರಿ 16.57 ಲಕ್ಷ ರೂ. ಮೌಲ್ಯದ 110 ಗ್ರಾಂ ಚಿನ್ನಾಭರಣವನ್ನು ಉಜ್ವಲಾ ಎಗರಿಸಿದ್ದಾಳೆ. ಮದುವೆ ಮುಗಿಸಿ ಮನೆಗೆ ಬಂದು ನೋಡಿದಾಗ ಚಿನ್ನಾಭರಣ ಕಳ್ಳತನ ಆಗಿರುವುದು ಗಮನಕ್ಕೆ ಬಂದಿದೆ.

ಚಿನ್ನಾಭರಣ ಕಳ್ಳತನ ಆದ ಬಗ್ಗೆ ಅತ್ತೆಯನ್ನು ವಿಚಾರಿಸಿದಾಗ ಐನಾತಿ ಅತ್ತೆ ನನಗೆ ಗೊತ್ತಿಲ್ಲ ಎಂದಿದ್ದಾಳೆ. ಕಳ್ಳತನ ಸಂಬಂಧ ಟಿಳಕವಾಡಿ ಠಾಣೆ ಪೊಲೀಸರಿಗೆ ಅಳಿಯ ದೂರು ನೀಡಿದ್ದಾನೆ. ದೂರು ದಾಖಲಿಸಿಕೊಂಡು ತನಿಖೆಗೆ ಇಳಿದಾಗ ಪೊಲೀಸರ ಎದುರು ಅತ್ತೆಯ ಹೈಡ್ರಾಮಾ ಬೆಳಕಿಗೆ ಬಂದಿದೆ. ತೀವ್ರ ವಿಚಾರಣೆ ನಡೆಸಿದಾಗ ತಾನೇ ಕಳ್ಳತನ ಮಾಡಿರುವುದಾಗಿ ಕಳ್ಳಿ ಅತ್ತೆ ಬಾಯ್ಬಿಟ್ಟಿದ್ದಾಳೆ. ತಕ್ಷಣವೇ ಅತ್ತೆ ಉಜ್ವಲ ಹಾಗೂ ಸಂಬಂಧಿ ಶಿವಾ ಬಳಿಯಿದ್ದ ಚಿನ್ನಾಭರಣ ವಶಪಡಿಸಿಕೊಂಡು ಪೊಲೀಸರು ಅತ್ತೆಯನ್ನು ಬಂಧಿಸಿದ್ದಾರೆ. ಸದ್ಯ ಟಿಳಕವಾಡಿ ಠಾಣೆಯಲ್ಲಿ ಈ ಕುರಿತು ಪ್ರಕರಣ ದಾಖಲಾಗಿದೆ.

ಪ್ರಸಾರ ಭಾರತಿ ಅಧ್ಯಕ್ಷರಾಗಿ ಖ್ಯಾತ ಲೇಖಕ ಪ್ರಸೂನ್ ಜೋಶಿ ನೇಮಕ

ನವದೆಹಲಿ, ಮೇ 2: ಖ್ಯಾತ ಗೀತ ರಚನೆಕಾರ, ಬರಹಗಾರ ಮತ್ತು ಸಂವಹನ ತಜ್ಞ ಪ್ರಸೂನ್ ಜೋಶಿ ಅವರನ್ನು ಇಂದು ಭಾರತದ ಸಾರ್ವಜನಿಕ ಸೇವಾ ಪ್ರಸಾರಕವಾದ ಪ್ರಸಾರ ಭಾರತಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಅಧಿಕೃತ ಹೇಳಿಕೆಯ ಪ್ರಕಾರ, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯವು ಪ್ರಸೂನ್ ಜೋಶಿ ಅವರನ್ನು ಈ ಪ್ರಮುಖ ಹುದ್ದೆಗೆ ನೇಮಿಸಿದೆ. ಸಾಹಿತ್ಯ, ಜಾಹೀರಾತು, ಸಿನಿಮಾ ಮತ್ತು ಸಾರ್ವಜನಿಕ ಸಂವಹನಕ್ಕೆ ಗಮನಾರ್ಹ ಕೊಡುಗೆಗಳನ್ನು ಹೊಂದಿರುವ ಪ್ರಸಿದ್ಧ ಸೃಜನಶೀಲರಾದ ಪ್ರಸೂನ್ ಜೋಶಿ ತಮ್ಮ ಪ್ರಬಲ ಬರವಣಿಗೆ ಮತ್ತು ಸಾಂಸ್ಕೃತಿಕ ಒಳನೋಟದಿಂದ ಗುರುತಿಸಿಕೊಂಡಿದ್ದಾರೆ. 54 ವರ್ಷ ವಯಸ್ಸಿನ ಅವರು ಭಾರತದಲ್ಲಿ ಸಮಕಾಲೀನ ಮಾಧ್ಯಮ ನಿರೂಪಣೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ.



ಪ್ರಸೂನ್ ಜೋಶಿ ಅವರ ನೇಮಕಾತಿಗೆ ಅಭಿನಂದನೆ ಸಲ್ಲಿಸಿದ ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ ಅಶ್ವಿನಿ ವೈಷ್ಣವ್, ಪ್ರಸೂನ್ ಜೋಶಿ ಅವರದ್ದು ಅಪರೂಪದ ಸೃಜನಶೀಲ ಮನೋಭಾವ. ಅವರ ಉಸ್ತುವಾರಿ ಅಡಿಯಲ್ಲಿ ಪ್ರಸಾರ ಭಾರತಿ ಹೊಸ ಸೃಜನಶೀಲ ಧ್ವನಿಯನ್ನು ಕಂಡುಕೊಳ್ಳುತ್ತದೆ ಎಂಬ ವಿಶ್ವಾಸವಿದೆ ಎಂದು ಹೇಳಿದರು.

ಈ ಮೊದಲು ಪ್ರಸೂನ್ ಜೋಶಿ 2017ರವರೆಗೆ ಮುಂಬೈನಲ್ಲಿ ಕೇಂದ್ರ ಚಲನಚಿತ್ರ ಪ್ರಮಾಣೀಕರಣ ಮಂಡಳಿಯ (ಸಿಬಿಎಫ್‌ಸಿ) ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು. ಮೆಕ್‌ಕ್ಯಾನ್ ವರ್ಲ್ಡ್ ಗ್ರೂಪ್ ಇಂಡಿಯಾದ ಸಿಇಒ ಮತ್ತು ಮೆಕ್‌ಕ್ಯಾನ್ ವರ್ಲ್ಡ್ ಗ್ರೂಪ್ ಏಷ್ಯಾ ಪೆಸಿಫಿಕ್‌ನ ಅಧ್ಯಕ್ಷ ಸ್ಥಾನ ಸೇರಿದಂತೆ ಜಾಹೀರಾತು ಉದ್ಯಮದಲ್ಲಿ ಅವರು ಪ್ರಮುಖ ಹುದ್ದೆಗಳನ್ನು ಅಲಂಕರಿಸಿದ್ದಾರೆ. ಇದಲ್ಲದೆ, ಅವರು 2016 ರಿಂದ ಇಂದಿರಾ ಗಾಂಧಿ ರಾಷ್ಟ್ರೀಯ ಕಲಾ ಕೇಂದ್ರದ ಟ್ರಸ್ಟಿಯಾಗಿದ್ದಾರೆ.

1997ರಿಂದ ಕಾರ್ಯನಿರ್ವಹಿಸುತ್ತಿರುವ ಪ್ರಸಾರ ಭಾರತಿ ಭಾರತದ ಸ್ವಾಯತ್ತ ಸಾರ್ವಜನಿಕ ಸೇವಾ ಪ್ರಸಾರಕವಾಗಿದೆ. ಇದು ಎರಡು ಪ್ರಮುಖ ವಿಭಾಗಗಳ ಮೂಲಕ ಕಾರ್ಯನಿರ್ವಹಿಸುತ್ತದೆ. ಆಲ್ ಇಂಡಿಯಾ ರೇಡಿಯೋ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಲಕ್ಷಾಂತರ ಜನರನ್ನು ಬಹು ಭಾಷೆಗಳಲ್ಲಿ ತಲುಪುವ ವಿಶ್ವದ ಅತಿದೊಡ್ಡ ರೇಡಿಯೋ ಜಾಲಗಳಲ್ಲಿ ಒಂದಾಗಿದೆ. ಇನ್ನೊಂದು ಸುದ್ದಿ, ಶೈಕ್ಷಣಿಕ, ಮನರಂಜನೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವ ರಾಷ್ಟ್ರೀಯ ಚಾನೆಲ್ ಆದ ದೂರದರ್ಶನ (ಡಿಡಿ).

ಉಚಿತ ಟೈಲರಿಂಗ್ ತರಬೇತಿ

ಮೈಸೂರು, ಮೇ 2– ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ವತಿಯಿಂದ ಮೈಸೂರು ಜಿಲ್ಲೆಯಲ್ಲಿ ಪರಿಶಿಷ್ಟ ಜಾತಿ ಬೋವಿ ಜನಾಂಗದ ನಿರುದ್ಯೋಗ ಯುವಕ–ಯುವತಿಯರ ಸ್ವಯಂ ಉದ್ಯೋಗಾವಕಾಶಗಳನ್ನು ಹೆಚ್ಚಿಸುವ ಹಾಗೂ ಆರ್ಥಿಕ ಸ್ವಾವಲಂಬನೆ ಸಾಧಿಸಲು ಸಹಕಾರಿಯಾಗುವ ಉದ್ದೇಶದಿಂದ ಉಚಿತ ಟೈಲರಿಂಗ್ ತರಬೇತಿ ಹಾಗೂ ಅಗತ್ಯ ಯಂತ್ರೋಪಕರಣಗಳ ವಿತರಣೆ ಮಾಡಲು ಉದ್ದೇಶಿಸಲಾಗಿದ್ದು, ಅರ್ಜಿ ಆಹ್ವಾನಿಸಲಾಗಿರುತ್ತದೆ.

ಉಚಿತ ಟೈಲರಿಂಗ್ ತರಬೇತಿಯನ್ನು ನೀಡಲು ಮೇ 5 ರಂದು ಬೆಳಿಗ್ಗೆ 10 ಗಂಟೆಗೆ ಕೌಶಲ್ಯ ಕರ್ನಾಟಕ ಟ್ರೈನಿಂಗ್ ಸೆಂಟರ್, ರಾಮಲಿಂಗೇಶ್ವರ ದೇವಸ್ಥಾನದ ಹತ್ತಿರ, ವಿದ್ಯಾರಣ್ಯಪುರಂ, ಮೈಸೂರು ಇಲ್ಲಿ ತರಬೇತಿಯ ಉದ್ಘಾಟನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ

ಭಾರೀ ಗಾಳಿ–ಮಳೆಗೆ ಹೆಚ್.ಡಿ.ಕೋಟೆ, ಸರಗೂರಲ್ಲಿ ಅಪಾರ ಬಾಳೆ ನಾಶ

ರೈತ ಮುಖಂಡ ಚಂದನ್ ಗೌಡ ತಂಡ ಪರಿಶೀಲನೆ; ಸೂಕ್ತ ಪರಿಹಾರಕ್ಕೆ ಆಗ್ರಹ

ಹೆಚ್.ಡಿ.ಕೋಟೆ: ಹೆಚ್.ಡಿ.ಕೋಟೆ ಹಾಗೂ ಸರಗೂರು ತಾಲೂಕಿನಲ್ಲಿ ಭಾರೀ ಮಳೆಯಿಂದಾಗಿ ನೂರಾರು ಹೆಕ್ಟೇರ್ ಬಾಳೆ ನಾಶವಾಗಿದ್ದು, ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ರೈತರಿಗೆ ಸಾಂತ್ವನ ಹೇಳಿದ್ದಾರೆ.

ಬೆಳೆ ನಾಶವಾಗಿರುವ ಪ್ರದೇಶಕ್ಕೆ ತಮ್ಮ ತಂಡದೊಂದಿಗೆ ತೆರಳಿ ಪರಿಶೀಲನೆ ನಡೆಸಿದ ಅವರು, ಸಂತ್ರಸ್ತ ಬೆಳೆಗಾರರಿಂದ ಮಾಹಿತಿ ಪಡೆದು, ಪರಿಹಾರ ದೊರಕಿಸಿಕೊಡುವ ನಿಟ್ಟಿನಲ್ಲಿ ಪ್ರಯತ್ನಿಸುವುದಾಗಿ ಭರವಸೆ ನೀಡಿದರು.

ಈ ವೇಳೆ ರೈತರು, ಕಷ್ಟಪಟ್ಟು ಬೆಳೆದ ಬಾಳೆಯು ಮಳೆಯಿಂದಾಗಿ ಸಂಪೂರ್ಣ ನಾಶವಾಗಿದೆ. ಸಾಲ ತೀರಿಸುವುದು ಹಾಗೂ ಕುಟುಂಬ ನಡೆಸುವುದು ಹೇಗೆಂದು ದಿಕ್ಕೇ ತೋಚದಂತಾಗಿದೆ. ದಯಮಾಡಿ ಸೂಕ್ತ ಪರಿಹಾರ ದೊರಕಿಸಿಕೊಡುವಂತೆ ಕಣ್ಣೀರಿಟ್ಟರು.

ನೊಂದ ರೈತರಿಗೆ ಧೈರ್ಯ ತುಂಬಿದ ಚಂದನ್ ಗೌಡ, ಕೋಟೆ ಮತ್ತು ಸರಗೂರು ತಾಲೂಕಿನಲ್ಲಿ ಭಾರೀ ಮಳೆ–ಗಾಳಿಯಿಂದಾಗಿ ರೈತರು ಬೆಳೆದಿದ್ದ ಬಾಳೆ ಸೇರಿದಂತೆ ಇನ್ನಿತರ ಅನೇಕ ಬೆಳೆಗಳು ಸಂಪೂರ್ಣವಾಗಿ ನಾಶವಾಗಿವೆ. ರೈತರಿಗಾಗಿರುವ ಅಪಾರ ನಷ್ಟದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಡಲಾಗುವುದು. ಸರ್ಕಾರ ಪ್ರತಿ ಹೆಕ್ಟೇರ್‌ಗೆ ಕನಿಷ್ಠ 30 ಸಾವಿರ ರೂ. ಪರಿಹಾರ ಘೋಷಿಸಿ, ಅನ್ನದಾತರಿಗೆ ನೆರವಾಗಬೇಕು ಎಂದು ಆಗ್ರಹಿಸಿದರು.



ಮಳೆಯಿಂದ ಬಾಳೆ ನಾಶವಾಗಿರುವ ಪ್ರದೇಶದಲ್ಲಿ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಸಿ.ಚಂದನ್ ಗೌಡ ಇನ್ನಿತರ ಪದಾಧಿಕಾರಿಗಳು ಪರಿಶೀಲಿಸುತ್ತಿರುವುದು.

ಫಸಲಿಗೆ ಬಂದಿದ್ದ ಅಪಾರ ಪ್ರಮಾಣದ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ. ಇನ್ನೊಂದು ತಿಂಗಳಿನಲ್ಲಿ ಬಾಳೆಗೊನೆ ಕಟಾವು ಮಾಡಿ ಮಾರಾಟ ಮಾಡಬೇಕಿತ್ತು. ಆದರೆ ಭಾರೀ ಮಳೆ, ಗಾಳಿಗೆ ಬಾಳೆಗೊನೆ ಸಹಿತ ಮರಗಳು ಮುರಿದು ಬಿದ್ದಿವೆ. ಇದರಿಂದಾಗಿ ರೈತರು ಅಪಾರ ನಷ್ಟ ಅನುಭವಿಸಿದ್ದಾರೆ. ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ವಿಳಂಬ ಮಾಡದೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ತಕ್ಷಣವೇ ಕ್ರಮ ವಹಿಸಬೇಕು ಎಂದು ಒತ್ತಾಯಿಸಿದರು.

ಈ ವೇಳೆ ರೈತ ಕಲ್ಯಾಣದ ಜಿಲ್ಲಾ, ತಾಲೂಕು ಪದಾಧಿಕಾರಿಗಳು ಉಪಸ್ಥಿತರಿದ್ದರು.

ಅಸ್ಸಾಂನಲ್ಲಿ ಕಾಂಗ್ರೆಸ್, ಉಳಿದೆಡೆ ಐಎನ್‌ಡಿಐಎ ಮೈತ್ರಿಕೂಟ ಅಧಿಕಾರಕ್ಕೆ

ಪಂಚ ರಾಜ್ಯಗಳ ಚುನಾವಣಾ ಫಲಿತಾಂಶದ ಬಗ್ಗೆ ಡಿಸಿಎಂ ಶಿವಕುಮಾರ್ ವಿಶ್ವಾಸ

ಗುವಾಹಟಿ, ಮೇ 2– ಚುನಾವಣೋತ್ತರ ಸಮೀಕ್ಷೆಗಳು ನಮ್ಮ ಪರವಾಗಿರಲಿ, ಇಲ್ಲದಿರಲಿ ಅದರ ಮೇಲೆ ನನಗೆ ನಂಬಿಕೆ ಇಲ್ಲ. ನನ್ನ ತಂತ್ರಗಾರಿಕೆಯೇ ಬೇರೆ, ಈ ಬಾರಿ ಎಲ್ಲಾ ರಾಜ್ಯಗಳಲ್ಲಿ ಐಎನ್‌ಡಿಐಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ. ಅಸ್ಸಾಂನಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುವ ವಿಶ್ವಾಸವಿದೆ ಎಂದು ಕರ್ನಾಟಕದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ವಿಶ್ವಾಸ ವ್ಯಕ್ತಪಡಿಸಿದರು.



ಅಸ್ಸಾಂನ ಗುವಾಹಟಿಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಸಭೆ ನಡೆಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಡಿಕೆಶಿ, ಅಸ್ಸಾಂ ರಾಜ್ಯದ ಕಾಂಗ್ರೆಸ್ ಪಕ್ಷದಲ್ಲಿ ಒಗ್ಗಟ್ಟಿದ್ದು, ಗೆಲ್ಲುವ ವಿಶ್ವಾಸವಿದೆ. ನಮ್ಮ ತಂಡದ ಪರಿಶ್ರಮದ ಬಗ್ಗೆ ನನಗೆ ಹೆಮ್ಮೆ ಇದೆ. ಸಕಾರಾತ್ಮಕ ಫಲಿತಾಂಶದ ನಿರೀಕ್ಷೆ ಇದೆ. ಮಾಧ್ಯಮಗಳ ವರದಿ ಏನೇ ಇರಲಿ, ಚುನಾವಣೋತ್ತರ ಸಮೀಕ್ಷೆಗಳು ಯಾರ ಪರವಾಗಿಯಾದರೂ ಬರಲಿ ಈ ಬಾರಿ ಪಂಚ ರಾಜ್ಯಗಳಲ್ಲೂ ಐಎನ್‌ಡಿಐಎ ಮೈತ್ರಿಕೂಟ ಅಧಿಕಾರಕ್ಕೆ ಬರಲಿದೆ ಎಂದರು.

ಮಾಧ್ಯಮಗಳ ವರದಿ ನೋಡಿ ಅಸ್ಸಾಂ ಮತದಾರರಲ್ಲಿ ಆತಂಕ ಮೂಡಿದೆ. ಅಸ್ಸಾಂನಲ್ಲಿ ಬಿಜೆಪಿ ಜೊತೆ ಗುರುತಿಸಿಕೊಂಡವರಿಗೆ ಮಾತ್ರ ಉಚಿತ ಯೋಜನೆಗಳನ್ನು ನೀಡಲಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಯಾರು ಯಾರಿಗೆ ಮತ ಹಾಕಿದ್ದಾರೆ ಎಂದು ಹೇಗೆ ಹೇಳಲು ಸಾಧ್ಯ. ನಮ್ಮ ಆಂತರಿಕ ಸಮೀಕ್ಷೆ ಉತ್ತಮವಾಗಿದ್ದು, ಯಾರ ನೆರವು ಇಲ್ಲದೇ ನಾವು ಅಧಿಕಾರ ಹಿಡಿಯುವ ವಿಶ್ವಾಸ ನಮ್ಮ ಅಭ್ಯರ್ಥಿಗಳಲ್ಲಿ ಇದೆ ಎಂದು ತಿಳಿಸಿದರು.

ನಮಗೆ ಬಂದಿರುವ ಮಾಹಿತಿ ಪ್ರಕಾರ ನಮ್ಮ ಅಭ್ಯರ್ಥಿಗಳನ್ನು ಬಿಜೆಪಿ ಸಂಪರ್ಕಿಸಿದೆ. ಇದು ಬಿಜೆಪಿಯವರು ಆತಂಕಕ್ಕೆ ಒಳಗಾಗಿರುವುದಕ್ಕೆ ಸಾಕ್ಷಿ. ಬಿಜೆಪಿ ಗೆಲ್ಲುವ ವಿಶ್ವಾಸ ಕಳೆದುಕೊಂಡಿದೆ. ಆದರೆ ನಾವೆಲ್ಲರೂ ಒಟ್ಟಾಗಿದ್ದೇವೆ. ಬಿಜೆಪಿ ಆಡಳಿತ ಯಂತ್ರ ದುರ್ಬಳಕೆಗೆ ಮುಂದಾಗಲಿದ್ದು, ನಾವು ಯಾವ ರೀತಿ ಜಾಗರೂಕರಾಗಿರಬೇಕು ಎಂದು ಮಾರ್ಗದರ್ಶನ ನೀಡಿದ್ದೇವೆ. ಇದಕ್ಕಾಗಿ ದೆಹಲಿ, ಅಸ್ಸಾಂ ಹಾಗೂ ಗುವಾಹಟಿಯಲ್ಲಿ ಪ್ರತ್ಯೇಕ ಕಾನೂನು ಘಟಕ ಸ್ಥಾಪಿಸಲಾಗಿದೆ ಎಂದರು.

4.70 ಕೋಟಿ ದುರುಪಯೋಗ ಆರೋಪ; ಖಾಸಗಿ ಶಿಕ್ಷಣ ಸಂಸ್ಥೆಯ ಟ್ರಸ್ಟಿ ಬಂಧನ

ಮೈಸೂರು, ಮೇ 2(ಪಿಎಂ)– ಕೋಟ್ಯಂತರ ರೂ. ಹಣ ದುರುಪಯೋಗ ಮಾಡಿಕೊಂಡಿರುವ ಆರೋಪದಡಿ ದಾಖಲಾದ ಪ್ರಕರಣ ಸಂಬಂಧ ಖಾಸಗಿ ಶಿಕ್ಷಣ ಸಂಸ್ಥೆ ಟ್ರಸ್ಟಿಯೊಬ್ಬರನ್ನು ಕುವೆಂಪುನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಮೈಸೂರಿನ ಶ್ರೀರಾಂಪುರದ ಚೈತ್ರಾ ಪಬ್ಲಿಕ್ ಸ್ಕೂಲ್‌ನ ಚೈತ್ರಾ ಎಜುಕೇಷನ್ ಟ್ರಸ್ಟ್‌ನ ಟ್ರಸ್ಟಿ ಎಸ್.ಗುರುರಾಜ್ ಬಂಧಿತರು. ಇವರು ಸದರಿ ಟ್ರಸ್ಟ್ ಟ್ರಸ್ಟಿ ಬಿ.ವಿ. ಪುಷ್ಪಲತಾ (ಎ2) ಹಾಗೂ ಚೈತ್ರಾ ಪಬ್ಲಿಕ್ ಸ್ಕೂಲ್ ಪ್ರಾಂಶುಪಾಲೆ ಬಿ.ಯು.ದೇಚಮ್ಮ (ಎ3) ಅವರೊಂದಿಗೆ ಸೇರಿ 4.70 ಕೋಟಿ ರೂ. ದುರುಪಯೋಗ ಮಾಡಿಕೊಂಡಿರುವ ಆರೋಪದಡಿ ಪ್ರಕರಣ ದಾಖಲಾಗಿದೆ

ಗುರುರಾಜ್ ಅವರನ್ನು ಮೊನ್ನೆ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು. ಈಗ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ. ಮತ್ತಿಬ್ಬರು ಆರೋಪಿಗಳಾದ ಬಿ.ವಿ.ಪುಷ್ಪಲತಾ ಹಾಗೂ ಬಿ.ಯು.ದೇಚಮ್ಮ ಅವರ ವಿಚಾರಣೆ ಸಂಬಂಧ ದಾಖಲಾತಿ ಸಂಗ್ರಹಿಸಬೇಕಿದ್ದು, ಈ ಸಂಬಂಧ ಅವರಿಗೆ ನೋಟಿಸ್ ಜಾರಿಗೊಳಿಸಲಾಗಿದೆ ಎಂದು ಕುವೆಂಪುನಗರ ಪೊಲೀಸರು ತಿಳಿಸಿದ್ದಾರೆ.

ಆಂಧ್ರ ಪ್ರದೇಶದ ಹೈದರಾಬಾದ್ ನಗರದ ಎನ್‌ಎಸ್‌ಪಿಐಆರ್‌ಎನ ಚೀಫ್ ರಿಸ್ಕ್ ಆಫೀಸರ್ ಆಂಜನೇಯಲು ನಿಡ್ಜೆಲ್ಲಿ ನೀಡಿದ್ದ ದೂರಿನನ್ವಯ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಗುರುರಾಜ್ ಅವರನ್ನು ಬಂಧಿಸಿದ್ದಾರೆ. ಎನ್‌ಎಸ್‌ಪಿಐಆರ್‌ಎ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್ ಮತ್ತು ಚೈತ್ರಾ ಎಜುಕೇಷನ್ ಟ್ರಸ್ಟ್ 2022ರ ಜೂ.15ರಂದು ಮಾಸ್ಟರ್ ಸರ್ವೀಸಸ್ ಒಪ್ಪಂದವನ್ನು ಮಾಡಿಕೊಂಡಿವೆ. ಆ ಮೂಲಕ ಎನ್‌ಎಸ್‌ಪಿಐಆರ್‌ಎ, ಸಂಸ್ಥೆಯನ್ನು ನಿರ್ವಹಿಸಲು, ನಿಯಂತ್ರಿಸಲು ವಿಶೇಷ ಹಕ್ಕು ಹೊಂದಿದೆ. ಅಲ್ಲದೆ, ಶಾಲೆಯ ಸಂಪೂರ್ಣ ಆಡಳಿತ, ನಿರ್ವಹಣೆ, ಆರ್ಥಿಕ ಶಿಸ್ತು, ಶೈಕ್ಷಣಿಕ ಹಾಗೂ ದೈನಂದಿನ ಚಟುವಟಿಕೆಗಳನ್ನು ಒಪ್ಪಂದದ ಅಡಿಯಲ್ಲಿ ಸ್ಥಾಪಿಸಲಾದ ಚೌಕಟ್ಟಿನ ಮೂಲಕ ಕೈಗೊಳ್ಳಬೇಕು. ಇದರಲ್ಲಿ ಹಣಕಾಸಿನ ಮೇಲೆ ನಿಯಂತ್ರಣ ಹೊಂದಿರುವ ಶಾಲಾ ನಿರ್ವಹಣಾ ಸಮಿತಿಯೂ ಸೇರಿದೆ ಎಂದು ಆಂಜನೇಯಲು ದೂರಿನಲ್ಲಿ ತಿಳಿಸಿದ್ದಾರೆ.

ಎನ್‌ಎಸ್‌ಪಿಐಆರ್‌ಎ, ಸಂಸ್ಥೆಯ ಹಿಂದಿನ ಪ್ರೇರಕ ಶಕ್ತಿಯಾಗಿದೆ. ಒಪ್ಪಂದದಂತೆ ಎನ್‌ಎಸ್‌ಪಿಐಆರ್‌ಎ ಮತ್ತು ಟ್ರಸ್ಟ್‌ನ ಜಂಟಿ ಸಹಿ ನಿಯಂತ್ರಣದೊಂದಿಗೆ ಸಂಗ್ರಹ ಹಾಗೂ ಆದಾಯ ಖಾತೆ ನಿರ್ವಹಿಸಲಾಗುತ್ತಿತ್ತು. ಅದರಲ್ಲಿ ಶಾಲೆಯ ಎಲ್ಲಾ ಆದಾಯವನ್ನು ಜಮಾ ಮಾಡಲಾಗುತ್ತಿತ್ತು. ಒಪ್ಪಂದ ಉಲ್ಲಂಘಿಸಿ ಎನ್‌ಎಸ್‌ಪಿಐಆರ್‌ಎನ ಅಧಿಕೃತ ಪ್ರತಿನಿಧಿ ಸೈಯದ್ ಮುದ್ದಸ್ಸಿರ್ ಅವರನ್ನು ಸಂಗ್ರಹ ಖಾತೆಯಿಂದ ಕೈಬಿಟ್ಟು ಆ ಜಾಗಕ್ಕೆ ಬಿ.ಯು. ದೇಚಮ್ಮ ಅವರನ್ನು ನೇಮಿಸಲಾಗಿದೆ.

ಎಸ್.ಗುರುರಾಜ್, ಬಿ.ವಿ.ಪುಷ್ಪಲತಾ, ಶಾಲಾ ಪ್ರಾಂಶುಪಾಲೆ ದೇಚಮ್ಮ ಹಾಗೂ ಇತರ ವ್ಯಕ್ತಿಗಳು ಶಾಮೀಲಾಗಿ ಎನ್‌ಎಸ್‌ಪಿಐಆರ್‌ಎಗೆ ವಂಚಿಸುವ ದುರುದ್ದೇಶದಿಂದ ಹಣಕಾಸು ನಿಯಂತ್ರಣ ಕಾರ್ಯವಿಧಾನ ಅಸ್ಥಿರಗೊಳಿಸಿದ್ದು, ಸದರಿ ಸಂಗ್ರಹ ಖಾತೆಯಿಂದ 4.70 ಕೋಟಿ ರೂ. ಅನ್ನು ಡೆಬಿಟ್ ಮಾಡಿದ್ದು, ಅಲ್ಲದೆ, ಯಾವುದೇ ಅನುಮತಿ ಇಲ್ಲದೇ ವರ್ಗಾಯಿಸಿ ಕೊಂಡಿದ್ದಾರೆ. ಮಾ.11ರಂದು ಈ ರೀತಿ ಮಾಡಿದ್ದು, ಇದು ಒಪ್ಪಂದದ ಸಂಪೂರ್ಣ ಉಲ್ಲಂಘನೆಯಾಗಿದೆ. ಈ ಅಕ್ರಮದ ಬಗ್ಗೆ ಮಾ.13ರಂದು ಮೈಸೂರಿನ ಸರಸ್ವತಿಪುರಂ ಐಸಿಐಸಿಐ ಬ್ಯಾಂಕ್ ಶಾಖೆ ವ್ಯವಸ್ಥಾಪಕರು ಹಾಗೂ ಏ.7ರಂದು ಎಸ್.ಗುರುರಾಜ್ ಅವರಿಗೆ ಪತ್ರ ಮೂಲಕ ಉತ್ತರ ಕೇಳಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿಲ್ಲ.

ಅಲ್ಲದೆ, ಎನ್‌ಎಸ್‌ಪಿಐಆರ್‌ಎಗೆ ಯಾವುದೇ ಮಾಹಿತಿ ನೀಡದೇ, ಅನುಮತಿ ಪಡೆಯದೇ ಖಾತೆಯನ್ನು ನಿರ್ವಹಿಸಲಾಗುತ್ತಿದೆ ಈ ಮೂವರ ವಿರುದ್ಧ ಎಫ್‌ಐಆರ್ ದಾಖಲಿಸಿ, ದುರುಪಯೋಗ ಮಾಡಿಕೊಂಡಿರುವ ಹಣವನ್ನು ಪತ್ತೆ ಮಾಡಿಕೊಡಬೇಕು. ಅಲ್ಲದೆ, ಹಣದ ದುರುಪಯೋಗ ತಡೆಗಟ್ಟಲು ಸದರಿ ಬ್ಯಾಂಕ್ ಖಾತೆಯನ್ನು ಸ್ಥಗಿತಗೊಳಿಸಲು ಕೂಡಲೇ ಕ್ರಮ ವಹಿಸಬೇಕೆಂದು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಾಗಿದೆ.

‘ಎಸ್.ಎಂ.ಕೃಷ್ಣ ಅಧ್ಯಯನ ಪೀಠ’ ಸ್ಥಾಪನೆಗೆ ಪ್ರಸ್ತಾವನೆ ಸಲ್ಲಿಸಲು ಮೈಸೂರು ವಿವಿಗೆ ಸೂಚನೆ

ಎಂಎಲ್ಸಿ ದಿನೇಶ್ ಗೂಳಿಗೌಡರ ಮನವಿಗೆ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಕ್ಷಿಪ್ರ ಸ್ಪಂದನೆ

ಬೆಂಗಳೂರು: ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಸಾಧನೆ ಸೇರಿದಂತೆ ಸಾರ್ಥಕ ಜೀವನ ಕುರಿತು ಅಧ್ಯಯನ ನಡೆಸಲು ‘ಎಸ್.ಎಂ.ಕೃಷ್ಣ ಅಧ್ಯಯನ ಪೀಠ’ ಸ್ಥಾಪಿಸಬೇಕೆಂಬ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರ ಮನವಿಗೆ ಸ್ಪಂದಿಸಿರುವ ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರು, ಈ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗೆ ಸೂಚನೆ ನೀಡಿದ್ದಾರೆ.

ಎಸ್.ಎಂ.ಕೃಷ್ಣ ಅವರು ರಾಜ್ಯದ ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದ್ದಾರೆ. ಅವರ ಆಡಳಿತ ಅವಧಿಯಲ್ಲಿ ಮಾಹಿತಿ ತಂತ್ರಜ್ಞಾನ, ಮೂಲಸೌಕರ್ಯ ಅಭಿವೃದ್ಧಿ ಹಾಗೂ ಶಿಕ್ಷಣ ಕ್ಷೇತ್ರಗಳಲ್ಲಿ ಮಹತ್ವದ ಸುಧಾರಣೆಗಳಾಗಿವೆ. ಬೆಂಗಳೂರನ್ನು ಜಾಗತಿಕ ಐಟಿ–ಬಿಟಿ ಕೇಂದ್ರವನ್ನಾಗಿ ರೂಪಿಸುವಲ್ಲಿ ಅವರ ಪಾತ್ರ ಅತ್ಯಂತ ಪ್ರಮುಖವಾಗಿದೆ

ನಗರಾಭಿವೃದ್ಧಿಯಷ್ಟೇ ಅಲ್ಲದೆ, ಗ್ರಾಮೀಣ ಕರ್ನಾಟಕದ ಸಬಲೀಕರಣಕ್ಕಾಗಿ ಕಂದಾಯ ದಾಖಲೆಗಳನ್ನು ಗಣಕೀಕರಿಸಿದ ‘ಭೂಮಿ’ ಯೋಜನೆ, ರೈತರಿಗಾಗಿ ‘ಯಶಸ್ವಿನಿ’ ಆರೋಗ್ಯ ವಿಮೆ ಹಾಗೂ ಶಾಲಾ ಮಕ್ಕಳಿಗಾಗಿ ‘ಅಕ್ಷರ ದಾಸೋಹ’(ಬಿಸಿಯೂಟ)ದಂತಹ ಕ್ರಾಂತಿಕಾರಿ ಯೋಜನೆಗಳನ್ನು ಜಾರಿಗೆ ತಂದ ಕೀರ್ತಿ ಅವರದ್ದಾಗಿದೆ. ಸದಾ ಶಾಂತಚಿತ್ತದ ರಾಜಕಾರಣಿ ಎನಿಸಿಕೊಂಡಿದ್ದ ಎಸ್.ಎಂ.ಕೃಷ್ಣ ಅವರ ಸಜ್ಜನಿಕೆ, ಆಡಳಿತಾತ್ಮಕ ದೂರದೃಷ್ಟಿ ಮತ್ತು ರಾಜತಾಂತ್ರಿಕ ನೈಪುಣ್ಯತೆ ಇಂದಿನ ರಾಜಕಾರಣಿಗಳಿಗೆ ಮಾದರಿ ಹಾಗೂ ಯುವಕರಿಗೆ ಅನುಕರಣೀಯ.




ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಸಾರ್ಥಕ ಜೀವನ–ಸಾಧನೆ ಕುರಿತು ಅಧ್ಯಯನ ನಡೆಸಲು ‘ಎಸ್.ಎಂ.ಕೃಷ್ಣ ಅಧ್ಯಯನ ಪೀಠ’ ಸ್ಥಾಪಿಸುವಂತೆ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡರು, ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಅವರಿಗೆ ಮನವಿ ಸಲ್ಲಿಸಿದ ಸಂದರ್ಭ.

ಈ ಹಿನ್ನೆಲೆಯಲ್ಲಿ ಎಸ್.ಎಂ.ಕೃಷ್ಣ ಅವರ ಶಿಕ್ಷಣ, ರಾಜಕೀಯ ಸಾಧನೆಗಳು, ಆಡಳಿತ ಶೈಲಿ, ಸಾರ್ವಜನಿಕ ನೀತಿಗಳು ಹಾಗೂ ಅಭಿವೃದ್ಧಿ ದೃಷ್ಟಿಕೋನವನ್ನು ಸಮಗ್ರವಾಗಿ ಅಧ್ಯಯನ ಮಾಡಲು ಮೈಸೂರು ಅಥವಾ ಬೆಂಗಳೂರು ವಿಶ್ವವಿದ್ಯಾಲಯಗಳಲ್ಲಿ ಎಸ್.ಎಂ.ಕೃಷ್ಣ ಅಧ್ಯಯನ ಪೀಠವನ್ನು ಸ್ಥಾಪಿಸುವುದು ಇಂದಿನ ದಿನಗಳಲ್ಲಿ ಅತ್ಯಗತ್ಯವಾಗಿದೆ.

ಈ ಅಧ್ಯಯನ ಪೀಠದ ಮೂಲಕ ವಿದ್ಯಾರ್ಥಿಗಳು ಮತ್ತು ಸಂಶೋಧಕರು ಅವರ ಆಡಳಿತಾತ್ಮಕ ಕಾರ್ಯಪದ್ಧತಿಗಳನ್ನು ಸಂಶೋಧನೆಗೊಳಪಡಿಸಿ, ಭವಿಷ್ಯದ ಸಾರ್ವಜನಿಕ ಸೇವೆಗೆ ಪೂರಕವಾದ ಜ್ಞಾನವನ್ನು ಪಡೆಯಲು ಸಾಧ್ಯವಾಗುತ್ತದೆ. ಆದ್ದರಿಂದ, ಸರ್ಕಾರವು ಶೀಘ್ರದಲ್ಲೇ ಈ ಅಧ್ಯಯನ ಪೀಠವನ್ನು ಸ್ಥಾಪಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಹಾಗೂ ಇದಕ್ಕಾಗಿ ಸೂಕ್ತ ಅನುದಾನ ಬಿಡುಗಡೆ ಮಾಡುವಂತೆ ಎಸ್.ಎಂ.ಕೃಷ್ಣ ಅವರ ಹುಟ್ಟುಹಬ್ಬದ ದಿನವಾದ ಮೇ 1ರಂದು ಉನ್ನತ ಶಿಕ್ಷಣ ಸಚಿವ ಎಂ.ಸಿ.ಸುಧಾಕರ್ ಅವರಿಗೆ ರಾಜ್ಯ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಉಪಾಧ್ಯಕ್ಷರೂ ಆದ ವಿಧಾನಪರಿಷತ್ ಸದಸ್ಯ ದಿನೇಶ್ ಗೂಳಿಗೌಡ ಅವರು ಪತ್ರ ಮುಖೇನ ಮನವಿ ಮಾಡಿದರು. ಮನವಿಗೆ ತ್ವರಿತವಾಗಿ ಸ್ಪಂದಿಸಿದ ಸಚಿವ ಸುಧಾಕರ್ ಅವರು, ಈ ಸಂಬಂಧ ಪ್ರಸ್ತಾವನೆ ಸಲ್ಲಿಸುವಂತೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಿಗೆ ಸೂಚನೆ ನೀಡಿದ್ದಾರೆ.

ಕೆಪಿಎಸ್‌ಸಿ ಮಾಜಿ ಅಧ್ಯಕ್ಷ ಡಾ.ಹೆಚ್.ಎನ್. ಕೃಷ್ಣ ಸೇರಿದಂತೆ 6 ಮಂದಿ ಆರೋಪಮುಕ್ತ

ಬೆಂಗಳೂರು: ಕರ್ನಾಟಕ ಲೋಕ ಸೇವಾ ಆಯೋಗದ ಮಾಜಿ ಅಧ್ಯಕ್ಷ ಡಾ.ಹೆಚ್.ಎನ್.ಕೃಷ್ಣ ಸೇರಿದಂತೆ ಇತರ ಆರು ಮಂದಿ ವಿರುದ್ಧ ರಾಜ್ಯ ಅಪರಾಧ ತನಿಖಾ ದಳವು ಮಾಡಿದ್ದ ಆರೋಪಗಳಿಂದ ನ್ಯಾಯಾಲಯ ಅವರನ್ನು ಆರೋಪ ಮುಕ್ತಗೊಳಿಸಿದೆ.


ಡಾ.ಹೆಚ್.ಎನ್.ಕೃಷ್ಣ

ಬೆಂಗಳೂರಿನ 1ನೇ ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಏ.30ರಂದು ಈ ಬಗ್ಗೆ ತೀರ್ಪು ನೀಡಿದ್ದು, ಆರೋಪಿಗಳ ವಿರುದ್ಧ ಪ್ರಾಸಿಕ್ಯೂಷನ್ ಮಾಡಿದ್ದ ಆರೋಪಗಳನ್ನು ಸಾಬೀತು ಪಡಿಸುವಲ್ಲಿ ವಿಫಲವಾಗಿದೆ ಎಂದು ನ್ಯಾಯಾಮೂರ್ತಿಗಳು ತಮ್ಮ 54 ಪುಟಗಳ ತೀರ್ಪಿನಲ್ಲಿ ತಿಳಿಸಿದ್ದಾರೆ.

ಅಪರಾಧ ತನಿಖಾ ದಳವು (ಸಿಐಡಿ) ಕೇಸ್ ನಂ.8400/2012ರಲ್ಲಿ ನ್ಯಾಯಾಲಯದ ಮುಂದೆ ಆರೋಪ ಪಟ್ಟಿ ಸಲ್ಲಿಸಿ ಡಾ.ಹೆಚ್.ಎನ್.ಕೃಷ್ಣ ರವರು 1998–99ನೇ ಸಾಲಿನಲ್ಲಿ ನಡೆದ ಗೆಜೆಟೆಡ್ ಪ್ರೊಬೇಷನರಿ ಅಧಿಕಾರಿಗಳ ಹುದ್ದೆಗಳ ಆಯ್ಕೆಯಲ್ಲಿ ಅಧಿಕಾರ ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಆರೋಪಿಸಿತ್ತು. ಈ ಬಗ್ಗೆ 2012ರಿಂದ ನ್ಯಾಯಾಲಯದಲ್ಲಿ ದೀರ್ಘ ವಿಚಾರಣೆ ನಡೆದಿತ್ತು. ಈ ಪ್ರಕರಣದಲ್ಲಿ ಖುಲಾಸೆಗೊಂಡಿರುವ 2 ಮತ್ತು 3ನೇ ಆರೋಪಿಗಳಾದ ಆಶಾ ಪರ್ವಿನ್ ಮತ್ತು ಸಲ್ಮಾ ಫಿರ್ದೋಸ್ ಅವರು ಕೊಟ್ಟ ದಾಖಲೆಗಳನ್ನು ಸಲ್ಲಿಸಿದ್ದಾರೆಂದು ಆರೋಪಿಸಲಾಗಿತ್ತು. ಇತರ ಆರೋಪಿಗಳಾದ ಕೆ.ನಿರಂಜನ್, ಪಿ.ಗೋಪಿ ಕೃಷ್ಣ ಮತ್ತು ಎಂ.ಐ.ಬಣಕಾರ್ ಅವರು ಲೋಕಸೇವಾ ಆಯೋಗದ ಸಿಬ್ಬಂದಿ ಯಾಗಿದ್ದು ಈ ಪ್ರಕರಣದಲ್ಲಿ ಅಧ್ಯಕ್ಷರಿಗೆ ಅಪರಾಧಿಕ ಕೃತ್ಯಗಳನ್ನು ಎಸಗಲು ಸಹಕರಿಸಿದ್ದಾರೆಂದು ಆರೋಪಿಸಿತ್ತು.

ಈ ಎಲ್ಲಾ ಆರೋಪಗಳನ್ನು ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ (ಸಿಐಡಿ) ಸಂಪೂರ್ಣವಾಗಿ ವಿಫಲವಾಗಿದೆ ಎಂದು ತೀರ್ಪಿನಲ್ಲಿ ತಿಳಿಸಿರುವ ನ್ಯಾಯಾಮೂರ್ತಿಗಳು ಎಲ್ಲಾ ಆರೋಪಿಗಳನ್ನು ಆರೋಪಗಳಿಂದ ಖುಲಾಸೆಗೊಳಿಸಿದ್ದಾರೆ.

ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಹುದ್ದೆಗಳಿಗೆ ಅರ್ಜಿ ಆಹ್ವಾನ

ಮೈಸೂರು: ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ಕಚೇರಿಯು ನೇಮಕಾತಿ ಅಧಿಸೂಚನೆಗಳನ್ವಯ ಮೈಸೂರು ನ್ಯಾಯಾಂಗ ಘಟಕದಲ್ಲಿ ಖಾಲಿ ಇರುವ ಶೀಘ್ರಲಿಪಿಗಾರ ಗ್ರೇಡ್ II–4 ಹುದ್ದೆಗಳು, ಬೆರಳಚ್ಚು–ನಕಲುಗಾರರು–3 ಹುದ್ದೆಗಳು, ಆದೇಶ ಜಾರಿಕಾರರು–11 ಹುದ್ದೆಗಳು, ಸೇವಕರು–75 ಹುದ್ದೆಗಳ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೇ 31ರೊಳಗೆ https://mysuru.dcourts.gov.in/notice-category/recruitments/, http://karnatakajudiciary.kar.nic.in/districtrecruitment.asp ಮೂಲಕ ಅರ್ಜಿ ಸಲ್ಲಿಸಬಹುದು. ಪೂರ್ಣ ಮಾಹಿತಿಯನ್ನು ಮೈಸೂರು ನ್ಯಾಯಾಂಗ ಘಟಕದ ವೆಬ್‌ಸೈಟ್‌ನಲ್ಲಿ ಪರಿಶೀಲಿಸಬಹುದಾಗಿದೆ.

ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಕಿತ್ತಾಟದ ಮಧ್ಯೆ ಮುಖ್ಯಮಂತ್ರಿ ಕುರ್ಚಿಗೆ ಮಲ್ಲಿಕಾರ್ಜುನ ಖರ್ಗೆ ಟವಲ್

ಮೈಸೂರಿನಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ


ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಶನಿವಾರ ಭೇಟಿ ನೀಡಿದ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಮೇ 9, ಚಿತ್ರದುರ್ಗದಲ್ಲಿ ಯಡಿಯೂರಪ್ಪ ಅಭಿಮಾನೋತ್ಸವ

ಚಿತ್ರದುರ್ಗದಲ್ಲಿ ಮೇ 9ರಂದು ಯಡಿಯೂರಪ್ಪ ಅಭಿಮಾನೋತ್ಸವ ನಡೆಯಲಿದ್ದು, ಈ ಕಾರ್ಯಕ್ರಮಕ್ಕೆ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಇಂದು ಆಹ್ವಾನಿಸಿದ್ದೇನೆ. ಸಾವಿರಕ್ಕೂ ಹೆಚ್ಚು ಮಠಾಧೀಶರು ಅಂದಿನ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದು, ಕೇಂದ್ರ ಗೃಹ ಸಚಿವ ಅಮಿತ್ ಶಾ ಸೇರಿ ಇತರೆ ನಾಯಕರು ಭಾಗಿಯಾಗಲಿದ್ದಾರೆ. ಯಡಿಯೂರಪ್ಪ ಅಭಿಮಾನೋತ್ಸವದಲ್ಲಿ ಕರ್ನಾಟಕದ ಎಲ್ಲಾ ಭಾಗಗಳ ಸುಮಾರು 10 ಲಕ್ಷ ಜನರು ಸಾಕ್ಷಿಯಾಗಲಿದ್ದಾರೆ. ಯಡಿಯೂರಪ್ಪ ಅವರ ರಾಜಕೀಯ ಜೀವನಕ್ಕೆ 50 ವರ್ಷವಾಗಿರುವ ಹಿನ್ನೆಲೆಯಲ್ಲಿ ಈ ಕಾರ್ಯಕ್ರಮ ಆಯೋಜಿಸಲಾಗಿದೆ. ಈಗ ಯಾವುದೇ ಚುನಾವಣೆ ಇಲ್ಲದ ಕಾರಣ ಇದರಿಂದ ನನಗಾಗಲೀ ಅಥವಾ ಬಿಜೆಪಿಗಾಗಲೀ ಬೂಸ್ಟ್ ಆಗುವುದಿಲ್ಲ. ಯಡಿಯೂರಪ್ಪ ಅವರ ಮೇಲಿನ ಅಭಿಮಾನದಿಂದ ಸಂಸದ ಗೋವಿಂದ ಕಾರಜೋಳ ಸೇರಿದಂತೆ ಇತರರು ಈ ಕಾರ್ಯಕ್ರಮ ಆಯೋಜನೆ ಮಾಡಿದ್ದಾರೆ. **–ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯಾಧ್ಯಕ್ಷ**

ಮೈಸೂರು, ಮೇ.2(ಬಿಎಲ್‌ಯು)– ಮುಖ್ಯಮಂತ್ರಿ ಗದ್ದುಗೆ ಸಂಬಂಧ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ನಡುವಿನ ಕಿತ್ತಾಟದ ನಡುವೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ತಾನೇ ಸಿಎಂ ಆಗಬೇಕೆಂದು ಟವಲ್ ಹಾಕಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಲೇವಡಿ ಮಾಡಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಶನಿವಾರ ಭೇಟಿ ನೀಡಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರ ಆಶೀರ್ವಾದ ಪಡೆದ ನಂತರ ಪತ್ರಕರ್ತರ ಜೊತೆ ಮಾತನಾಡಿದ ಅವರು, ಮಲ್ಲಿಕಾರ್ಜುನ ಖರ್ಗೆ ಅವರ ಹೇಳಿಕೆಯನ್ನು ಸೂಕ್ಷ್ಮವಾಗಿ ಅವಲೋಕಿಸಿದರೆ ಮುಖ್ಯಮಂತ್ರಿ ಸ್ಥಾನದ ಬದಲಾವಣೆ ಆಗುವುದು ಖಚಿತ ಎಂದು ಅಭಿಪ್ರಾಯಪಟ್ಟರು.

ಕಾಂಗ್ರೆಸ್ ಪಕ್ಷದಲ್ಲಿ ಹಲವರು ಅಧಿಕಾರಕ್ಕೆ ಹಪಾಹಪಿಸುತ್ತಿದ್ದಾರೆ. ಒಂದು ತಂಡ ಡಿ.ಕೆ.ಶಿವಕುಮಾರ್ ಬೆಂಬಲಿಸಿ ದೆಹಲಿ ಯಾತ್ರೆ ಕೈಗೊಂಡರೆ, ಮತ್ತೊಂದು ತಂಡ ಸಿದ್ದರಾಮಯ್ಯ ಬೆಂಬಲಿಸಿ ದೆಹಲಿಗೆ ಹೋಗಿ ಲಾಬಿ ಮಾಡುತ್ತಿದ್ದಾರೆ. ಹೀಗೆ ಕಿತ್ತಾಟದಲ್ಲಿ ತೊಡಗಿರುವ ಈ ಸರ್ಕಾರದಲ್ಲಿ ಅಭಿವೃದ್ಧಿ ಶೂನ್ಯವಾಗಿದೆ ಎಂದು ವಿಜಯೇಂದ್ರ ಆರೋಪಿಸಿದರು.

ರಾಜ್ಯದಲ್ಲಿ ಡ್ರಗ್ಸ್ ಹಾವಳಿ ಮಿತಿ ಮೀರಿದ್ದು, ಕರ್ನಾಟಕ ಮತ್ತೊಂದು ಉಡ್ತಾ ಪಂಜಾಬ್ ಆಗುತ್ತಿದೆ. ಮೊನ್ನೆ ಧಾರವಾಡದಲ್ಲಿ ಡ್ರಗ್ಸ್ ಸೇವನೆ ಪ್ರಕರಣದಲ್ಲಿ ಯುವಕನಿಂದ ಪೊಲೀಸರು ಐದು ಸಾವಿರ ರೂಪಾಯಿ ಲಂಚ ಪಡೆದಿದ್ದಾರೆ. ಈ ಸರ್ಕಾರಕ್ಕೆ ಮನುಷ್ಯತ್ವವೇ ಇಲ್ಲದೆ ಅಮಾನವೀಯವಾಗಿ ವರ್ತಿಸುತ್ತಿದೆ ಎಂದು ಆಪಾದಿಸಿದರು.

ರಾಜ್ಯದಲ್ಲಿ ಭ್ರಷ್ಟಾಚಾರ ತಾಂಡವವಾಡುತ್ತಿದ್ದು, ಅಭಿವೃದ್ಧಿ ಕಾರ್ಯಗಳು ಮರೀಚಿಕೆಯಾಗಿದೆ. ಸರ್ಕಾರದಲ್ಲಿ ಅಧಿಕಾರ ಉಳಿಸಿಕೊಳ್ಳಲು ಸಮಯ ವ್ಯರ್ಥವಾಗುತ್ತಿದೆಯೇ ಹೊರತು ಜನಪರವಾದ ಯಾವುದೇ ಕೆಲಸ ಮಾಡುತ್ತಿಲ್ಲ ಎಂದು ಟೀಕಿಸಿದರು.

ದಾವಣಗೆರೆ ದಕ್ಷಿಣ ಹಾಗೂ ಬಾಗಲಕೋಟೆ ಉಪ ಚುನಾವಣೆಯಲ್ಲಿ ಬಿಜೆಪಿ ಜಯಭೇರಿ ಬಾರಿಸಲಿದೆ. ನಾವು ಗೆಲ್ಲುವ ವಿಶ್ವಾಸ ಕಳೆದುಕೊಂಡಿದ್ದೇವೆ ಎಂದು ಕಾಂಗ್ರೆಸ್ ನಾಯಕರೇ ನನ್ನ ಬಳಿ ಹೇಳುತ್ತಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ತಿಳಿಸಿದರು.

ಸರ್ಕಾರಿ ಜಮೀನು ಖಾಸಗಿಯವರಿಗೆ ಅಕ್ರಮ ಖಾತೆ ಆರೋಪ

ರಮ್ಮನಹಳ್ಳಿ ಪಪಂ ಮುಖ್ಯಾಧಿಕಾರಿ, ಕಂದಾಯ ನಿರೀಕ್ಷಕರ ಮೇಲೆ ಕ್ರಮ ಜರುಗಿಸದಿದ್ದರೆ ತಾಪಂ ಕಚೇರಿ ಮುಂದೆ ಪ್ರತಿಭಟನೆ

ಮೈಸೂರು, ಮೇ 2(ಜಿಎ)–ಸರ್ಕಾರಿ ಜಮೀನನ್ನು ಖಾಸಗಿಯವರಿಗೆ ಅಕ್ರಮವಾಗಿ ಖಾತೆ ಮಾಡಿಕೊಟ್ಟಿರುವ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹೇಶ್ ಹಾಗೂ ಕಂದಾಯ ನಿರೀಕ್ಷಕ ಮಂಜುನಾಥ್ ಅವರನ್ನು ಈ ಕೂಡಲೆ ಅಮಾನತು ಮಾಡಬೇಕು ಇಲ್ಲದಿದ್ದರೆ ತಾಲೂಕು ಕಛೇರಿ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ನಡೆಸುವುದಾಗಿ ಆಗ್ರಹಿಸಿರುವ ರಮ್ಮನಹಳ್ಳಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಗ್ರಾಮಸ್ಥರ ಪರವಾಗಿ ಸಾಮಾಜಿಕ ಹೋರಾಟಗಾರ ಅರವಿಂದ ಶರ್ಮ ಮಾತನಾಡಿ, ರಮ್ಮನಹಳ್ಳಿ ಸರ್ವೆ ನಂ.259/5 (ಹಳೆ ಸರ್ವೆ ನಂ.259/3)ರ 20.08 ಗುಂಟೆ ಜಮೀನು ಸರ್ಕಾರದ ಜಮೀನಾಗಿದ್ದು, ಈ ಜಮೀನಿನಲ್ಲಿ ಅಕ್ರಮವಾಗಿ ರಚನೆ ಮಾಡಿರುವ ಲೇಔಟ್‌ಗೆ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಮಹೇಶ್ ಹಾಗೂ ಕಂದಾಯ ನಿರೀಕ್ಷಕ ಮಂಜುನಾಥ್ ಭೂ ಮಾಫಿದವರೊಂದಿಗೆ ಸೇರಿ ಅಕ್ರಮವಾಗಿ ಖಾತೆ ಮಾಡಿಕೊಟ್ಟಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಎಲ್ಲಾ ಅಧಿಕಾರಿಗಳಿಗೆ ಸಾಕಷ್ಟು ದೂರು ನೀಡಿದರೂ ಯಾವುದೇ ಕ್ರಮ ಕೈಗೊಂಡಿಲ್ಲ, ಪರಿಣಾಮ ಇದೀಗ ಸರ್ಕಾರಿ ಜಮೀನಿನಲ್ಲಿ ರಚನೆ ಮಾಡಿರುವ 5 ನಿವೇಶನಗಳನ್ನು ಅಮಾಯಕರಿಗೆ ಮಾರಾಟ ಮಾಡಿದ್ದಾರೆ ಎಂದರು.

ಅಮಾಯಕರು ತಾವು ಜೀವಮಾನದಲ್ಲಿ ಕೂಡಿಟ್ಟಿರುವ ಲಕ್ಷಾಂತರ ರೂಪಾಯಿ ಹಣವನ್ನು ಕಳೆದುಕೊಂಡಿದ್ದಾರೆ. ಏ.28 ರಂದು ಭ್ರಷ್ಟ ಮಂಜುನಾಥ್‌ರನ್ನು ಸರ್ಕಾರ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಿಂದ ಮಾತ್ರ ಇಲಾಖೆಗೆ ಎತ್ತಂಗಡಿ ಮಾಡಿದೆ. ಆದರೆ ಮತ್ತಷ್ಟು ಅಕ್ರಮ ಖಾತೆ ಮಾಡಿಕೊಡಲು ಭೂಮಾಫಿಯಾದವರೊಂದಿಗೆ ಒಪ್ಪಂದ ಮಾಡಿಕೊಂಡಿರುವ ಮಂಜುನಾಥ್ ನ್ಯಾಯಾಲಯದ ಮೆಟ್ಟಿಲು ಹತ್ತಿ ಇಲ್ಲಿಯೆ ಉಳಿದುಕೊಳ್ಳಲು ಹೆಣಗಾಡುತ್ತಿದ್ದಾರೆ ಎಂದು ಅವರು ದೂರಿದರು.

ಮಂಜುನಾಥ್ ರಮ್ಮನಹಳ್ಳಿ ಗ್ರಾಮದಲ್ಲಿಯೆ ಮುಂದುವರೆದರೆ ಈ ಹಿಂದೆ ಮಾಡಿರುವ ಅಕ್ರಮ ಖಾತೆಗಳ ಸಾಕ್ಷ್ಯ ನಾಶಪಡಿಸುವ ಸಾಧ್ಯತೆ ಇದ್ದು, ಮತ್ತಷ್ಟು ಸರ್ಕಾರಿ ಜಮೀನುಗಳನ್ನು ಭೂ ಮಾಫಿಯಾದವರ ಪಾಲು ಮಾಡಲಿದ್ದಾರೆ. ಆದ್ದರಿಂದ ಈ ಕೂಡಲೆ ಸರ್ಕಾರಿ ಜಮೀನುಗಳನ್ನು ಖಾಸಗಿಯವರಿಗೆ ಖಾತೆ ಮಾಡಿಕೊಟ್ಟಿರುವ ರಮ್ಮನಹಳ್ಳಿ ಪಟ್ಟಣ ಪಂಚಾಯಿತಿ ಅಧಿಕಾರಿ ಮಹೇಶ್, ಕಂದಾಯ ನಿರೀಕ್ಷಕ ಮಂಜುನಾಥ್‌ರನ್ನು ಈ ಕೂಡಲೆ ಸೇವೆಯಿಂದ ಅಮಾನತು ಮಾಡಬೇಕು ಹಾಗೂ ಸರ್ಕಾರಿ ಜಮೀನನ್ನು ಮಾರಾಟ ಮಾಡಿರುವವರ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ರಮ್ಮನಹಳ್ಳಿ ಪಟ್ಟಣ ಪಂಚಾಯಿತಿಯಲ್ಲಿ ನಡೆದಿರುವ ಅಕ್ರಮದ ಬಗ್ಗೆ ದೂರು ನೀಡಿ ಸಾಕಷ್ಟು ದಿನಗಳು ಕಳೆದರೂ ಯಾವುದೇ ಕ್ರಮವಾಗದಿರುವುದನ್ನು ಗಮನಿಸಿದರೆ ಹಿರಿಯ ಅಧಿಕಾರಿಗಳು ಇದರಲ್ಲಿ ಶಾಮೀಲಾಗಿರಬಹುದೆಂಬ ಅನುಮಾನ ಮೂಡುತ್ತಿದೆ ಎಂದು ಆರೋಪಿಸಿದ ಗ್ರಾಮಸ್ಥರು ಈ ಕೂಡಲೆ ಅಕ್ರಮದಲ್ಲಿ ಭಾಗಿಯಾಗುವವರ ಮೇಲೆ ಕಾನೂನು ಕ್ರಮವಾಗದಿದ್ದರೆ ತಾಲೂಕು ಕಚೇರಿ ಮುಂಭಾಗ ಅನಿರ್ದಿಷ್ಟಾವಧಿ ಧರಣಿ ಸತ್ಯಾಗ್ರಹ ಮಾಡುವುದಾಗಿ, ಅಲ್ಲದೆ ಹಿರಿಯ ಅಧಿಕಾರಿಗಳನ್ನೂ ಸೇರಿಸಿ ನ್ಯಾಯಾಲಯದಲ್ಲಿ ಮೊಕದ್ದಮೆ ದಾಖಲಿಸುವುದಾಗಿ ಎಚ್ಚರಿಸಿದರು.

ಸುದ್ದಿಗೋಷ್ಠಿಯಲ್ಲಿ ಗ್ರಾಮದ ಮುಖಂಡರಾದ ಚೆಲುವಯ್ಯ, ಮಹದೇವು, ಸುರೇಶ್, ಆಡಿಟರ್ ಸುರೇಶ್ ಉಪಸ್ಥಿತರಿದ್ದರು.

ಸುಪ್ರೀಂಕೋರ್ಟ್‌ನಲ್ಲೂ ಟಿಎಂಸಿಗೆ ಹಿನ್ನಡೆ

ಚುನಾವಣಾ ಆಯೋಗದ ನಡೆ ಪ್ರಶ್ನಿಸಿದ್ದ ಅರ್ಜಿ ವಜಾ

ನವದೆಹಲಿ, ಮೇ 02: ಪಶ್ಚಿಮ ಬಂಗಾಳದ ಮತ ಎಣಿಕೆಗೆ ಕೇಂದ್ರ ಸರ್ಕಾರದ ಸಿಬ್ಬಂದಿಯನ್ನು ಮಾತ್ರ ಬಳಸಿಕೊಳ್ಳಬೇಕೆಂಬ ಚುನಾವಣಾ ಆಯೋಗದ ಆದೇಶದ ವಿರುದ್ಧ ತೃಣಮೂಲ ಕಾಂಗ್ರೆಸ್ ಸಲ್ಲಿಸಿದ್ದ (ಟಿಎಂಸಿ) ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ.

ಆ ಮೂಲಕ ನ್ಯಾಯಾಲಯದಲ್ಲಿ ಮಮತಾ ಬ್ಯಾನರ್ಜಿ ನೇತೃತ್ವದ ಟಿಎಂಸಿಗೆ ಹಿನ್ನಡೆಯಾಗಿದೆ. ಈ ಮೊದಲು ಕೋಲ್ಕತ್ತಾ ಹೈಕೋರ್ಟ್ ಕೂಡ ತೃಣಮೂಲ ಕಾಂಗ್ರೆಸ್ ಸಲ್ಲಿಸಿದ್ದ ಅರ್ಜಿಯನ್ನು ತಿರಸ್ಕರಿಸಿತ್ತು. ಅದನ್ನು ಪ್ರಶ್ನಿಸಿ ಟಿಎಂಸಿಯು ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು.

ಮತ ಎಣಿಕೆಯ ಸಂದರ್ಭದಲ್ಲಿ ಪಕ್ಷಗಳ ಪ್ರತಿನಿಧಿಗಳು ಹಾಜರಿರುತ್ತಾರೆ ಮತ್ತು ಚುನಾವಣಾ ಆಯೋಗದ ಸರ್ಕ್ಯುಲರ್ ನಿಯಮಗಳಿಗೆ ವಿರುದ್ಧವಾಗಿಲ್ಲ ಎಂದು ಪೀಠ ವಿಚಾರಣೆ ವೇಳೆ ಅಭಿಪ್ರಾಯಪಟ್ಟಿದೆ. ಟಿಎಂಸಿ ಪರ ವಾದಿಸಿದ್ದ ಹಿರಿಯ ವಕೀಲ ಕಪಿಲ್ ಸಿಬಲ್ ಹಾಗೂ ಮೀನಾಕ್ಷಿ ಅರೋರ, ಏಪ್ರಿಲ್ 13ರ ಸರ್ಕ್ಯುಲರ್ ಬಗ್ಗೆ ಏಪ್ರಿಲ್ 29ರವರೆಗೆ ಮಾಹಿತಿ ಸಿಗಲಿಲ್ಲ ಎನ್ನುವ ಮೂಲಕ ಆಯೋಗದ ನಿರ್ಧಾರವನ್ನು ಪ್ರಶ್ನಿಸಿದ್ದರು. ಆದರೆ ಚುನಾವಣಾ ಆಯೋಗ ಪರ ವಾದಿಸಿದ ಹಿರಿಯ ವಕೀಲ ಡಿ.ಎಸ್. ನಾಯ್ಡು, ಮತ ಎಣಿಕೆ ಪ್ರಕ್ರಿಯೆಯ ಮೇಲಿನ ಸಂಪೂರ್ಣ ನಿಯಂತ್ರಣ ರಾಜ್ಯ ಸರ್ಕಾರದ ಅಧಿಕಾರಿಯಾಗಿರುವ ರಿಟರ್ನಿಂಗ್ ಅಧಿಕಾರಿ ಕೈಯಲ್ಲೇ ಇರುತ್ತದೆ ಎಂದು ನ್ಯಾಯಾಲಯಕ್ಕೆ ತಿಳಿಸಿದ್ದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಮೂರ್ತಿ ಬಾಗ್ಚಿ ಅವರಿದ್ದ ಪೀಠ, ಕೌಂಟಿಂಗ್ ಅಧಿಕಾರಿ ಕೇಂದ್ರ ಸರ್ಕಾರದ ಪ್ರತಿನಿಧಿ ಎಂದು ಹೇಳುವುದರಿಂದ ವಿಶೇಷ ವ್ಯತ್ಯಾಸವಿಲ್ಲ. ಇಂತಹ ನಿರ್ಧಾರಗಳು ಚುನಾವಣಾ ಆಯೋಗದ ವ್ಯಾಪ್ತಿಗೆ ಸೇರುತ್ತವೆ. ಜೊತೆಗೆ, ಪಕ್ಷಗಳಿಂದ ನೇಮಕಗೊಂಡ ಕೌಂಟಿಂಗ್ ಏಜೆಂಟ್‌ಗಳು, ಮೈಕ್ರೋ ಅಬ್ಸರ್ವರ್‌ಗಳು ಸೇರಿದಂತೆ ಹಲವಾರು ಮೇಲ್ವಿಚಾರಣಾ ವ್ಯವಸ್ಥೆಗಳು ಈಗಾಗಲೇ ಇವೆ ಎಂಬುದನ್ನು ಉಲ್ಲೇಖಿಸಿ ಟಿಎಂಸಿ ಸಲ್ಲಿಸಿದ್ದ ಅರ್ಜಿ ವಜಾಗೊಳಿಸಿದೆ.

ಎಸ್.ಎಂ.ಕೃಷ್ಣ ಅಕ್ಷರ, ಆರೋಗ್ಯಕ್ಕೆ ಆದ್ಯತೆ ನೀಡಿದ್ದರು

ಎಂಎಲ್‌ಸಿ ಅಡಗೂರು ಹೆಚ್.ವಿಶ್ವನಾಥ್ ಸ್ಮರಣೆ

ಮೈಸೂರು,ಮೇ 2(ಎಂಟಿವೈ)– ದೂರದೃಷ್ಟಿತ್ವದ ಆಡಳಿತಗಾರರೂ ಆಗಿದ್ದ ಮಾಜಿ ಮುಖ್ಯಮಂತ್ರಿ ದಿ. ಎಸ್.ಎಂ. ಕೃಷ್ಣ ಅವರ ಆಡಳಿತಾವಧಿಯಲ್ಲಿ ರಾಜ್ಯದಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳಾದವು ಎಂದು ವಿಧಾನಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಬಣ್ಣಿಸಿದ್ದಾರೆ.



ಮೈಸೂರಿನ ಗೋಕುಲಂನ 2ನೇ ಹಂತದ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಆಯೋಜಿಸಿದ್ದ ಎಸ್.ಎಂ.ಕೃಷ್ಣ 94ನೇ ಜನ್ಮ ದಿನಾಚರಣೆ ಕಾರ್ಯಕ್ರಮದಲ್ಲಿ ವಿಧಾನ ಪರಿಷತ್ ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ ಮಾತನಾಡಿದರು. ಚಿತ್ರದಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ವಿಧಾನ ಪರಿಷತ್ ಸದಸ್ಯ ಅಡಗೂರು ಹೆಚ್.ವಿಶ್ವನಾಥ್ ಇತರರನ್ನು ಕಾಣಬಹುದು.

ಮೈಸೂರಿನ ಗೋಕುಲಂನ 2ನೇ ಹಂತದಲ್ಲಿರುವ ಇಂಟರ್‌ನ್ಯಾಷನಲ್ ಯೂತ್ ಹಾಸ್ಟೆಲ್ ಸಭಾಂಗಣದಲ್ಲಿ ಹೆಬ್ಬಾಳು ಫೌಂಡೇಶನ್ ಹಾಗೂ ಎಸ್.ಎಂ.ಕೃಷ್ಣ ಅಭಿಮಾನಿ ಬಳಗದ ವತಿಯಿಂದ ಶುಕ್ರವಾರ ಆಯೋಜಿಸಿದ್ದ ಎಸ್.ಎಂ.ಕೃಷ್ಣ 94ನೇ ಜನ್ಮ ದಿನಾಚರಣೆಯಲ್ಲಿ ಎಸ್‌ಎಂಕೆ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ಅವರು, ಎಸ್.ಎಂ.ಕೃಷ್ಣ ತಾವು ಮುಖ್ಯಮಂತ್ರಿಯಾಗಿದ್ದಾಗ, ಅಕ್ಷರ ಮತ್ತು ಆರೋಗ್ಯಕ್ಕೆ ಮಹತ್ವ ನೀಡಿದರೆ ರಾಜ್ಯದಲ್ಲಿ ಸುಧಾರಣೆ ಸಾಧ್ಯ ಎಂದು ಮನಗಂಡು, ಪ್ರಾಥಮಿಕ ಶಿಕ್ಷಣದಿಂದ ಉನ್ನತ ಶಿಕ್ಷಣದವರೆಗೆ ಆದ್ಯತೆ ನೀಡಿದ್ದರು. ಬಡ ಜನರ ಕಣ್ಣೀರು ಒರೆಸಲು ಯಶಸ್ವಿನಿ ಯೋಜನೆ ಜಾರಿಗೆ ತಂದು, ಲಕ್ಷಾಂತರ ಜನರಿಗೆ ಆರೋಗ್ಯಭಾಗ್ಯ ಕೊಟ್ಟರು ಎಂದರು.

ಎಸ್.ಎಂ.ಕೃಷ್ಣ ಅವರ ಸಂಪುಟದಲ್ಲಿ ನಾನು ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವನಾಗಿದ್ದೆ. ಉತ್ತರ ಕರ್ನಾಟಕದ ಮಕ್ಕಳು ಹಸಿವಿನಿಂದ ಬಳಲುತ್ತಿದ್ದ ದಯಾನೀಯ ಪರಿಸ್ಥಿತಿಯು ಅವರ ಗಮನಕ್ಕೆ ತಂದಾಗ, ಮಕ್ಕಳು ಹಸಿವಿನಿಂದ ಕಲಿಯಬಾರದು ಎಂದು ಮಧ್ಯಾಹ್ನದ ಬಿಸಿಯೂಟ ಯೋಜನೆ ಜಾರಿಗೆ ತಂದರು. ಈ ಯೋಜನೆಗೆ ದೇಶಾದ್ಯಂತ ಮೆಚ್ಚುಗೆ ವ್ಯಕ್ತವಾಯಿತು. ರಾಷ್ಟ್ರಪತಿಗಳು ನನ್ನನ್ನು ಹೊಸ ದೆಹಲಿಗೆ ಕರೆಸಿ ಸನ್ಮಾನಿಸಿ ಮೆಚ್ಚುಗೆ ವ್ಯಕ್ತಪಡಿಸಿದ್ದರು ಎಂದು ಸ್ಮರಿಸಿದರು.

ಕೃಷ್ಣರ ದೂರದೃಷ್ಟಿತ್ವದಿಂದ ಬೆಂಗಳೂರಿಗೆ ಐಟಿ, ಬಿಟಿ ಕಂಪನಿಗಳು ಬಂದವು. ಇದರಿಂದ ನೌಕರರು ಲಕ್ಷಾಂತರ ಸಂಬಳ ಎಣಿಸಲು ಸಾಧ್ಯವಾಯಿತು. ಆರ್ಥಿಕ ನೀತಿ ಬದಲಾವಣೆ ಮಾಡಿದ ಕೀರ್ತಿ ಕೃಷ್ಣರಿಗೆ ಸಲ್ಲುತ್ತದೆ. ಮಹಿಳೆಯರು ದುಡಿದರೆ ಕುಟುಂಬ ನಿರ್ವಹಣೆಗೆ ಅನುಕೂಲವಾಗುತ್ತದೆ ಎಂದು ಸ್ತ್ರೀ ಶಕ್ತಿ ಯೋಜನೆ ಜಾರಿಗೆ ತಂದರು. ವಿಭಿನ್ನ ಹಾಗೂ ಜನೋಪಯೋಗಿ ಕೆಲಸದ ಮೂಲಕ ಕೃಷ್ಣ ಅವರು ಸದಾ ಜನರ ಮನಸ್ಸಿನಲ್ಲಿ ಉಳಿಯಲಿದ್ದಾರೆ ಎಂದು ಬಣ್ಣಿಸಿದರು.

ವಿಧಾನಪರಿಷತ್ ಮಾಜಿ ಉಪ ಸಭಾಪತಿ ಮರಿತಿಬ್ಬೇಗೌಡ ಮಾತನಾಡಿ, ಎಸ್.ಎಂ.ಕೃಷ್ಣರಲ್ಲಿ ಸಮಯ ಪಾಲನೆ, ಶಿಸ್ತು, ಸಾಮಾಜಿಕ ಬದ್ಧತೆ ಇದ್ದುದರಿಂದ ಅವರ ಆಡಳಿತಾವಧಿಯಲ್ಲಿ ರಾಜ್ಯದಲ್ಲಿ ಸಾಕಷ್ಟು ಸುಧಾರಣೆಗಳಾದವು. ರಾಜ್ಯವನ್ನ ಅಭಿವೃದ್ಧಿ ಪಥದತ್ತ ತೆಗೆದುಕೊಂಡು ಹೋಗಿದ್ದರು. ಲೋಕಸಭೆ, ರಾಜ್ಯಸಭೆ, ವಿಧಾನಸಭೆ, ವಿಧಾನಪರಿಷತ್ ಹೀಗೆ ನಾಲ್ಕು ಸದನಗಳ ಸದಸ್ಯರಾಗಿ ಸ್ಥಾನಕ್ಕೆ ಯಾವುದೇ ಚ್ಯುತಿ ಬರದಂತೆ ಕೆಲಸ ನಿರ್ವಹಿಸಿ ಸೈ ಎನ್ನಿಸಿಕೊಂಡಿದ್ದರು. ರೈತರಿಗಾಗಿ ಕಂಪ್ಯೂಟರೈಸ್ಡ್ ಭೂಮಿ ಯೋಜನೆ ಜಾರಿಗೆ ತಂದರು. ಮಲೆ ಮಹದೇಶ್ವರ ಬೆಟ್ಟಕ್ಕೆ ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲ ಸೌಕರ್ಯ ಕಲ್ಪಿಸಿದರು ಎಂದು ಸ್ಮರಿಸಿದರು.

ಆದಿ ಚುಂಚನಗಿರಿ ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ. ಲಿಂಗರಾಜು, ಮುಖಂಡ ಕೆ.ಎಂ.ಬಸವೇಗೌಡ ಮತ್ತಿತರರು ಉಪಸ್ಥಿತರಿದ್ದರು.


ಬೈಕ್ ಸವಾರನ ತಲೆ ಮೇಲೆ ಟಿಪ್ಪರ್ ಹರಿದು ಸಾವು

ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ನಲ್ಲಿ ದುರಂತ

ಮೈಸೂರು, ಮೇ 2(ಬಿಎಲ್‌ಯು)– ಬೈಕ್ ಸವಾರನ ತಲೆ ಮೇಲೆ ಟಿಪ್ಪರ್ ಹರಿದ ಪರಿಣಾಮ ಆತ ಸ್ಥಳದಲ್ಲೇ ಮೃತಪಟ್ಟಿರುವ ಘಟನೆ ಬೋಗಾದಿ ರಿಂಗ್ ರೋಡ್ ಜಂಕ್ಷನ್‌ನಲ್ಲಿ ಶನಿವಾರ ಸಂಜೆ ಸಂಭವಿಸಿದೆ.

ಮೃತಪಟ್ಟ ಬೈಕ್ ಸವಾರನಿಗೆ 45 ವರ್ಷ ವಯಸ್ಸಾಗಿದ್ದು, ಸದ್ಯ ಆತನ ವಿವರ ಇನ್ನೂ ತಿಳಿದುಬಂದಿಲ್ಲ.

ಹಿನಕಲ್ ಕಡೆಯಿಂದ ಬೋಗಾದಿ ರಿಂಗ್ ರೋಡ್ ಸರ್ವಿಸ್ ರಸ್ತೆಯಿಂದ ಬೈಕ್ ಸವಾರ ಬರುತ್ತಿದ್ದನು. ಈ ವೇಳೆ ಎದುರಿನಿಂದ ಬಂದ ಟಿಪ್ಪರ್ ಬೈಕ್‌ನ ಹ್ಯಾಂಡಲ್‌ಗೆ ತಗುಲಿದೆ. ಆ ವೇಳೆ ಬೈಕ್ ಸವಾರ ಆಕಸ್ಮಿಕವಾಗಿ ಬಲ ಭಾಗಕ್ಕೆ ಬಿದ್ದಿದ್ದಾನೆ.



ಬೈಕ್ ಸವಾರ ಕೆಳಗೆ ಬಿದ್ದಿರುವುದನ್ನು ಟಿಪ್ಪರ್ ಚಾಲಕ ಗಮನಿಸದೆ ಮುಂದೆ ಸಾಗಿದ್ದಾನೆ. ಇದರಿಂದ ಟಿಪ್ಪರ್‌ನ ಹಿಂಬದಿ ಚಕ್ರ ಬೈಕ್ ಸವಾರನ ತಲೆ ಮೇಲೆ ಹರಿದು ಸ್ಥಳದಲ್ಲೇ ಮೃತಪಟ್ಟನು.

ವಿಷಯ ತಿಳಿದ ಕೆ.ಆರ್.ಸಂಚಾರಿ ಪೊಲೀಸ್ ಇನ್ಸ್‌ಪೆಕ್ಟರ್ ಪಿ.ಮಹದೇವಸ್ವಾಮಿ, ಎಎಸ್‌ಐಗಳಾದ ಗಣೇಶ್, ಅಶ್ವಿನಿ ಹಾಗೂ ಸಿಬ್ಬಂದಿ ಸ್ಥಳಕ್ಕೆ ಆಗಮಿಸಿ ಪರಿಶೀಲನೆ ನಡೆಸಿದರು.

ಈ ಅಪಘಾತದಿಂದ ರಿಂಗ್ ರಸ್ತೆಯಲ್ಲಿ ಕೆಲ ಕಾಲ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತ್ತು. ತರುವಾಯ ಟಿಪ್ಪರ್ ತೆರವುಗೊಳಿಸಿದ ಪೊಲೀಸರು ವಾಹನ ಸಂಚಾರ ವ್ಯವಸ್ಥೆಗೊಳಿಸಿದರು. ಮೃತ ಬೈಕ್ ಸವಾರ ಬಾರ್‌ನಲ್ಲಿ ಕೆಲಸ ಮಾಡುತ್ತಿರುವ ಬಗ್ಗೆ ಸದ್ಯಕ್ಕೆ ಪೊಲೀಸರಿಗೆ ಮಾಹಿತಿ ದೊರೆತಿದೆ. ಈತನ ವಾಸಸ್ಥಳ, ಕುಟುಂಬಸ್ಥರ ಬಗ್ಗೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ. ಈ ಸಂಬಂಧ ಕೆ.ಆರ್.ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬಿವಿಎ ಪದವಿ ಕೋರ್ಸ್‌ಗಳಿಗೆ ಪ್ರವೇಶಾತಿ ಆರಂಭ

ಮೈಸೂರು: ಮೈಸೂರಿನ ವಿಜಯನಗರ 2ನೇ ಹಂತದಲ್ಲಿರುವ ಶ್ರೀ ಕಲಾನಿಕೇತನ ಸ್ಕೂಲ್ ಆಫ್ ಆರ್ಟ್ ವತಿಯಿಂದ 2026–27ನೇ ಸಾಲಿನ ಚಿತ್ರಕಲೆಯಲ್ಲಿ ದೃಶ್ಯಕಲಾ ಮೂಲ ಮತ್ತು ಬಿವಿಎ ಪದವಿ ಕೋರ್ಸ್‌ಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಉತ್ತೀರ್ಣ ಅಥವಾ ಅನುತ್ತೀರ್ಣರಾದ ವಿದ್ಯಾರ್ಥಿಗಳು ಪ್ರವೇಶ ಪಡೆಯಬಹುದು. ಅರ್ಜಿ ಸಲ್ಲಿಸಲು ಮೇ 12 ಕೊನೇ ದಿನ. ಹೆಚ್ಚಿನ ಮಾಹಿತಿಗೆ ಮೊ: 9884475238, 9742918181 ಸಂಪರ್ಕಿಸಬಹುದು.

ದೇಶ - ವಿದೇಶ

ಕಾರಣ ನೀಡದೆ ವ್ಯಕ್ತಿಗೆ 3 ತಿಂಗಳು ಜೈಲುವಾಸ; ಕೋರ್ಟ್ ತರಾಟೆ

ಅಲಹಾಬಾದ್: ಕಾರಣಗಳನ್ನು ನೀಡದೆ ವ್ಯಕ್ತಿಯೊಬ್ಬರನ್ನು 3 ತಿಂಗಳ ಕಾಲ ಜೈಲಿನಲ್ಲಿ ಇರಿಸಿದ್ದನ್ನು ಅಲಹಾಬಾದ್ ಹೈಕೋರ್ಟ್‌ನ ಲಕ್ನೋ ಪೀಠ ತೀವ್ರವಾಗಿ ಖಂಡಿಸಿದೆ. ಅಲ್ಲದೆ ಈ ಕ್ರಮವನ್ನು ಸಂವಿಧಾನಬಾಹಿರ ಎಂದು ಘೋಷಿಸಿ, 10 ಲಕ್ಷ ದಂಡ ವಿಧಿಸಿದೆ. ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ವಿಚಾರಣೆ ನಡೆಸಿದ ನ್ಯಾಯಮೂರ್ತಿ ಅಬ್ದುಲ್ ಮೊಯಿನ್ ಮತ್ತು ನ್ಯಾಯಮೂರ್ತಿ ಪ್ರಮೋದ್ ಕುಮಾರ್ ಶ್ರೀವಾಸ್ತವ ಅವರ ವಿಭಾಗೀಯ ಪೀಠವು ಈ ಆದೇಶವನ್ನು ನೀಡಿದೆ.



ದಂಡದ ಮೊತ್ತವನ್ನು ವ್ಯಕ್ತಿಯ ಅಕ್ರಮ ಬಂಧನಕ್ಕೆ ಕಾರಣರಾದ ಅಧಿಕಾರಿಗಳಿಂದ ವಸೂಲಿ ಮಾಡಬಹುದು ಎಂದು ನ್ಯಾಯಾಲಯವು ಸರ್ಕಾರಕ್ಕೆ ನಿರ್ದೇಶಿಸಿದೆ. ಉತ್ತರ ಪ್ರದೇಶದ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಸೇರಿದಂತೆ ಉನ್ನತ ಅಧಿಕಾರಿಗಳ ಸ್ಥಿತಿಯೇ ಹೀಗಿದ್ದರೆ, ರಾಜ್ಯದ ಇತರ ಅಧಿಕಾರಿಗಳು ಯಾವ ಮಟ್ಟದಲ್ಲಿ ಕಾರ್ಯನಿರ್ವಹಿಸುತ್ತಿರಬಹುದು ಎಂದು ಇದೇ ವೇಳೆ ಕಳವಳ ವ್ಯಕ್ತಪಡಿಸಿದೆ. ಸುಪ್ರೀಂ ಕೋರ್ಟ್‌ನ ವಿವಿಧ ತೀರ್ಪುಗಳನ್ನು ಉಲ್ಲೇಖಿಸಿದ ಅಲಹಾಬಾದ್ ಹೈಕೋರ್ಟ್, ಯಾವುದೇ ವ್ಯಕ್ತಿಯನ್ನು ಬಂಧಿಸಲು ಲಿಖಿತ ಆಧಾರಗಳನ್ನು ಒದಗಿಸುವುದು ಸಾಂವಿಧಾನಿಕ ಬಾಧ್ಯತೆಯಾಗಿದ್ದು, ಇದನ್ನು ನಿರ್ಲಕ್ಷಿಸುವುದು ನಾಗರಿಕರ ಮೂಲಭೂತ ಹಕ್ಕುಗಳ ನೇರ ಉಲ್ಲಂಘನೆಯಾಗುತ್ತದೆ ಎಂದಿದೆ.

ಜರ್ಮನಿಯಿಂದ ಸೈನಿಕರ ಹಿಂಪಡೆಯಲು ಮುಂದಾದ ಅಮೆರಿಕ

ವಾಷಿಂಗ್ಟನ್: ಇರಾನ್ ಮೇಲಿನ ಯುದ್ಧದಲ್ಲಿ ಅಮೆರಿಕಗೆ ಯುರೋಪಿಯನ್ ದೇಶಗಳ ಬೆಂಬಲ ಸಿಗದ ಕಾರಣ ಮಿತ್ರ ರಾಷ್ಟ್ರಗಳ ನಡುವೆ ಭಿನ್ನಮತ ಉಂಟಾಗಿದ್ದು, ಜರ್ಮನಿಯಲ್ಲಿನ ತನ್ನ ಸುಮಾರು 5 ಸಾವಿರ ಸೈನಿಕರನ್ನು ಹಿಂತೆಗೆದುಕೊಳ್ಳುತ್ತಿರುವುದಾಗಿ ಅಮೆರಿಕ ಘೋಷಣೆ ಮಾಡಿದೆ. ಇರಾನ್ ಯುದ್ಧದ ವಿಚಾರವಾಗಿ ಜರ್ಮನಿಯ ಚಾನ್ಸಲರ್ ಹಾಗೂ ಅಮೆರಿಕ ಅಧ್ಯಕ್ಷರ ನಡುವಿನ ಇತ್ತೀಚಿನ ವಾಕ್ಸಮರದ ನಡುವೆ ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಈ ಆದೇಶವನ್ನು ಹೊರಡಿಸಿದ್ದಾರೆ. ಈ ಕುರಿತು ಹೇಳಿಕೆ ನೀಡಿದ ಯುಎಸ್ ರಕ್ಷಣಾ ಇಲಾಖೆಯ ವಕ್ತಾರರಾದ ಸೀನ್ ಪಾರ್ನೆಲ್, ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್ಸೆತ್ ಅವರು ಜರ್ಮನಿಯಿಂದ ಸುಮಾರು 5,000 ಸೈನಿಕರನ್ನು ಹಿಂತೆಗೆದು ಕೊಳ್ಳುವಂತೆ ಆದೇಶಿಸಿದ್ದಾರೆ. ಮುಂದಿನ 6–12 ತಿಂಗಳುಗಳ ಅವಧಿಯೊಳಗೆ ಅಲ್ಲಿಂದ ಸೈನಿಕರನ್ನು ಹಿಂತೆಗೆದುಕೊಳ್ಳುವಿಕೆಯ ಕಾರ್ಯ ಪೂರ್ಣಗೊಳ್ಳುತ್ತದೆ ಎಂದು ನಾವು ನಿರೀಕ್ಷಿಸುತ್ತೇವೆ ಎಂದು ತಿಳಿಸಿದ್ದಾರೆ. ಇಟಲಿ ಹಾಗೂ ಸ್ಪೇನ್ ರಾಷ್ಟ್ರಗಳನ್ನು ಗುರಿಯಾಗಿಸಿಕೊಂಡಿರುವ ಟ್ರಂಪ್ ಈ ದೇಶಗಳಲ್ಲಿನ ತಮ್ಮ ಸೈನಿಕರ ನಿಯೋಜನೆಯನ್ನು ಸಹ ಹಿಂಪಡೆಯುವುದಾಗಿ ಬೆದರಿಕೆಯೊಡ್ಡಿದ್ದಾರೆ.



16 ವರ್ಷದ ಬಾಲಕಿ ಗರ್ಭಪಾತಕ್ಕೆ ಗುಜರಾತ್ ಹೈಕೋರ್ಟ್ ಅನುಮತಿ

ಅಹಮದಾಬಾದ್: ಅತ್ಯಾಚಾರ ಸಂತ್ರಸ್ತೆ 16 ವರ್ಷದ ಬಾಲಕಿ ಗರ್ಭಪಾತಕ್ಕೆ ಗುಜರಾತ್ ಹೈಕೋರ್ಟ್ ಅನುಮತಿ ನೀಡಿ ಮಹತ್ವದ ತೀರ್ಪು ಪ್ರಕಟಿಸಿದೆ.



22 ವಾರಗಳ ಗರ್ಭಿಣಿಯಾಗಿರುವ ಜಾಮ್‌ನಗರದ 16 ವರ್ಷದ ಬಾಲಕಿಯು ಗರ್ಭಪಾತಕ್ಕೆ ಅನುಮತಿ ನೀಡುವಂತೆ ಕೋರಿ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯ ವಿಚಾರಣೆ ನಡೆಸಿದ ಕೋರ್ಟ್, ಗರ್ಭಪಾತಕ್ಕೆ ಅನುಮತಿ ನೀಡುವುದರ ಜೊತೆಗೆ ವೈದ್ಯಕೀಯ ಪರೀಕ್ಷೆಗೂ ಒಳಗಾಗುವಂತೆ ತಿಳಿಸಿದೆ. ಅತ್ಯಾಚಾರ ಆರೋಪಿಗಳ ವಿರುದ್ಧ ವತ್ವಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಪ್ರಕರಣದ ಸೂಕ್ಷ್ಮತೆ ಮತ್ತು ಗಂಭೀರತೆ ಪರಿಗಣಿಸಿದ ಕೋರ್ಟ್, ಅಹಮದಾಬಾದ್ ಸಿವಿಲ್ ಆಸ್ಪತ್ರೆಗೆ ನಿರ್ದೇಶಿಸಿ ಬಾಲಕಿಯ ವೈದ್ಯಕೀಯ ಪರೀಕ್ಷೆ ವರದಿ ಪಡೆದಿತ್ತು. ಗರ್ಭಪಾತದಿಂದ ಬಾಲಕಿಗೆ ಯಾವುದೇ ಅಪಾಯವಿಲ್ಲ ಎಂಬ ವರದಿ ಆಧಾರದ ಮೇಲೆ, ಅಪ್ರಾಪ್ತೆಯ ಗರ್ಭಪಾತಕ್ಕೆ ಹೈಕೋರ್ಟ್ ಅನುಮತಿ ನೀಡಿ ಆದೇಶಿಸಿದೆ. ಇದಕ್ಕೆ ಅಪ್ರಾಪ್ತೆಯರ ಒಪ್ಪಿಗೆ ಪಡೆಯುವುದು ಕಡ್ಡಾಯ. ತನಿಖೆಗಾಗಿ ಭ್ರೂಣದ ಡಿಎನ್‌ಎ ಮಾದರಿಯನ್ನು ತನಿಖಾಧಿಕಾರಿಗೆ ಹಸ್ತಾಂತರಿಸಬೇಕು. ಗರ್ಭಪಾತದ ವೇಳೆ ಮಗು ಜೀವಂತವಾಗಿ ಜನಿಸಿದರೆ ಆ ಮಗುವಿಗೆ ಪೂರ್ಣ ವೈದ್ಯಕೀಯ ಚಿಕಿತ್ಸೆ ಮತ್ತು ಆರೈಕೆ ಒದಗಿಸಬೇಕು ಎಂದು ನ್ಯಾಯಾಲಯವು ಸೂಚಿಸಿದೆ.

ಇರಾನ್ ಡ್ರೋನ್ ನಾಶಕ್ಕೆ ಯುಎಇಗೆ 'ಐರನ್ ಬೀಮ್' ಲೇಸರ್ ಕೊಟ್ಟ ಇಸ್ರೇಲ್

ಟೆಲ್ ಅವೀವ್: ಇರಾನಿನ ಡ್ರೋನ್‌ಗಳನ್ನು ನಾಶಪಡಿಸಬಲ್ಲ ಐರನ್ ಬೀಮ್ ಎಂಬ ಲೇಸರ್ ಆಯುಧವನ್ನು ಇಸ್ರೇಲ್ ಯುಎಇಗೆ ಕಳುಹಿಸಿದೆ. ಇರಾನ್ ಗಲ್ಫ್ ದೇಶಗಳ ಮೇಲೆ ದಾಳಿ ನಡೆಸುತ್ತಿದ್ದಾಗ ಇಸ್ರೇಲ್ ತನ್ನ ಐಕಾನಿಕ್ ಐರನ್ ಡೋಮ್ ವಾಯು ರಕ್ಷಣಾ ವ್ಯವಸ್ಥೆಯನ್ನು ಯುನೈಟೆಡ್ ಅರಬ್ ಎಮಿರೇಟ್ಸ್‌ಗೆ ರವಾನಿಸಿದೆ. ಅಲ್ಲದೇ, ಇರಾನಿನ ಕ್ಷಿಪಣಿಗಳು, ಡ್ರೋನ್‌ಗಳಿಂದ ತನ್ನನ್ನು ರಕ್ಷಿಸಿಕೊಳ್ಳಲು ಯುಎಇಗೆ ಸುಧಾರಿತ ಲೇಸರ್ ಅನ್ನು ಇಸ್ರೇಲ್ ಕಳುಹಿಸಿದೆ. ಮುಂದುವರಿದ ಲೇಸರ್ ನಿಯೋಜನೆಯು ಇಸ್ರೇಲ್ ಮತ್ತು ಯುಎಇ ನಡುವಿನ ಪ್ರಮುಖ ರಕ್ಷಣಾ ಸಹಕಾರದ ಮೊದಲ ಉದಾಹರಣೆಗಳಲ್ಲಿ ಒಂದಾಗಲಿದೆ. ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ 2020ರ ಅಬ್ರಹಾಂ ಒಪ್ಪಂದಗಳಿಗೆ ಮಧ್ಯಸ್ಥಿಕೆ ವಹಿಸುವವರೆಗೂ ಎರಡೂ ದೇಶಗಳು ರಾಜತಾಂತ್ರಿಕ ಸಂಬಂಧಗಳನ್ನು ಹೊಂದಿರಲಿಲ್ಲ. ಶಹೆದ್‌ಗಳಿಂದ ಬರುವ ಡ್ರೋನ್‌ಗಳಿಂದ ತನ್ನನ್ನು ತಾನು ರಕ್ಷಿಸಿಕೊಳ್ಳಲು ಇಸ್ರೇಲ್ ಯುಎಇಗೆ ಸ್ಪೆಕ್ಟ್ರೋ ಎಂದು ಕರೆಯಲ್ಪಡುವ ಸುಧಾರಿತ ಕಣ್ಗಾವಲು ಸಿಸ್ಟಮ್ ಅನ್ನು ಕಳುಹಿಸಿತು. ಯುಎಇಗೆ ಕಳುಹಿಸಲಾದ ಆಕ್ರಮಣಕಾರಿ ಮತ್ತು ರಕ್ಷಣಾತ್ಮಕ ವ್ಯವಸ್ಥೆಗಳು ಹೆಚ್ಚಾಗಿ ಮೂಲಮಾದರಿಗಳಾಗಿವೆ. ಟೆಲ್ ಅವಿವ್ ತನ್ನ ಐರನ್ ಬೀಮ್ ಲೇಸರ್ ರಕ್ಷಣಾ ವ್ಯವಸ್ಥೆಯ ಆವೃತ್ತಿಯನ್ನು ಯುಎಇಗೆ ಕಳುಹಿಸಿದೆ.



ಜೂನ್, ಜುಲೈನಲ್ಲಿ ಎಐಆರ್ ಅಂತರ ರಾಷ್ಟ್ರೀಯ ವಿಮಾನ ಹಾರಾಟ ಕಡಿತ!

ನವದೆಹಲಿ: ವಿಮಾನ ಇಂಧನ ದರಗಳಲ್ಲಿನ ಭಾರೀ ಏರಿಕೆ ಹಾಗೂ ಮುಂದುವರಿದ ವಾಯುಪ್ರದೇಶದ ನಿರ್ಬಂಧಗಳ ಹಿನ್ನೆಲೆಯಲ್ಲಿ ತನ್ನ ಹಲವು ಅಂತರರಾಷ್ಟ್ರೀಯ ವಿಮಾನಗಳ ಸಂಚಾರವನ್ನು ಜೂನ್ ಮತ್ತು ಜುಲೈ ತಿಂಗಳವರೆಗೆ ಕಡಿತಗೊಳಿಸಲು ಏರ್ ಇಂಡಿಯಾ ನಿರ್ಧರಿಸಿದೆ. ಅಂತರರಾಷ್ಟ್ರೀಯ ವಿಮಾನ ಸೇವೆಗಳು ನಷ್ಟದಲ್ಲಿದ್ದು, ಪ್ರಸ್ತುತ ಉದ್ಭವಿಸಿರುವ ಸವಾಲಿನ ಪರಿಸ್ಥಿತಿಯಿಂದಾಗಿ ವಿಮಾನಗಳ ಹಾರಾಟದ ವೇಳಾಪಟ್ಟಿ ಕಡಿತಗೊಳಿಸುವುದನ್ನು ಬಿಟ್ಟು ನಮಗೆ ಬೇರೆ ದಾರಿಯಿಲ್ಲ ಎಂದು ಏರ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ (ಸಿಇಒ) ಮತ್ತು ವ್ಯವಸ್ಥಾಪಕ ನಿರ್ದೇಶಕ ಕ್ಯಾಂಪ್‌ಬೆಲ್ ವಿಲ್ಸನ್ ಹೇಳಿದ್ದಾರೆ.



ಪಶ್ಚಿಮ ಏಷ್ಯಾ ಸಂಘರ್ಷದಿಂದಾಗಿ ವಿಮಾನ ಇಂಧನ ಬೆಲೆಯಲ್ಲಿ ಭಾರೀ ಏರಿಕೆಯಾಗಿದೆ. ಜೊತೆಗೆ ವಾಯುಪ್ರದೇಶದ ನಿರ್ಬಂಧಗಳಿಂದಾಗಿ ಏರ್ ಇಂಡಿಯಾ ವಿಮಾನಗಳು ತಮ್ಮ ಅಂತರರಾಷ್ಟ್ರೀಯ ನಿಲ್ದಾಣಗಳನ್ನು ತಲುಪಲು ಸುದೀರ್ಘ ಮಾರ್ಗಗಳನ್ನು ಬಳಸಬೇಕಾಗಿದೆ. ಇದು ಹೆಚ್ಚಿನ ಇಂಧನ ಬಳಕೆಗೆ ಕಾರಣವಾಗಿದೆ. ಏರ್ ಇಂಡಿಯಾ ಈಗಾಗಲೇ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೆಲವು ವಿಮಾನಗಳ ಹಾರಾಟವನ್ನು ಕಡಿತಗೊಳಿಸಿತ್ತು. ಆದರೆ ಸಮಸ್ಯೆಗಳು ಹಾಗೆಯೇ ಮುಂದುವರಿದಿರುವುದರಿಂದ ಜೂನ್ ಮತ್ತು ಜುಲೈ ತಿಂಗಳುಗಳಲ್ಲೂ ವಿಮಾನಗಳ ಸಂಚಾರವನ್ನು ಮತ್ತಷ್ಟು ಕಡಿತಗೊಳಿಸಲು ಸಂಸ್ಥೆ ಮುಂದಾಗಿದೆ.

ನಿಷೇಧಿತ ಮಾದಕ ವಸ್ತುಗಳ ಮಾರಾಟದ ಆರೋಪಿ ಬಳ್ಳಾರಿ ಜೈಲಿಗೆ

ಮಡಿಕೇರಿ: ಜಾಮೀನು ಪಡೆದು ಹೊರ ಬಂದ ನಂತರವೂ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುಗಳ ಮಾರಾಟ ಮಾಡುವ ಪ್ರಕರಣದಲ್ಲಿ ತೊಡಗಿಸಿ ಕೊಂಡಿದ್ದ ಆರೋಪಿಯನ್ನು ಬಂಧಿಸಿ ಬಳ್ಳಾರಿಯ ಕೇಂದ್ರ ಕಾರಾಗೃಹಕ್ಕೆ ಸ್ಥಳಾಂತರಿಸಲಾಗಿದೆ.



ನಾಪೋಕ್ಲು ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಕೆ.ಯು.ಅಶ್ರಫ್(38) ಡ್ರಗ್ ಪೆಡ್ಲರ್ ಆರೋಪಿ ಯಾಗಿದ್ದಾನೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದುಮಣಿ ತಿಳಿಸಿದ್ದಾರೆ. ಈತನ ವಿರುದ್ಧ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುಗಳ ಮಾರಾಟ ಮಾಡುತ್ತಿರುವ ಸಂಬಂಧ ಒಟ್ಟು 6 ಪ್ರಕರಣಗಳು ದಾಖಲಾಗಿದೆ. ಈ ಪೈಕಿ 2 ಪ್ರಕರಣಗಳಲ್ಲಿ ಶಿಕ್ಷೆಯಾಗಿದ್ದು ಉಳಿದ 4 ಪ್ರಕ ರಣಗಳು ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿವೆ ಎಂದು ಎಸ್.ಪಿ. ಹೇಳಿದ್ದಾರೆ.

ಆರೋಪಿ ರೂಢಿಗತ ಡ್ರಗ್ ಪೆಡ್ಲರ್ ಆಗಿದ್ದು, ಜಾಮೀನು ಪಡೆದು ಹೊರ ಬಂದ ನಂತರ ಮತ್ತೆ ಅಕ್ರಮವಾಗಿ ನಿಷೇಧಿತ ಮಾದಕ ವಸ್ತುಗಳ ಮಾರಾಟ ಮಾಡುವ ಪ್ರಕರಣದಲ್ಲಿ ತೊಡಗಿಸಿ ಕೊಳ್ಳುತ್ತಿದ್ದ.

ಈ ಕಾರಣದಿಂದ ದಕ್ಷಿಣ ವಲಯ ಪೊಲೀಸ್ ಮಹಾನಿರೀಕ್ಷಕರ ಆದೇಶದಂತೆ ಆರೋಪಿ ಅಶ್ರಫ್ ನನ್ನು ಬಳ್ಳಾರಿ ಕೇಂದ್ರ ಕಾರಾಗೃಹದ ಬಂಧನದಲ್ಲಿಡಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಹಾಕಿ ಅಕಾಡೆಮಿ ಸ್ಥಾಪಿಸಿದರೆ ಕೇಂದ್ರದಿಂದ ಮಾನ್ಯತೆ

ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸೂಕ್ ಮಾಂಡವಿಯಾ ಪ್ರಕಟಣೆ



ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ ನಮ್ಮೆ ಚಾಂಪಿಯನ್ ತಂಡದೊಂದಿಗೆ ಉಪಸ್ಥಿತರಿದ್ದ ಗಣ್ಯರು

ಮಡಿಕೇರಿ, ಮೇ.2–ಕೊಡಗಿನಲ್ಲಿ ಹಾಕಿ ಅಕಾಡೆಮಿ ಸ್ಥಾಪಿಸಿದರೆ ಅದಕ್ಕೆ ಮಾನ್ಯತೆ ಮತ್ತು ಆರ್ಥಿಕ ಬಲ ನೀಡುವ ಕಾರ್ಯವನ್ನು ಮಾಡಲಾಗುತ್ತದೆ. ಕೊಡಗಿನಲ್ಲಿ ಕ್ರೀಡಾ ಬೆಳವಣಿಗೆಯ ನಿಟ್ಟಿನಲ್ಲಿ ಕೇಂದ್ರ ಸರಕಾರದ ಕ್ರೀಡಾ ಇಲಾಖೆ ಎಲ್ಲಾ ರೀತಿಯ ಸಹಕಾರ ನೀಡಲು ಕಟಿ ಬದ್ಧವಾಗಿದೆ ಎಂದು ಕೇಂದ್ರ ಕ್ರೀಡಾ ಸಚಿವ ಡಾ. ಮನ್ಸೂಕ್ ಮಾಂಡವಿಯಾ ಘೋಷಿಸಿದ್ದಾರೆ.

ನಾಪೋಕ್ಲುವಿನ ಜನರಲ್ ತಿಮ್ಮಯ್ಯ ಮೈದಾನದಲ್ಲಿ ನಡೆದ 26ನೇ ವರ್ಷದ ಕೊಡವ ಕೌಟುಂಬಿಕ ಚೇನಂಡ ಕಪ್ ಹಾಕಿ ನಮ್ಮೆಯಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಮಾತನಾಡಿದ ಅವರು, 18 ಮಂದಿ ಒಲಂಪಿಯನ್‌ಗಳನ್ನು ಪುಟ್ಟ ಜಿಲ್ಲೆ ಕೊಡಗು ಕೊಡುಗೆಯಾಗಿ ನೀಡಿದೆ. ಒಲಂಪಿಯನ್‌ಗಳು ದೇಶ, ವಿದೇಶದ ಕ್ರೀಡಾ ಮೈದಾನದಲ್ಲಿ ಪದಕ ಪಡೆದು ದೇಶದ ತ್ರಿವರ್ಣ ಧ್ವಜ ಹಾರಿಸುವ ಸಂದರ್ಭ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿ ಹೆಮ್ಮೆ ಮೂಡುತ್ತದೆ. ಇಂತಹ ಒಲಂಪಿಯನ್‌ಗಳನ್ನು ನೀಡಿದ ಕೊಡಗಿನ ಮಣ್ಣಿಗೆ ನಮಿಸುವುದಾಗಿ ಹೇಳಿದರು.

ರಾಜ್ಯ ಸರಕಾರ ಹಾಕಿ ಕ್ರೀಡೆಗೆ ಕೋಟಿ ರೂ. ಅನುದಾನ ನೀಡುತ್ತಿರುವುದಕ್ಕೆ ಶ್ಲಾಘನೆ ವ್ಯಕ್ತಪಡಿಸಿದರು ಕೊಡಗಿನಲ್ಲಿ ಹಾಕಿ ಮತ್ತು ಶೂಟಿಂಗ್ ಕ್ರೀಡೆ ಖ್ಯಾತಿ ಪಡೆದಿದೆ. ಇದು ನಿರಂತರವಾಗಿ ಮುಂದುವರೆಯಲಿ ಎಂದು ಆಶಿಸಿದರಲ್ಲದೆ, ಹಾಕಿ ಅಕಾಡೆಮಿ ಸ್ಥಾಪಿಸಿದರೆ ಅದಕ್ಕೆ ಮಾನ್ಯತೆ ಮತ್ತು ಆರ್ಥಿಕ ನೆರವು ನೀಡಲು ಕೇಂದ್ರ ಸರಕಾರ ಮತ್ತು ಕೇಂದ್ರ ಕ್ರೀಡಾ ಇಲಾಖೆ ಕಟಿಬದ್ಧವಾಗಿರಲಿದೆ ಎಂದು ಪುನರುಚ್ಚರಿಸಿದರು. ಆ ಮೂಲಕ ಭವಿಷ್ಯದ ದಿನಗಳಲ್ಲಿ ಅಕಾಡೆಮಿ ಮೂಲಕ ಕೊಡವ ಸಮುದಾಯದ ಕ್ರೀಡಾ ಪ್ರತಿಭೆ ರಾಷ್ಟ್ರ ಮತ್ತು ಅಂತರಾಷ್ಟ್ರೀಯ ವೇದಿಕೆಯಲ್ಲಿ ಅರಳುವಂತಾಗಲಿ ಎಂದು ಹಾರೈಸಿದರು.

ಕ್ರೀಡೆಯನ್ನು ಕ್ರೀಡಾಪಟುಗಳ ಉತ್ತೇಜನಕ್ಕೆ ಬಳಸಬೇಕೇ ವಿನಾ ರಾಜಕೀಯಕ್ಕೆ ಬಳಸಬಾರದು ಎಂದು ಅಭಿಪ್ರಾಯಪಟ್ಟ ಸಚಿವರು, ಗ್ರಾಮೀಣ ಪ್ರದೇಶ ಸೇರಿದಂತೆ ದೇಶದಲ್ಲಿನ ಕ್ರೀಡಾ ಪ್ರತಿಭೆಗಳನ್ನು ಖೇಲೋ ಇಂಡಿಯಾ ಮೂಲಕ ಬೆಳಕಿಗೆ ತರುವ ಪ್ರಯತ್ನಗಳು ಸಾಗಿದೆ. 2036ರಲ್ಲಿ ಭಾರತದಲ್ಲಿ ಒಲಂಪಿಕ್ಸ್ ನಡೆಸಲು ಚಿಂತನೆಗಳು ನಡೆದಿದ್ದು, ಈ ಅವಧಿ ಒಳಗಾಗಿ ಭಾರತವನ್ನು 10 ಶ್ರೇಣಿಯ ಕ್ರೀಡಾ ಸಾಧಕ ದೇಶಗಳ ಸಾಲಿನಲ್ಲಿ ನಿಲ್ಲಿಸಬೇಕಿದೆ. ಆ ನಿಟ್ಟಿನಲ್ಲಿಯೂ ಕಾರ್ಯಕ್ರಮಗಳು ನಡೆಯುತ್ತಿವೆ ಎಂದು ಹೇಳಿದರು. ಪ್ರತಿಭೆ ಎಂಬುದನ್ನು ಗೋಲುಗಳ ಆಧಾರದಲ್ಲಿ ಪರಿಗಣಿಸದೇ ಕ್ರೀಡಾ ಕೌಶಲ್ಯದ ಆಧಾರದಲ್ಲಿ ಗಮನಿಸಬೇಕೆಂದು ಸಚಿವರು ಕಿವಿಮಾತು ಹೇಳಿದರು.

ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಭಾರತದ ಕ್ರೀಡಾ ಕ್ಷೇತ್ರಕ್ಕೆ ಕೊಡಗಿನ ಕೊಡುಗೆ ಅಪಾರವಾಗಿದೆ. ಜಿಲ್ಲೆಯ ಬಾಡಗ ಗ್ರಾಮದಲ್ಲಿ 12ಎಕರೆ ಜಾಗದಲ್ಲಿ ಸುಸಜ್ಜಿತ ಕ್ರೀಡಾ ಸಂಕೀರ್ಣ ನಿರ್ಮಾಣವಾಗುತ್ತಿದೆ. 3 ವರ್ಷದೊಳಗೆ ಪೂರ್ಣಗೊಳ್ಳಲಿದ್ದು, ರಾಜ್ಯಸಭಾ ಸದಸ್ಯ ಅಜಯ್ ಮಾಖನ್ 15 ಕೋಟಿ ನೀಡುವುದಾಗಿ ತಿಳಿಸಿದ್ದಾರೆ. ರಾಜ್ಯ ಸರಕಾರ ಬಜೆಟ್ ಮೂಲಕ 30 ಕೋಟಿ ಅನುದಾನ ಒದಗಿಸಿದೆ ಕೇಂದ್ರ ಕ್ರೀಡಾ ಇಲಾಖೆಯಿಂದ ಸೂಕ್ತ ಅನುದಾನ ನೀಡುವಂತೆ ಮನವಿ ಮಾಡಿದರು.

ಸಂಸದ ಯದುವೀರ್ ಒಡೆಯರ್ ಮಾತನಾಡಿ, ಜಿಲ್ಲೆಯಲ್ಲಿ ಶಾಶ್ವತವಾದ ಕ್ರೀಡಾ ಸಂಕೀರ್ಣ ನಿರ್ಮಾಣವಾದಲ್ಲಿ ಎಲ್ಲಾ ಕ್ರೀಡೆಗಳ ಬೆಳವಣಿಗೆಗಳಿಗೆ ಅನುಕೂಲವಾಗಲಿದೆ. ಹಾಕಿಯ ಜೊತೆಯಲ್ಲಿ ಇಲ್ಲಿ ಶೂಟಿಂಗ್ ಕ್ರೀಡೆ ಕೂಡ ಖ್ಯಾತವಾಗಿದ್ದು, ಮಧ್ಯಪ್ರದೇಶದಲ್ಲಿರುವ ಶೂಟಿಂಗ್ ಅಕಾಡೆಮಿ ಮಾದರಿಯಲ್ಲಿ ಜಿಲ್ಲೆಯಲ್ಲಿಯೂ ಶೂಟಿಂಗ್ ಅಕಾಡೆಮಿ ಸ್ಥಾಪಿಸಲು ಅವಕಾಶ ಮಾಡಿಕೊಡುವಂತೆ ಕೇಂದ್ರ ಸಚಿವರಲ್ಲಿ ಮನವಿ ಮಾಡಿದರು. ಚೇನಂಡ ಕುಟುಂಬಸ್ಥರು ಉತ್ತಮ ರೀತಿಯಲ್ಲಿ ಕ್ರೀಡಾಕೂಟ ಆಯೋಜಿಸಿದೆ ಎಂದು ಸಂಸದರು ಶ್ಲಾಘಿಸಿದರು.

ಹಾಕಿ ಅಕಾಡೆಮಿ ಅಧ್ಯಕ್ಷ ಪಾಂಡಂಡ ಕೆ.ಬೋಪಣ್ಣ, ಸರ್ವೋಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶ ಅಜ್ಜಿಕುಟ್ಟಿರ ಎಸ್.ಬೋಪಣ್ಣ ಮಾತನಾಡಿದರು ಕೌಟುಂಬಿಕ ಹಾಕಿ ಪಂದ್ಯಾವಳಿ ಕೊಡವ ಜನಾಂಗಕ್ಕೆ ಹೆಗ್ಗಳಿಕೆಯಾಗಿದೆ ಎಂದರು. ರಾಜ್ಯ ಕ್ರೀಡಾ ಪ್ರಾಧಿಕಾರದ ಉಪಾಧ್ಯಕ್ಷ ಸಿ.ಎಸ್.ಅರುಣ್ ಮಾಚಯ್ಯ, ಚೇನಂಡ ಕುಟುಂಬದ ಪ್ರಮುಖರೂ ಸೇರಿದಂತೆ ಗಣ್ಯರು ಹಾಜರಿದ್ದರು.

ವಿರಾಜಪೇಟೆಯಲ್ಲಿ ಹೈಕೋರ್ಟ್ ಪೀಠ ಸ್ಥಾಪನೆಗೆ ಆಗ್ರಹ



ಹೈಕೋರ್ಟ್ ಪೀಠ ಸ್ಥಾಪನೆಗೆ ಆಗ್ರಹಿಸಿ ಕೊಡಗಿನ ವಕೀಲರು ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ವಿಭುಬಕ್ರು ಅವರಿಗೆ ಮನವಿ ಸಲ್ಲಿಸಿದರು

ವಿರಾಜಪೇಟೆ, ಮೇ.2–ಪಟ್ಟಣದಲ್ಲಿ ರಾಜ್ಯ ಉಚ್ಚ ನ್ಯಾಯಾಲಯದ ಪೀಠವನ್ನು ಸ್ಥಾಪಿಸುವಂತೆ ಆಗ್ರಹಿಸಿ ಕೊಡಗಿನ ವಕೀಲರುಗಳೊಂದಿಗೆ ಸೇರಿ ರಾಜ್ಯ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ವಿಭುಬಕ್ರು ಅವರನ್ನು ಭೇಟಿಮಾಡಿ ಮನವಿ ಸಲ್ಲಿಸಿದ್ದಾರೆ.

ಕೊಡಗಿನ ಬಡ ರೈತರು ಹಾಗೂ ನಾಗರಿಕರು ತಮ್ಮ ವ್ಯಾಜ್ಯಗಳ ಸಂಬಂಧ ಅನಿವಾರ್ಯವಾಗಿ ದೂರದ ಬೆಂಗಳೂರಿಗೆ ಹೋಗಿ ಬರಬೇಕಾಗಿದೆ. ಇದರಿಂದ ಜನರಿಗೆ ಅಪಾರ ಶ್ರಮ ಮತ್ತು ಆರ್ಥಿಕ ನಷ್ಟ ಉಂಟಾಗುತ್ತಿದೆ. ಅದಕ್ಕಾಗಿ ವಿರಾಜಪೇಟೆಯಲ್ಲಿ ರಾಜ್ಯ ಉಚ್ಚ ನ್ಯಾಯಾಲಯ ಪೀಠ ಸ್ಥಾಪಿಸಿ, ಮೈಸೂರು, ಚಿಕ್ಕಮಗಳೂರು, ಮಂಗಳೂರು, ಹಾಸನ, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳನ್ನು ಇದರ ವ್ಯಾಪ್ತಿಗೆ ಒಳಪಡಿಸಬಹುದು. ಬೆಂಗಳೂರಿನ ಉಚ್ಚ ನ್ಯಾಯಲಯದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದರ ಜೊತೆಗೆ ಈ ಎಲ್ಲಾ ಜಿಲ್ಲೆಗಳಿಗೆ ವಿರಾಜಪೇಟೆ ಹತ್ತಿರವಾಗಿದ್ದು. ಅಗತ್ಯ ಮೂಲ ಸೌಕರ್ಯಗಳು ಲಭ್ಯವಿರುವುದರಿಂದ ಕೊಡಗು ಜಿಲ್ಲೆಯ ಅಭಿವೃದ್ಧಿಗೂ ಇದು ಸಹಾಯಕವಾಗುತ್ತದೆ ಎಂದು ಬೆಂಗಳೂರಿನ ಹಿರಿಯ ವಕೀಲರಾದ ಎನ್.ರವೀಂದ್ರನಾಥ್ ಕಾಮತ್, ಎಂ.ಟಿ.ನಾಣಯ್ಯ ಮತ್ತಿತರ ವಕೀಲರು ಸರ್ವೋಚ್ಚ ನ್ಯಾಯಾಲಯದ ಹಿರಿಯ ವಕೀಲ ಎನ್.ರವೀಂದ್ರನಾಥ್ ಕಾಮತ್ ಹಾಗೂ ಉಚ್ಚ ನ್ಯಾಯಾಲಯದ ಹಿರಿಯ ವಕೀಲ ಎಂ.ಟಿ. ನಾಣಯ್ಯ ಮನವಿಯಲ್ಲಿ ಒತ್ತಾಯಿಸಿದ್ದಾರೆ.

ಕಾವೇರಿ ದೇಗುಲದಲ್ಲಿ ವಿಶೇಷ ಆರತಿ ಪೂಜೆ

ಕುಶಾಲನಗರ: ಪಟ್ಟಣದ ಟೋಲ್‌ಗೇಟ್ ಬಳಿಯಲ್ಲಿರುವ ಕಾವೇರಿ ದೇಗುಲದಲ್ಲಿ ಬಾರವಿ ಕಾವೇರಿ ಕನ್ನಡ ಸಂಘದ ವತಿಯಿಂದ ವೈಶಾಖ ಪೂರ್ಣಿಮೆ ಅಂಗ ವಾಗಿ ಶುಕ್ರವಾರ ಸಂಜೆ ವಿಶೇಷ ಆರತಿ ಪೂಜಾ ಕಾರ್ಯಕ್ರಮವು ಜರುಗಿತು.


ಕಾವೇರಿ ಪ್ರತಿಮೆಗೆ ಹಾಲು, ತುಪ್ಪ, ಜೇನು, ಎಳನೀರು, ಅರಿಶಿನ, ಕುಂಕುಮಗಳಿಂದ ಅಭಿಷೇಕ ಮಾಡಲಾಯಿತು. ಅರ್ಚಕ ಪುರುಷೋತ್ತಮ್ ಭಟ್ ನೇತೃತ್ವದಲ್ಲಿ ಕಾವೇರಿ ಪ್ರತಿಮೆಗೆ ವಿಶೇಷ ಪೂಜೆ ಸಲ್ಲಿಸಿ ಆರತಿ ಬೆಳಗಲಾಯಿತು. ಬೆಂಗಳೂರಿನ ಕೌಶಿಕ್ ಸುನಂದಾ ಕುಟಂಬಸ್ಥರಿಂದ ದಿನದ ಪೂಜಾ ಸೇವಾರ್ಥ ನಡೆಯಿತು. ನೆರೆದಿದ್ದ ಭಕ್ತರಿಗೆ ಅನ್ನಸಂತರ್ಪಣೆ ನಡೆಸಲಾಯಿತು. ಬಾರವಿ ಕಾವೇರಿ ಕನ್ನಡ ಸಂಘದ ಪ್ರಮುಖರಾದ ಬಬೀಂದ್ರ ಪ್ರಸಾದ್, ವಿಜಯೇಂದ್ರ ಪ್ರಸಾದ್, ರವೀಂದ್ರ ಪ್ರಸಾದ್,ಚಂದ್ರು ಇತರರು ಪಾಲ್ಗೊಂಡಿದ್ದರು.

ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಮುನ್ನೆಚ್ಚರಿಕೆ ವಹಿಸಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಜಿಲ್ಲಾ ಉಸ್ತುವಾರಿ ಸಚಿವರ ಖಡಕ್ ಸೂಚನೆ

ಮಂಡ್ಯ,ಮೇ 2– ಬೇಸಿಗೆಯ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಅಧಿಕಾರಿಗಳು ಗಮನಹರಿಸಬೇಕು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದ್ದಾರೆ

ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ಅಗತ್ಯಕ್ಕಿಂತ ಹೆಚ್ಚು ಮಳೆಯಾಗದಿರುವ ಹಿನ್ನಲೆಯಲ್ಲಿ ಸಭೆ ಮಾಡಲಾಗಿದ್ದು, ಕುಡಿಯುವ ನೀರಿಗೆ ಸಮಸ್ಯೆಯಾಗದ ರೀತಿಯಲ್ಲಿ ಅಗತ್ಯ ಕ್ರಮ ಕೈಗೊಳ್ಳಬೇಕು ವರ್ಷದ ಆರಂಭದ ಹಿನ್ನಲೆಯಲ್ಲಿ ಕ್ರಿಯಾ ಯೋಜನೆ ರೂಪಿಸಿ ಅದಕ್ಕೆ ಅನುಮತಿ ಪಡೆದು ಜೂನ್‌ಗೆ ಕಾರ್ಯಯೋಜನೆ ಮಾಡಬೇಕು. ಬರಗಾಲದ ಹಿನ್ನಲೆಯಲ್ಲಿ ಎಲ್ಲಾ ಅಧಿಕಾರಿಗಳು ಪ್ರತಿ ವಾರ ಟಾಸ್ಕ್ ಪೋರ್ಸ್ ಸಭೆ ಮಾಡಬೇಕು ಕುಡಿಯುವ ನೀರಿಗೆ ಸಮಸ್ಯೆಯಾಗದ ರೀತಿಯಲ್ಲಿ ಕ್ರಮ ಕೈಗೊಳ್ಳಬೇಕು ಇಲ್ಲದಿದ್ದರೆ ಅಂತಹ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.



ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಶನಿವಾರ ನಡೆದ ತ್ರೈಮಾಸಿಕ ಸಭೆಯಲ್ಲಿ ಸಚಿವ ಚಲುವರಾಯಸ್ವಾಮಿ ಅಭಿನಂದಿಸಿದರು.

ಜಿ.ಪಂ ಸಿಇಓ ಕೆ.ಆರ್.ನಂದಿನಿ ಮಾತನಾಡಿ, ಜಿಲ್ಲೆಯ 289 ಗ್ರಾಮಗಳಲ್ಲಿ 256 ಕಡೆ ಖಾಸಿಗೆ ಬೋರ್‌ವೆಲ್ ಬಾಡಿಗೆ ಪಡೆದು ನೀರು ಸರಬ ರಾಜು ಮಾಡಲಾಗುತ್ತಿದೆ ಈಗಾಗಲೇ 167 ಕೊಳವೆ ಬಾವಿಯಲ್ಲಿ ನೀರಿನ ಅಭಾವ ಇದೆ ಕುಡಿಯುವ ನೀರಿಗೆ ಸಮಸ್ಯೆಯಾಗದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುತ್ತಿದೆ ಇನ್ನು ಕೆಲವೆಡೆ ನೀರಿನ ಗುಣಮಟ್ಟದ ಪರೀಕ್ಷೆ ಮಾಡಲಾಗಿದೆ ಎಂದು ಮಾಹಿತಿ ನೀಡಿದರು.

ಜಿಲ್ಲೆಯಲ್ಲಿ ಉತ್ತಮ ಸಾಧನೆ ಮಾಡಿದ ಅಧಿಕಾರಿಗಳಿಗೆ ಹಾಗೂ ಕೇಂದ್ರ ಲೋಕ ಸೇವಾ ಆಯೋಗದಲ್ಲಿ ಶೈಕ್ಷಣಿಕವಾಗಿ ಸಾಧನೆ ಮಾಡಿದ ಸಾಧಕರಿಗೆ ಹಾಗೂ ಎಸ್‌ಎಸ್‌ಎಲ್‌ಸಿ, ದ್ವಿತೀಯ ಪಿಯುಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಅಭಿನಂದಿಸಲಾಯಿತು. ಶಾಸಕರಾದ ಪಿ.ಎಂ.ನರೇಂದ್ರ ಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಪಿ.ರವಿಕುಮಾರ್ ಗಣಿಗ, ದರ್ಶನ್ ಪುಟ್ಟಣಯ್ಯ, ಹೆಚ್.ಟಿ.ಮಂಜು, ವಿಧಾನ ಪರಿಷತ್ ಸದಸ್ಯ ದಿನೇಶ್ ಗೂಳಿಗೌಡ, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಡಾ. ವಿ.ಜೆ.ಶೋಭಾರಾಣಿ, ಅಪರ ಜಿಲ್ಲಾಧಿಕಾರಿ ಶಿವನಂದಾಮೂರ್ತಿ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಡ್ಯ ವಕೀಲರ ಸಂಘದಿಂದ 'ಕೃಷ್ಣ ಸಂಸ್ಮರಣೆ'; ಪ್ರೇಮ ಕೃಷ್ಣ ಅವರಿಂದ ಧನ್ಯವಾದ ಅರ್ಪಣೆ

ಮಂಡ್ಯ: ಮಾಜಿ ಮುಖ್ಯಮಂತ್ರಿ ದಿವಂಗತ ಎಸ್.ಎಂ.ಕೃಷ್ಣ ಅವರ ಜನ್ಮ ದಿನದ ಹಿನ್ನೆಲೆಯಲ್ಲಿ ಮಂಡ್ಯ ಜಿಲ್ಲಾ ವಕೀಲರ ಸಂಘದ ವತಿಯಿಂದ ಶನಿವಾರ 'ಕೃಷ್ಣ ಸಂಸ್ಮರಣೆ' ಕಾರ್ಯಕ್ರಮ ಹಮ್ಮಿಕೊಂಡಿರುವುದಕ್ಕೆ ಎಸ್.ಎಂ.ಕೃಷ್ಣ ಅವರ ಕುಟುಂಬ ಧನ್ಯವಾದ ತಿಳಿಸಿದೆ.



ಎಸ್.ಎಂ.ಕೃಷ್ಣ

ಈ ಸಂಬಂಧ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಟಿ.ಎಸ್.ಸತ್ಯಾನಂದ ಅವರಿಗೆ ಪತ್ರ ಬರೆದಿರುವ ಕೃಷ್ಣ ಅವರ ಧರ್ಮಪತ್ನಿ ಪ್ರೇಮಾ ಕೃಷ್ಣ ಅವರು, ಕಾರ್ಯಕ್ರಮದ ಆಹ್ವಾನ ಮತ್ತು ಆಯೋಜನೆಗೆ ಎಸ್.ಎಂ.ಕೃಷ್ಣರವರ ಕುಟುಂಬವರ್ಗದಿಂದ ಧನ್ಯವಾದ ಎಂದು ತಿಳಿಸಿದ್ದಾರೆ. ವಕೀಲರಾಗಿ ತಮ್ಮ ವೃತ್ತಿ ಜೀವನ ಪ್ರಾರಂಭಿಸಿದ ಕೃಷ್ಣರವರು ಮಂಡ್ಯ ಜಿಲ್ಲೆ ಜನರ ಪ್ರೀತಿ–ಗೌರವದಿಂದ 50 ವರ್ಷಗಳಿಗೂ ಹೆಚ್ಚು ಕಾಲ ಸಕ್ರಿಯ ರಾಜಕಾರಣದಲ್ಲಿರಲು ಸಾಧ್ಯವಾಯಿತು. ಸೋಮನಹಳ್ಳಿಯಿಂದ ಸೌತ್ ಬ್ಲಾಕ್‌ವರೆಗಿನ ಕೃಷ್ಣರವರ ರಾಜಕೀಯ ಪ್ರಯಾಣದಲ್ಲಿ ಮಂಡ್ಯ ಜಿಲ್ಲೆ ಜನತೆಯ ಸಹಕಾರ ಸಾಕ್ಷಿದೆ. ಕೃಷ್ಣರವರಿಗೂ ತಮ್ಮ ಜನ್ಮಸ್ಥಳವಾದ ಮದ್ದೂರು ಹಾಗೂ ಮಂಡ್ಯ ಜಿಲ್ಲೆಯ ಬಗ್ಗೆ ಅಪಾರ ಪ್ರೀತಿಯಿತ್ತು. ಇಂಡಿಯಾ ರಾಜಕಾರಣಕ್ಕೂ ಮಂಡ್ಯ ರಾಜಕಾರಣಕ್ಕೂ ತುಂಬಾ ವ್ಯತ್ಯಾಸವಿದೆ. ಮಂಡ್ಯ ಜಿಲ್ಲೆಯ ಜನ ಸ್ವಾಭಿಮಾನಿಗಳು ಹಾಗೂ ಅತ್ಯಂತ ಸೂಕ್ಷ್ಮ ಮನಸ್ಥಿತಿ ಉಳ್ಳವರು ಎಂದು ಕೃಷ್ಣ ಅವರು ಹಲವು ಬಾರಿ ಹೇಳಿದ್ದಾರೆ. ನಿಮ್ಮ ಪ್ರೀತಿ–ವಿಶ್ವಾಸದಿಂದ ರಾಜ್ಯ ಹಾಗೂ ರಾಷ್ಟ್ರದಲ್ಲಿ ಕೃಷ್ಣರವರು ಅಲಂಕರಿಸಿದ ಎಲ್ಲಾ ಹುದ್ದೆಗಳಿಗೂ ಗೌರವ ತಂದುಕೊಟ್ಟಿದ್ದಾರೆ.

ಕೃಷ್ಣರವರ ಮರಣದ ನಂತರವೂ ಅಪಾರ ಪ್ರೀತಿ ವ್ಯಕ್ತಪಡಿಸು ತ್ತಿರುವುದು ನಮ್ಮ ಕುಟುಂಬವರ್ಗಕ್ಕೆ ಅತ್ಯಂತ ಸಂತಸ ತಂದಿದೆ. ಡಾ.ಸುಧಾಕರ್, ದಿನೇಶ್ ಗೂಳಿಗೌಡ ಅವರಂತಹ ಸಾಕಷ್ಟು ಜನ ಕೃಷ್ಣರವರ ಆಪ್ತರಾಗಿ ಅವರ ಆದರ್ಶವನ್ನು ಪಾಲಿಸಿಕೊಂಡು ಬಂದಿದ್ದಾರೆ. ಕೃಷ್ಣರವರ ಮಾರ್ಗದರ್ಶನದಲ್ಲಿ ಬೆಳೆದು ಹಲವಾರು ಶಾಸಕರು, ಸಚಿವರು ಅತ್ಯಂತ ಸೃಜನಶೀಲತೆಯಿಂದ ಕಾರ್ಯೋನ್ಮುಖರಾಗಿರುವುದು ಶ್ಲಾಘನೀಯವಾಗಿದೆ ಎಂದು ಪ್ರೇಮ ಕೃಷ್ಣ ಅವರು ತಿಳಿಸಿದ್ದಾರೆ.

ಇದೇ ವೇದಿಕೆಯಲ್ಲಿ 75 ವಸಂತಗಳನ್ನು ಪೂರೈಸಿರುವ ಮಾಜಿ ಶಾಸಕರಾದ ಎಂ.ಶ್ರೀನಿವಾಸ್ ಅವರಿಗೂ ಅಭಿನಂದನಾ ಸಮರ್ಪಣೆ ಕಾರ್ಯಕ್ರಮ ನಡೆಯುತ್ತಿರುವುದು ಸಂತಸದ ವಿಷಯ. ಈ ವೇಳೆ ಶ್ರೀನಿವಾಸ್‌ರವರಿಗೆ ನನ್ನ ಶುಭಾಶಯಗಳನ್ನು ತಿಳಿಸುತ್ತೇನೆ. ಕೃಷ್ಣರವರ ಜೀವನಕ್ಕೆ ಭದ್ರ ಭುನಾದಿ ಹಾಕಿದ್ದು ರಾಮಕೃಷ್ಣ ವಿದ್ಯಾಶಾಲೆ. ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಸ್ವಾಮೀಜಿ ಶ್ರೀ ಮುಕ್ತಿದಾನಂದ ಮಹಾರಾಜ್‌ಜೀ ದಿವ್ಯ ಸಾನಿಧ್ಯ, ಉಸ್ತುವಾರಿ ಸಚಿವ ಚಲುವರಾಯಸ್ವಾಮಿಯವರ ಉಪಸ್ಥಿತಿ ಸಂತಸ ತಂದಿದೆ. ಕಾರ್ಯಕ್ರಮವು ಅತ್ಯಂತ ಯಶಸ್ವಿಯಾಗಿ ನಡೆಯಲಿ ಎಂದು ಪ್ರಾರ್ಥಿಸುತ್ತೇನೆ. ಸ್ವಾಮೀಜಿಯವರಿಗೆ ಹಾಗೂ ಕಾರ್ಯಕ್ರಮದಲ್ಲಿರುವ ಅತಿಥಿ ಮಹೋದಯರಿಗೆ ನನ್ನ ನಮಸ್ಕಾರಗಳು ಎಂದಿದ್ದಾರೆ.

ಅನುಮಾನಾಸ್ಪದ ರೀತಿಯಲ್ಲಿ ಗೃಹಿಣಿ ಶವಪತ್ತೆ



ಮಂಡ್ಯ, ಮೇ 2–ನೀರಿನ ಕೊಳದಲ್ಲಿ ಅನುಮಾನಾಸ್ಪದ ರೀತಿಯಲ್ಲಿ ಗೃಹಿಣಿ ಶವ ಪತ್ತೆಯಾಗಿರುವ ಘಟನೆ ತಾಲೂಕಿನ ಜವನಹಳ್ಳಿ ಗ್ರಾಮದಲ್ಲಿ ನಡೆದಿದೆ.

ಜವನಹಳ್ಳಿ ಗ್ರಾಮದ ಬ್ಯಾಟೇಗೌಡ ಎಂಬಾತನ ಪತ್ನಿ ನಾಗವೇಣಿ(24) ಎಂಬಾಕೆಯೇ ಮೃತ ದುರ್ದೈವಿಯಾಗಿದ್ದು, ಮೃತ ನಾಗವೇಣಿ ಪೋಷಕರು ಆಕೆಯ ಪತಿ ಬ್ಯಾಟೇಗೌಡನ ವಿರುದ್ಧ ಕೊಲೆ ಆರೋಪ ಮಾಡಿದ್ದಾರೆ.

ಬ್ಯಾಟೇಗೌಡ ಮಗಳಿಗೆ ವರದಕ್ಷಿಣೆ ಕಿರುಕುಳ ನೀಡಿ ಕೊಂದಿದ್ದಾನೆಂದು ಪೋಷಕರು ಆರೋಪಿಸಿದ್ದು, ಕೊಳದಿಂದ ಮೃತ ದೇಹವನ್ನು ಹೊರ ತೆಗೆದು ಮರಣೋತ್ತರ ಪರೀಕ್ಷೆಗೆ ಮಿಮ್ಸ್ ಆಸ್ಪತ್ರೆಗೆ ರವಾನಿಸಲಾಗಿದೆ.

ಸ್ಥಳದಲ್ಲಿ ಮೃತ ನಾಗವೇಣಿ ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದ್ದು, ಬ್ಯಾಟೇಗೌಡ ಮತ್ತವರ ಕುಟುಂಬಸ್ಥರ ವಿರುದ್ಧ ಆಕ್ರೋಶ ವ್ಯಕ್ತ ಪಡಿಸಿದ್ದಾರೆ. ಘಟನೆ ಸಂಬಂಧ ಶಿವಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುರಿದ ಮಳೆಗೆ ಮನೆಗಳಿಗೆ ನುಗ್ಗಿದ ನೀರು

ಮೇಲುಕೋಟೆ: ಪಟ್ಟಣದಲ್ಲಿ ಗುರುವಾರ ಮತ್ತು ಶುಕ್ರವಾರ ಸಂಜೆ ಗಂಟೆಗೂ ಹೆಚ್ಚು ಕಾಲ ಗುಡುಗು ಮಿಂಚಿನಿಂದ ಕೂಡಿದ ಧಾರಾಕಾರ ಮಳೆ ಸುರಿದ ಪರಿಣಾಮ ಮುಖ್ಯರಸ್ತೆಯಲ್ಲಿರುವ ಎರಡು ಮನೆಗಳಿಗೆ ನೀರು ನುಗ್ಗಿದ ಪರಿಣಾಮ ಮನೆಯವರು ಸಂಕಷ್ಟ ಎದುರಿಸುವಂತಾಯಿತು ಆದರೆ ಯಾವುದೇ ಆಸ್ತಿಪಾಸ್ತಿ ನಷ್ಟ ಸಂಭವಿಸಿದ ಬಗ್ಗೆ ವರದಿಯಾಗಿಲ್ಲ.



ಪೇಟೆ ಆಂಜನೇಯಸ್ವಾಮಿ ದೇವಾಲಯದ ಪಕ್ಕದಲ್ಲಿರುವ ಮೆಡಿಕಲ್ ಸೋಮಶೇಖರ್ ಮನೆಗೆ ರಾಜಬೀದಿಯಲ್ಲಿ ಹರಿಯುವ ನೀರು ನುಗ್ಗಿದೆ ಮತ್ತೊಂದೆಡೆ ತಿರುಮಂಗಿ ಆಳ್ವಾರ್ ಬೀದಿಯಲ್ಲಿರುವ ಕಾಂಚನಮಾಲಾರವರ ಮನೆಗೆ ರಸ್ತೆಯಲ್ಲಿ ಹರಿದು ಚರಂಡಿಗೆ ಸೇರಬೇಕಾದ ನೀರು ನುಗ್ಗಿದ ಪರಿಣಾಮ ಎರಡೂ ಮನೆಗಳು ಕೊಳದಂತಾಗಿ ಪರದಾಡುವಂತಾಯಿತು. ರಾಜಬೀದಿಯಿಂದ ಹರಿದು ಬರುವ ಮಳೆಯ ನೀರು ಸರಾಗವಾಗಿ ಚರಂಡಿಗೆ ಸೇರಲು ಸಮರ್ಪಕವಾದ ವ್ಯವಸ್ಥೆ ಮಾಡದ ಕಾರಣ ಮಳೆಬಂದಾಗಲೆಲ್ಲ ನಮ್ಮ ಮನೆಗಳಿಗೆ ನೀರುನುಗ್ಗುತ್ತಿದೆ. ಗ್ರಾಪಂಗೆ ಮನವಿ ಮಾಡಿದ್ದೇವೆ. ಶಾಸಕ ದರ್ಶನ್ ಪುಟ್ಟಣಯ್ಯರ ಗಮನಕ್ಕೂ ತಂದಿದ್ದೇವೆ. ಎಂದು ಅನಿಲ್ ಕುಮಾರ್ ಹೇಳಿದ್ದಾರೆ.

ಬೀದಿನಾಯಿ ಕಡಿತ: ನಾಲ್ವರಿಗೆ ಗಾಯ

ಭಾರತೀನಗರ: ಬೀದಿನಾಯಿ ಕಡಿತಕ್ಕೊಳಗಾಗಿ ನಾಲ್ವರು ಗಂಭೀರ ಗಾಯಗೊಂಡಿರುವ ಘಟನೆ ಇಲ್ಲಿಗೆ ಸಮೀಪದ ಗೌಡಯ್ಯನದೊಡ್ಡಿ ಗ್ರಾಮದಲ್ಲಿ ಜರುಗಿದೆ.

ಗ್ರಾಮದ ಸುಮಿತ್ರ ಸುರೇಶ್(38), ಚನ್ನಮ್ಮ ಲಕ್ಷ್ಮಣ್(48), ಸತೀಶ್‌ಪುಟ್ಟಮರಿಗೌಡ(45), ಮೀಸೆಗೌಡರ ಮಗ ಕುಪ್ಪೇಗೌಡ(55) ಎಂಬುವವರೇ ನಾಯಿ ಕಡಿತದಿಂದ ಗಂಭೀರವಾಗಿ ಗಾಯಗೊಂಡವರಾಗಿದ್ದಾರೆ. ಮಧ್ಯಾಹ್ನ 2 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಊರಿನ ಸುತ್ತ ಮುತ್ತ ಸಂಚರಿಸುತ್ತಿದ್ದ ಜನರಿಗೆ ಕಚ್ಚಿ ಗಾಯಗೊಳಿಸುತ್ತಿದೆ. ಗಾಯಾಳುಗಳನ್ನು ಮಂಡ್ಯ ಜಿಲ್ಲಾಸ್ಪತ್ರೆಗೆ ಚಿಕಿತ್ಸೆಗಾಗಿ ರವಾನಿಸಲಾಗಿದೆ.

ಆಲಂಬಾಡಿ ಕಾವಲು ವಿಷಕಂಠೇಗೌಡ ನಿಧನ



ಕೆ.ಆರ್.ಪೇಟೆ, ಮೇ 2–ತಾಲೂಕಿನ ಆಲಂಬಾಡಿ ಕಾವಲು ಗ್ರಾಮದ ಹಿರಿಯ ಮುಖಂಡ ವಿಷಕಂಠೇಗೌಡ(85) ನಿಧನರಾಗಿದ್ದಾರೆ.

ಮೃತರು ಪತ್ನಿ ರಾಜಮ್ಮ, ಇಬ್ಬರು ಪುತ್ರರು, ಮೂವರು ಪುತ್ರಿಯರು, ಆರ್.ಟಿ.ಓ. ಮಲ್ಲಿಕಾರ್ಜುನ್ ಸೇರಿದಂತೆ ಮೂವರು ಸಹೋದರರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಸಂಜೆ ಮೃತರ ಸ್ವಗ್ರಾಮದಲ್ಲಿ ನಡೆಯಿತು.

ಮೃತರ ನಿಧನಕ್ಕೆ ಮಾಜಿ ಸಚಿವ ಹೆಚ್.ವಿಶ್ವನಾಥ್, ಶಾಸಕರಾದ ಹೆಚ್.ಟಿ ಮಂಜು, ಡಿ.ರವಿಶಂಕರ್, ಹೆಚ್.ಟಿ.ಮಂಜು ಸೇರಿದಂತೆ ವಿವಿಧ ಗಣ್ಯರು, ಗ್ರಾಮಸ್ಥರು ತೀವ್ರ ಸಂತಾಪ ಸೂಚಿಸಿದ್ದಾರೆ.

ಬಸ್ ಪಲ್ಟಿ: 30ಕ್ಕೂ ಅಧಿಕ ಮಂದಿಗೆ ಗಾಯ

ಹನೂರು: ನಿಯಂತ್ರಣ ತಪ್ಪಿದ ಕೆಎಸ್ ಆರ್‌ಟಿಸಿ ಬಸ್ ಪಲ್ಟಿ ಹೊಡೆದ ಪರಿಣಾಮ ಬಸ್‌ನಲ್ಲಿದ್ದ 30ಕ್ಕೂ ಹೆಚ್ಚು ಮಂದಿ ಪ್ರಯಾಣಿಕರು ಗಾಯಗೊಂಡ ಘಟನೆ ಹನೂರು ತಾಲೂಕಿನ ಮಲೆ ಮಹದೇಶ್ವರ ಬೆಟ್ಟ ರಸ್ತೆಯ ತಾಳುಬೆಟ್ಟದ ತಿರುವಿನಲ್ಲಿ ನಡೆದಿದೆ.

ಮಲೆ ಮಹದೇಶ್ವರ ಬೆಟ್ಟದಿಂದ ಕೊಳ್ಳೇಗಾಲದತ್ತ ತೆರಳುತ್ತಿದ್ದ ಬಸ್ (ಕೆಎ–09 ಎಫ್ –5415) ತಾಳುಬೆಟ್ಟದ ತಿರುವಿನಲ್ಲಿ ತಡೆಗೋಡೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿದೆ. ಬಸ್‌ನಲ್ಲಿ 50 ಮಂದಿ ಪ್ರಯಾಣಿಕರಲ್ಲಿ 30ಕ್ಕೂ ಅಧಿಕ ಮಂದಿಗೆ ಗಾಯಗಳಾಗಿದ್ದು ಬಹುತೇಕರಿಗೆ ಗಂಭೀರ ಪೆಟ್ಟುಗಳಾಗಿದೆ.



ಹನೂರು ಬಳಿ ತಡೆಗೋಡೆಗೆ ಡಿಕ್ಕಿ ಹೊಡೆದು ಪಲ್ಟಿಯಾಗಿರುವ ಬಸ್.

ಬಸ್‌ನ ನಿರ್ವಾಹಕಿಯಾದ ಪದ್ಮಾವತಿ ತಲೆಗೆ ತೀವ್ರ ಪೆಟ್ಟಾಗಿದ್ದು, ಮೈಸೂರು ಮೂಲದ ದಾಕ್ಷಾಯಿಣಿ, ಮಧುವನಹಳ್ಳಿ ಗ್ರಾಮದ ದಾಕ್ಷಾಯಿಣಿ, ಸಿದ್ದಯ್ಯನಪುರದ ಸುಂದ್ರಮ್ಮ ಬಸವರಾಜು ಎಂಬವರಿಗೆ ತೀವ್ರಗಾಯಗಳಾಗಿದೆ.

ಎಲ್ಲರಿಗೂ ಕೌದಳ್ಳಿ, ಹನೂರು ಮತ್ತು ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗಿದೆ. ಹುಣ್ಣಿಮೆ ಹಿನ್ನೆಲೆ ವಾಹನ ದಟ್ಟಣೆಯೂ ಅಧಿಕವಾಗಿದ್ದ ಪರಿಣಾಮ ಹತ್ತಾರು ವಾಹನಗಳು ಸಾಲುಗಟ್ಟಿ ನಿಂತು ಟ್ರಾಫಿಕ್ ಜಾಂ ಉಂಟಾಗಿತ್ತು. ಬಳಿಕ, ಪೊಲೀಸರು ಸುಗಮ ಸಂಚಾರಕ್ಕೆ ಅನುವು ಮಾಡಿಕೊಟ್ಟರು.

ಚಾಲಕನ ನಿರ್ಲಕ್ಷ್ಯದಿಂದಲೇ ಬಸ್ ಅಪಘಾತ: ಕೊಳ್ಳೇಗಾಲ ಆಸ್ಪತ್ರೆಯಲ್ಲಿ 25 ಮಂದಿ ಚಿಕಿತ್ಸೆ ಪಡೆದಿದ್ದು ಗಾಯಾಳುಗಳು ಬಸ್ ಚಾಲಕನ ವಿರುದ್ಧ ಆಕ್ರೋಶ ಹೊರ ಹಾಕಿದ್ದಾರೆ. ಬಸ್ಸು ತಿರುವಿನಲ್ಲಿ ಉರುಳುತ್ತಿದ್ದಂತೆ ಚಾಲಕ ಬಸ್ಸಿನಿಂದ ನೆಗೆದು ಪರಾರಿಯಾಗಿದ್ದಾನೆ. ಆರಂಭದಿಂದಲೂ ತುಂಬಾ ವೇಗವಾಗಿ ಬಸ್ ಚಾಲನೆ ಮಾಡು ತ್ತಿದ್ದನು, ಈ ಬಗ್ಗೆ ಎಚ್ಚರಿಸಿದರೂ ಕಿವಿಗೊ ಡಲಿಲ್ಲ, ಅತಿವೇಗ ಮತ್ತು ಅಜಾಗರೂಕತೆ ಯಿಂದ ಈ ಅವಘಡ ಉಂಟಾಗಿದೆ ಎಂದು ಗಾಯಾಳುಗಳು ಕಿಡಿಕಾರಿದರು.

ಬಿಳಿ ಕಡವೆ ದರ್ಶನ

ಚಾಮರಾಜನಗರ: ಜಿಲ್ಲೆಯ ಹನೂರು ತಾಲೂಕಿನ ಮಲೆ ಮಹದೇಶ್ವರ ವನ್ಯಜೀವಿ ವಿಭಾಗದ ಪಿ.ಜಿ.ಪಾಳ್ಯ ಸಫಾರಿಯಲ್ಲಿ ಬಿಳಿ ಕಡವೆ ಕಾಣಿಸಿಕೊಂಡಿದ್ದು, ಸಫಾರಿಗರು ರೋಮಾಂಚನಗೊಂಡಿದ್ದಾರೆ.

ಮಲೆ ಮಹದೇಶ್ವರ ವನ್ಯಜೀವಿಧಾಮದ ಹನೂರು ಬಫರ್ ಜೋನ್ ವಲಯದ ವ್ಯಾಪ್ತಿಯಲ್ಲಿ ಸಫಾರಿಗೆ ತೆರಳಿದ್ದ ವೇಳೆ ಕಡವೆ ಕಾಣಿಸಿಕೊಂಡಿದ್ದು, ಪ್ರವಾಸಿಗರು ತಮ್ಮ ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದು, ಕಡವೆ ಫೋಟೋ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದೆ.

ಇತ್ತೀಚೆಗೆ ಕರಿ ಚಿರತೆ ದರ್ಶನ ಕೊಟ್ಟಿತ್ತು. ಅದಾದ ಬಳಿಕ, ಬಿಳಿ ಕಡವೆಯನ್ನು ಕಂಡು ಪ್ರವಾಸಿಗರು ಪುಳಕಿತಗೊಂಡಿದ್ದಾರೆ.

ಸಫಾರಿಯಲ್ಲಿ ಸಫಾರಿಗರು ಈಗ ಕರಿ ಚಿರತೆ, ಬಿಳಿ ಕಡವೆಯಂತ ಅಪರೂಪದ ಸೈಟಿಂಗ್‌ಗೆ ಫಿದಾ ಆಗಿದ್ದಾರೆ.



ಈ ಕಡವೆ ಬಿಳಿ ಬಣ್ಣವಿರಲು ಇದರಲ್ಲಿ ಮೆಲನಿನ್ ವರ್ಣದ್ರವ್ಯ ಇಲ್ಲದೆ ಇರುವುದು. ಹಾಗಾಗಿ ಪ್ರಾಣಿಗಳು ಬಿಳಿ ಅಥವಾ ಬಿಳಿಚು ಬಣ್ಣ ಹೊಂದಿರುತ್ತವೆ. ಈ ಅನುವಂಶಿಕ ಪರಿಸ್ಥಿತಿಗೆ ಆಲ್ಬಿನಿಸಂ ಅಥವಾ ಲುಸಿಸಿಮ್ ಎಂದು ಕರೆಯಲಾಗುತ್ತದೆ. ಆಲ್ಬಿನಿಸಂ ಇದ್ದರೆ ಪ್ರಾಣಿಗಳ ಕಣ್ಣು ನಸುಗೆಂಪು ಇರುತ್ತದೆ, ಲುಸಿಸಿಮ್ ಇದ್ದರೆ ಕಣ್ಣು ಸಾಮಾನ್ಯ ಬಣ್ಣವಿರುತ್ತದೆ.

– ಸಂಜಯ್ ಗುಬ್ಬಿ, ವನ್ಯಜೀವಿ ತಜ್ಞ.

ಕಾರಿಗೆ ಲಾರಿ ಡಿಕ್ಕಿ: ನಾಲ್ವರಿಗೆ ಗಾಯ

ಬೇಗೂರು (ಗುಂಡ್ಲುಪೇಟೆ), ಮೇ 2– ಕಾರು ಮತ್ತು ಲಾರಿ ನಡುವೆ ಸಂಭವಿಸಿದ್ದ ಡಿಕ್ಕಿಯಿಂದ ನಾಲ್ವರು ಗಾಯಗೊಂಡಿರುವ ಘಟನೆ ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಬಳಿ ರಾಷ್ಟ್ರೀಯ ಹೆದ್ದಾರಿ 766 ರಲ್ಲಿ ಸಂಭವಿಸಿದೆ.



ಬೇಗೂರು ಬಳಿ ಕಾರಿಗೆ ಲಾರಿ ಡಿಕ್ಕಿ ಹೊಡೆದಿರುವುದು.

ಮೈಸೂರಿನಿಂದ ಕೇರಳಕ್ಕೆ ತೆರಳುತ್ತಿದ್ದ ಕಾರಿಗೆ ಗುಂಡ್ಲುಪೇಟೆಯಿಂದ ಮೈಸೂರಿನ ಕಡೆ ಬರುತ್ತಿದ್ದ ಲಾರಿ ಡಿಕ್ಕಿ ಹೊಡಿದಿದ್ದು, ಕಾರಿನಲ್ಲಿದ್ದ ನಾಲ್ವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದು ಬೇಗೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಥಮ ಚಿಕಿತ್ಸೆ ನಂತರ ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ವಾಹನಗಳು ಬೇಗೂರು ಪೊಲೀಸರ ವಶದಲ್ಲಿದ್ದು ಮುಂದಿನ ತನಿಖೆ ಕೈಗೊಂಡಿದ್ದಾರೆ.

4 ಅಡಿ ಗುಂಡಿ ತೆಗೆದು ಕ್ಷುದ್ರಪೂಜೆ ಆರೋಪ

ಮೂರು ತಿಂಗಳಿಂದ ನಿಧಿಯಾಸೆಗಾಗಿ ವಾಮಾಚಾರ ಮಾಡುತ್ತಿದ್ದನಂತೆ



ಚಾಮರಾಜನಗರ: ಮನೆಯೊಳಗೆ ಸುಮಾರು 4 ಅಡಿ ಆಳವಾದ ಗುಂಡಿಯನ್ನು ಅಗೆದು ಕ್ಷುದ್ರಪೂಜೆ ನಡೆಸಿರುವ ಘಟನೆ ತಾಲೂಕಿನ ಸಾಗಡೆ ಗ್ರಾಮದಲ್ಲಿ ನಡೆದಿದೆ.

ಆದರೆ, ಈ ಘಟನೆಯ ಕುರಿತು ವಿವಾದತ್ಮಕ ಹೇಳಿಕೆಯೊಂದು ಕೇಳಿ ಬರುತ್ತಿದ್ದು, ನಿಧಿಯಾಸೆಗಾಗಿ ಈತ ಮೂರು ತಿಂಗಳಿನಿಂದಲೂ ಮನೆಯಲ್ಲಿ ವಾಮಾಚಾರ ಮಾಡುತ್ತಿದ್ದ, ಪೂರ್ಣ ಹುಣ್ಣಿಮೆಯ ದಿನ ನರಬಲಿ ಕೊಡುವಂತೆ ವಾಮಾಚಾರಿಗಳು ತಿಳಿಸಿದ್ದರು. ಹೀಗಾಗಿ ಆತ ತನ್ನ ತಾಯಿಯನ್ನು ಬಲಿ ಕೊಡಲು ಮುಂದಾಗಿದ್ದ ಎಂದು ಗ್ರಾಮದ ಕೆಲವರು ಆರೋಪಿಸಿದ್ದಾರೆ.

ಗ್ರಾಮದ ಮಾದಶೆಟ್ಟಿ ಎಂಬಾತನ ವಿರುದ್ಧ ಆರೋಪ ಕೇಳಿ ಬಂದಿದ್ದು, ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಗ್ರಾಮಾಂತರ ಠಾಣೆಯ ಪೊಲೀಸರು ಭೇಟಿ, ನೀಡಿ, ಮಹದೇವಶೆಟ್ಟಿಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದ್ದಾರೆ.

ಹೆತ್ತಮ್ಮನ ಬಲಿ ಆರೋಪ: ಗ್ರಾಮದ ಮಹದೇವಶೆಟ್ಟಿ ತನ್ನ ಮನೆಯಲ್ಲೇ ನಾಲ್ಕಡಿ ಗುಂಡಿ ಅಗೆದು ನಿಂಬೆಹಣ್ಣು, ಕುಡಿಕೆಗಳು, ಕಳಸ ಸೇರಿ ವಿವಿಧ ವಾಮಾಚಾರದ ಪರಿಕರಗಳನ್ನಿಟ್ಟುಕೊಂಡು ಈತ ಪೂಜೆ ಸಲ್ಲಿಸಿದ್ದು, ಶುಕ್ರವಾರ ಪೂರ್ಣಿಮೆಯ ಹಿನ್ನೆಲೆಯಲ್ಲಿ ತನ್ನ ತಾಯಿ ಮಾದಮ್ಮ (80) ಎಂಬಾಕೆಯನ್ನು ಬಲಿ ಕೊಡಲು ಮುಂದಾಗಿದ್ದ ಎಂಬುದು ಗ್ರಾಮದ ಕೆಲವರ ಆರೋಪವಾಗಿದೆ.

ಕಳೆದ ಮೂರು ತಿಂಗಳಿನಿಂದ ಹತ್ತಾರು ಮಂದಿ ಮಾಟಗಾರರನ್ನು ಕರೆಸಿ ಈತ ಪೂಜೆ ಸಲ್ಲಿಸುತ್ತಿದ್ದ. ಅಮಾವಾಸ್ಯೆ ಮೂರು ದಿನ ಮೊದಲು ಹಾಗೂ ನಂತರ, ಹುಣ್ಣಿಮೆಯ ಮೂರು ದಿನ ಮೊದಲ ಹಾಗೂ ನಂತರ ಪೂಜೆ ಮಾಡಿಸುತ್ತಿದ್ದ ಎಂದು ಗ್ರಾಮದ ಶಾಂತು ಎಂಬಾತ ಮಾಧ್ಯಮಗಳಿಗೆ ತಿಳಿಸಿದರು.

ಬೆಳೆ ನಷ್ಟದಿಂದ ಪೂಜೆ: ಕಳೆದ ಆರೇಳು ವರ್ಷಗಳಿಂದ ಯಾವುದೇ ಬೆಳೆಯಿಂದಲೂ ಲಾಭವಿಲ್ಲ. ಬಂಡವಾಳ ನಷ್ಟವಾಗುತ್ತಿದೆ. ಇದಕ್ಕೆ ಜ್ಯೋತಿಷಿಯೊಬ್ಬರನ್ನು ಭೇಟಿ ಮಾಡಿದಾಗ ಅವರು, ನಿಮ್ಮ ಮನೆಯ ಶೆಡ್‌ನಲ್ಲಿ ಯಾರೋ ಮಾಟ ಮಂತ್ರ ಮಾಡಿ ಹೂತಿಟ್ಟಿದ್ದಾರೆ. ಹುಣ್ಣಿಮೆ ದಿನ ಪೂಜೆ ಮಾಡಿ ಹೊರ ತೆಗೆದು ಸುಟ್ಟು ಹಾಕಬೇಕು ಎಂದು ಹೇಳಿದ್ದರು. ಅವರ ಮಾತನ್ನು ನಂಬಿ ಹುಣ್ಣಿಮೆಯ ದಿನ ನನ್ನ ಶೆಡ್‌ನೊಳಗೆ ಅರಿಶಿನ, ಕುಂಕುಮ, ತೆಂಗಿನಕಾಯಿ ಇಟ್ಟು ಪೂಜೆ ಮಾಡಿ ಗುಂಡಿ ತೆಗೆದಿದ್ದಾನೆ ಎಂದು ಮಹದೇವಶೆಟ್ಟಿ ಸ್ಪಷ್ಟಪಡಿಸಿದ್ದಾರೆ.

ನಾನು ಗುಂಡಿ ತೆಗೆಯುತ್ತಿದ್ದಂತೆ ನನಗೆ ಆಗದವರು ನಿಧಿ ಆಸೆಗೆ ನರ ಬಲಿ ಕೊಡಲು ಗುಂಡಿ ತೆಗೆದಿದ್ದಾನೆ. ಅದರಲ್ಲೂ ನನ್ನ ಹೆತ್ತ ತಾಯಿಯನ್ನೇ ಬಲಿ ಕೊಡಲು ಮುಂದಾಗಿದ್ದಾನೆ ಎಂದು ಸುಳ್ಳು ಸುದ್ದಿ ಹಬ್ಬಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ ಎನ್ನಲಾಗಿದೆ.



ಪೊಲೀಸರ ಭೇಟಿ: ಈ ವಿಚಾರ ತಿಳಿದು ಗ್ರಾಮಕ್ಕೆ ಗ್ರಾಮಾಂತರ ಪೊಲೀಸರು ಭೇಟಿ ನೀಡಿ, ಮಹದೇವಶೆಟ್ಟಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿ ಹೇಳಿಕೆಯನ್ನು ಪಡೆದು ಆತನನ್ನು ಬಿಟ್ಟು ಕಳುಹಿಸಿದ್ದಾರೆ.


'ಮೈಸೂರು ಮಿತ್ರ' ವಾರ್ಷಿಕ ಕಥಾ ಸ್ಪರ್ಧೆ-2026

ತೃತೀಯ ಬಹುಮಾನಿತ ಕಥೆ

ಕಮ್ಲೀ..



ಲೇಖಕರು
ಜೆ.ಸಿ. ಮಧುಸೂದನ
ನಂ. 179, 6ನೇ ಕ್ರಾಸ್,
ನವಿಲು ರಸ್ತೆ, ಕುವೆಂಪುನಗರ,
ಮೈಸೂರು-23
ಮೊ : 9900718762


ಹೆಚ್.ಜಿ.ಎನ್.ಪ್ರಸಾದ್

ಮದುವೆಗಂತೂ ಅವಳಿಗೆ ಈಗ ಸರಿಯಾದ ವಯಸ್ಸಲ್ಲ. ಇದನ್ನೆಲ್ಲ ಅರಿತಿದ್ದ ಅಜ್ಜಿ ತುಂಬಾ ಯೋಚನೆ ಮಾಡಿದಳು. ತಕ್ಷಣವೇ ಕಾರ್ಯ ಪ್ರವೃತ್ತಳಾಗಿ ಮೊಮ್ಮಗಳ ಆಸೆಯಂತೆ ಮದುವೆಯನ್ನು ತಡೆಯುವ ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿದಳು. ಅವರಿವರಿಂದ ತನ್ನ ಮಗನಿಗೆ ಹೇಳಿಸಿದಳು. ಚಿಕ್ಕ ವಯಸ್ಸಿನಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದರಿಂದ ಆಗುವ ಅನಾಹುತಗಳನ್ನು ವಿವರಿಸಿ, ಅವನಿಗೆ ತಿಳಿ ಹೇಳುವ ಕೆಲಸ ಮಾಡಿದಳು. ಕಡೆಗೆ ಕಮ್ಲಿಯ ಮದುವೆಯನ್ನು ನಿಲ್ಲಿಸಲು ಪೊಲೀಸರಿಗೆ ಬೇರೆಯವರ ಮೂಲಕ ದೂರು ಕೊಡುವ ನಿರ್ಧಾರಕ್ಕೂ ಬರಲಾಯಿತು. ಆದರೆ ಶಂಕ್ರು 'ಯಾರಾದರೂ ಈ ವಿಚಾರವಾಗಿ ಮುಂದುವರೆದರೆ ನನ್ನ ಮತ್ತು ನನ್ನ ಹೆಂಡತಿಯ ಹೆಣ ನೋಡಬೇಕಾಗುತ್ತದೆ 'ಎಂದು ಹೆದರಿಸಿದ. ಅವನ ಒಂದು ಮಾತಿನಿಂದ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿ ಹೋದವು. ಕಾಲ ಮಿಂಚಿ ಹೋಗಿತ್ತು. ತಂದೆ ತಾಯಿಗಳ ಆಸೆಯೇ ಬೇರೆಯಾಗಿತ್ತು.

ಅದೊಂದು ಕತ್ತಲೆಯ ಮನೆ. ಮನೆಯೆಂತೋ ಅಂತೆ ಅಲ್ಲಿನ ಮನಗಳಲ್ಲೂ ಕತ್ತಲೆಯೇ. ಮಬ್ಬುಗದ್ದಲೆಯ ನಡುವಿರೋ ಆ ಮನಗಳಲ್ಲಿ ಶಾಂತಿ ಎಂಬುದು ಮಾಸಿ ಇಂದಿಗೆ ನಾಲ್ಕನೇ ದಿನ. ಇದ್ದ ನೆಮ್ಮದಿ, ನಗುವನ್ನೆಲ್ಲಾ ಕಳೆದುಕೊಂಡಿದ್ದ ಆ ಮನೆಯವರಿಗೀಗ ಉಳಿದದ್ದು ಮೌನದಾಳದ ನೋವು ಮಾತ್ರ. ಯಾವತ್ತಿಗೂ ಕಲ ಕಲ ಎಂದು ನಗುವಿನ ಚಿಲುಮೆಯೊಂದಿಗೆ ಕಂಗೊಳಿಸುತ್ತಿದ್ದ ಮನೆಯಲ್ಲೀಗ ಮೌನ, ಬರೀ ಮೌನವಲ್ಲ, ಸ್ಮಶಾನ ಸದೃಶ ಮೌನ...

ದುಃಖಿತರಾಗಿ ತಲೆಯ ಮೇಲೆ ಕೈಹೊತ್ತು ಕುಳಿತಿರೋರ ಮಧ್ಯೆಯಿಂದ ಎದ್ದ ಹುಡುಗಿ ಒಳಗಡೆ ಕೋಣೆಯಿಂದ ದೀಪ ಹೊತ್ತಿಸಿ ತಂದು ಎಲ್ಲರ ನಡುವೆ ಇಟ್ಟಳು. ಆ ದೀಪವನ್ನೇ ದಿಟ್ಟಿಸಿ ನೋಡುತ್ತಿದ್ದಾನೆ. ಶಂಕ್ರು. ಅವನ ಕಂಗಳಲ್ಲಿ ಅಂತರಾಳದ ದುಃಖ-ದುಮ್ಮಾನಗಳೆಲ್ಲಾ ನೀರಾಗಿ ಒಂದೊಂದೇ ಹನಿಯಾಗಿ ತೊಟ್ಟಿಕ್ಕುತ್ತಿವೆ. ಪಕ್ಕದಲ್ಲಿ ಅವನ ಹೆಂಡತಿ ದೇವಿ ಗಂಡನನ್ನೇ ನೋಡುತ್ತಾ ಉಮ್ಮಳಿಸುತ್ತಿರುವ ದುಃಖವನ್ನು ತೋರಗೊಡದೆ ಒಳಗೊಳಗೇ ಸಂಕಟವನ್ನು ಅನುಭವಿಸುತ್ತಿದ್ದಾಳೆ. ಇವರಿಬ್ಬರನ್ನೂ, ಇವರು ಅನುಭವಿಸುತ್ತಿರುವ ವೇದನೆಯನ್ನೂ ಕಂಡು ಮೂಕಳಾಗಿ ಕುಳಿತು ಸಂಕಟ ಪಡುತ್ತಿರುವ ಜೀವ ಮತ್ತೊಂದಿದೆ.

ಆ ಜೀವ ಬೇರೆ ಯಾರೂ ಅಲ್ಲ. ಶಂಕ್ರು ಮತ್ತು ದೇವಿಯರ ಪ್ರೀತಿಯ ಎರಡನೇ ಮಗಳು ಜ್ಯೋತಿ. ಸಮಯ ಅನ್ನೋದು ಮುಳ್ಳಾಗಿ ಮುಂದೆ ಮುಂದೆ ಹೋಗುತ್ತಲಿತ್ತು. ಅದರ ಪರಿವೆಯಂತೂ ಅವರಾರಿಗೂ ಇದ್ದಂತಿಲ್ಲ. ಹೊರಗಡೆ ಬಾಗಿಲು ಹಾಗೇ ತೆರೆದೇ ಇತ್ತು. ಸ್ವಲ್ಪ ಹೊತ್ತಾಗಿರಬಹುದು. ಅಲ್ಲಿಯೇ ಬದಿಯಲ್ಲಿದ್ದ ಕೋಣೆಯೊಂದರಿಂದ ಮಗುವೊಂದರ ಅಳುವಿನ ಸದ್ದು...! ಎಲ್ಲರೂ ಅತ್ತ ದೃಷ್ಟಿ ಹಾಯಿಸಿದರು. ಅಳುತ್ತಿದ್ದ ಆ ಮಗೂನ ಸಮಾಧಾನ ಪಡಿಸುತ್ತಾ ಸೀತವ್ವ ಇವರತ್ತಲೇ ಬರುತ್ತಿದ್ದಳು. ಮುದ್ದಾದ ಗಂಡು ಮಗು. ಕೆಂಪನೆ ಬಣ್ಣ ಒಂದೇ ಸಮನೆ ಜೋರಾಗಿ ಚೀರುತ್ತಿದ್ದ ಆ ಮಗೂನ ಮೋರೆ ನೋಡ್ತಾ ಇದ್ದ ಹಾಗೆ ದೇವಿಯ ಮುಖದಲ್ಲಿ ಒಂದು ತರಾ ಅಸಹನೆ, ಆ ಜ್ಯೋತಿಯಂತೂ ಮಗುವಿನ ಮುಖವನ್ನೂ ನೋಡಲು ಇಷ್ಟಪಡದೆ ತನ್ನ ಮುಖವನ್ನು ಆ ಕಡೆ ತಿರುಗಿಸಿಕೊಂಡಳು. ಅವಳ ಮುಖದಲ್ಲಿ ಕೋಪದ ಛಾಯೆ ಎದ್ದು ಕಾಣಿಸುತ್ತಿತ್ತು. "ಲೋ ಶಂಕ್ರು, ಮಗ ತುಂಬಾನೆ ಅಳ್ತಾದೆ, ಹಸಿವಾಗಿರಬೇಕು ಅನ್ಸುತ್ತೆ ಆ ಹಾಲಿನ ಬಾಟ್ಲಿನಾದ್ರು ಕೊಡೋ"... ಶಂಕ್ರುಗೆ ಅವನ ತಾಯಿಯ ಮಾತುಗಳ ಕಡೆ ಗಮನವಿರಲಿಲ್ಲ. ಸುಮ್ಮನೆ ಉರೀತಿರೋ ಆ ದೀಪವನ್ನೇ ದಿಟ್ಟಿಸಿ ನೋಡುತ್ತಿದ್ದ. ಕಂಗಳಲ್ಲಿ ನೀರು ಧಾರಾಕಾರವಾಗಿ ಹರಿಯುತ್ತಲೇ ಇತ್ತು. ಇದನ್ನು ಗಮನಿಸಿದ ಸೀತವ್ವ, ದೇವಿಯ ಕಡೆಗೆ ತಿರುಗಿ, "ಲೇ ದೇವಿ, ಇನ್ನೂ ಎಷ್ಟು ದಿನಾ ಅಂತಾ ಹಿಂಗೆ ಅಳ್ತಾ ಕುಂತಿರ್ತಿರಾ, ಆಗಿದ್ದು ಆಗೋಯ್ತು ಎಷ್ಟು ದುಃಖ ಪಟ್ಟರೆ ತಾನೆ ಏನು, ಹೋಗಿರೋ ನಮ್ಮ ಕಮ್ಲಿ ಮತ್ತೆ ಬತ್ತಾಳಾ?" ಎಂದು ಕಣ್ಣಲ್ಲಿ ನೀರು ತುಂಬಿಕೊಂಡು "ಹೋಗವ್ವಾ, ನೀನಾರ ಮಗೀಗೆ ಹಾಲು ತಂದುಕೊಡವ್ವ ಕುಡಿಸಿ ಮಲಗಿಸ್ತೀನಿ" ಅಂದಳು... ಆದರೆ ಆ ದೇವಿಯೂ ಸೀತವ್ವನ ಮಾತಿಗೆ ಓಗೊಡಲಿಲ್ಲ ಅವಳಿಗೆ ಏನು ಮಾಡಬೇಕೋ ತೋಚಲಿಲ್ಲ ಎಷ್ಟು ಹೇಳಿದರೂ ಇವರ‍್ಯಾರೂ ಸಮಾಧಾನವಾಗೋ ಹಾಗೆ ಕಾಣ್ತಾನೇ ಇರ್ಲಿಲ್ಲ. ಮಗೂನ ಅಳು ಜಾಸ್ತೀನೇ ಆಗ್ತಾಯಿತ್ತು. ಅದನ್ನು ನೋಡುತ್ತಿದ್ದ ಆ ಜ್ಯೋತಿಯ ಸಹನೆಯೂ ಮೀರಿತ್ತು. "ಅಬ್ಬಬ್ಬಾ .. ಇದೊಂದು ರಾಕ್ಷಸನ ತರಾ ಬಾಯಿ ಬಿಡ್ತಾಯಿದೆ. ಇದೊಂದು ಪೀಡೆ. ಹುಟ್ತಾನೆ ನನ್ನಕ್ಕನ್ನ ನುಂಗಿ ನೀರ‍್ಕುಡ್ದ್‌ಬುಡ್ತು" ಎನ್ನುತ್ತಾ "ಏ ಸುಮ್ನೆ ಬಾಯಿ ಬಿಡಬೇಡ" ಎಂದು ಕೋಪದಿಂದ ಒಳಗೆ ಎದ್ದು ಹೋಗಿ ಬಾಟಲಿ ಹಾಲನ್ನು ತಂದು ಅಜ್ಜಿಯ ಮುಂದೆ ಕುಕ್ಕಿದಳು.

"ಅಯ್ಯೋ ಕಂದಾ, ಈಗ ತಾನೆ ಕಣ್ಣು ಬುಡ್ತಿರೋ ಈ ಮಗೀನ್ಯಾಕೆ ಬೈತೀಯ, ಇದ್ರಲ್ಲಿ ಈ ಮಗೀದೇನು ತೆಪ್ಪು... ಪಾಪ, ನೀನು ಹಾಲು ಕುಡಿಯಪ್ಪ" ಎಂದು ಹಾಲಿನ ಬಾಟಲನ್ನು ಮಗುವಿನ ಬಾಯಿಗೆ ಕೊಟ್ಟು ಜೋಗುಳ ಹಾಡಿ ಹಾಗೇ ತೊಡೆಯ ಮೇಲೆ ಮಲಗಿಸಿಕೊಂಡಳು. ಮಗು ಹಾಗೇ ನಿದ್ದೆಹೋಯ್ತು. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿಯೇ ಇದ್ದ ತೊಟ್ಟಿಲಿನೊಳಗೆ ಆ ಮಗೂನ ಜೋಪಾನವಾಗಿ ಮಲಗಿಸಿ ಬಂದು ಮಗನ ಬಳಿ ಕುಳಿತುಕೊಂಡಳು. ಶಂಕ್ರು ಆ ದೀಪದ ಮೇಲೆ ನೆಟ್ಟಿದ್ದ ದೃಷ್ಟಿ ಬದಲಿಸಿಯೇ ಇರಲಿಲ್ಲ. ಅವನ ಮನದ ಆಳದಲ್ಲಿದ್ದ ನೋವನ್ನು ಶಮನ ಮಾಡಲು ಸೀತವ್ವ ಮತ್ತೆ ಪ್ರಯತ್ನಿಸಿದಳು. "ಮಗಾ... ನೀನೆ ಹೀಗೆ ಕಂಗೆಟ್ರೆ ಹೆಂಗೋ... ಅಲ್ನೋಡು ದೇವಿ, ಜ್ಯೋತಿ... ಅವರಿಗೆ ಸಮಾಧಾನ ಮಾಡೋರು ಯಾರಪ್ಪಾ.. ಏಳು" ಎಂದು ಅವನ ತಲೆಯನ್ನು ಹಾಗೇ ನೇವರಿಸಿದಳು. "ಅವ್ವಾ, ಅವ್ವಾ..." ಶಂಕ್ರು ಮೌನ ಮುರಿದು ಅತೀವ ಯಾತನೆಯಿಂದ ದುಃಖಿಸಲಾರಂಭಿಸಿದ.

* * * * *

"ಅವ್ವಾ .. ಆ ದೀಪ ನೋಡವ್ವ, ಹೆಂಗ್ ಒಂದೇ ಸಮ್ನೆ ಉರೀತಾದೆ." "ಹೌದು ಮಗಾ ... ದೀಪದಲ್ಲಿ ಎಣ್ಣೇ ಇರೋವರ್ಗೂ ಅದು ಉರಿತಾನೇ ಇರುತ್ತೆ. ಹಂಗೇ ನಮ್ಮ ಕಮ್ಲೀನೂ ಬೆಳಗುತ್ತಿದ್ದಳು. ಇರೋತಂಕ ಈ ಮನೆ. ಮದ್ವೆ ಆದ್ಮೆಲ್ ಗಂಡುನ್ ಮನೆ. ಅವಳ ಜೀವನದಲ್ಲಿ ಆಯಸ್ಸು ಅನ್ನೋ ಎಣ್ಣೆ ಮುಗಿದೋಗಿತ್ತು ಕಾಣಪ್ಪಾ, ಅದಕ್ಕೇ ಅವಳು ನಂದೋದ್ಳು..." ಎನ್ನುತ್ತಾ ಹಾಗೆ ಸಣ್ಣ

ಹಾಡೊಂದನ್ನು ಗುನುಗಲು ಪ್ರಾರಂಭ ಮಾಡಿದಳು. "ಕಮ್ಲೀ, ಕಮ್ಲೀ ನನ್ನಾ ಕೂಸೆ. ಎಲ್ಲಿಗೋದೆ ನನ್ನವ್ವ ನಿನ್ನ ನಾ ಹೆಂಗೆ ಮರೀಲವ್ವಾ, ನನ್ನ ಕಮ್ಲೀ, ಕಮ್ಲೀ, ನನ್ನ ರಾಜಕುಮಾರಿ ನೀನು, ಚೆಂದುಳ್ಳಿ ಚೆಲುವೆಯಂಗೆ ಓಡಾಡ್ಕಂಡ್ ಇದ್ದೋಳು. ಎಲ್ಲಿಗೊಂಟ್ಯೇ ನನ್ನ ಜೀವದ ಜೀವವೇ. ಈ ಅಜ್ಜಿನಾ ನೀ ಹಿಂಗೆ ಮರೆತು ಎಲ್ಲಿಗೋದ್ಯೇ ನನ್ನವ್ವೆ, ಕಮ್ಲೀ, ಕಮ್ಲೀ ಮಗಾ, ಕೂಸೆ ನನ್ನವ್ವಾ" ಅಜ್ಜಿಗೆ ದುಃಖ ತಡೀಲಿಕ್ಕೆ ಆಗಲಿಲ್ಲ. ಬಿಕ್ಕಳಿಸಿ ಬಿಕ್ಕಳಿಸಿ ಅಳತೊಡಗಿದಳು.

"ಅವ್ವಾ.. ಅಳಬೇಡ ಕಣವ್ವಾ.. ಸಮಾಧಾನ ಮಾಡ್ಕೋ, ನಾನು ನೋಡು ಅಳ್ತಾನೆ ಇಲ್ಲ... ನನ್ನ ಮಗೀನ ಗುಬ್ಬಚ್ಚಿ ಬಂದು ಕಚ್ಚಿಕೊಂಡು ಹೋಯ್ತು ಅಷ್ಟೆ.. ಅಷ್ಟೆ ಗುಬ್ಬಚ್ಚಿ ಬಂದು ಕಚ್ಚಿಕೊಂಡು ಹೋಯ್ತು ಅಷ್ಟೆ.. ನೀನು ಅಳಬೇಡ... ನನ್ನ ಮಗಳು ಅಲ್ಲಿ ನೋಡವ್ವ ದೀಪದ ಬೆಳಕಲ್ಲಿ ಹ್ಯಾಗೆ ಕಾಣಿಸ್ತಾವ್ಳೆ" ಎಂದು ಶಂಕ್ರು ಏನೇನೋ ಬಡಬಡಿಸುತ್ತಿದ್ದ. "ಮಗಳೇ ಮಗಳೇ... ನನ್ನ ಜೊತೆ ಕುಂತ್ಕೊಂಡು ಊಟ ಮಾಡೋರು ಯಾರವ್ವಾ.. ಅಪ್ಪಾ ನಿಂಗೆ ಬಿ.ಪಿ. ಬಂದದಂತೆ, ಉಪ್ಪು ತಿನ್ಬೇಡಾ, ಉಪ್ಪಿನ ಕಾಯಿ ತಿನ್ಬೇಡ ನೀ ಏನಾರ ತಿಂದ್ರೆ ನನ್ ಮ್ಯಾಲ್ ಆಣೆ" ಅಂತಾ ನನ್ ಅರೋಗ್ಯುದ್ ಬಗ್ಗೆ ಚಿಂತೀ ಮಾಡ್ತಿದೋಳ್ ನೀನು, ನಿನ್ನ ಹೆಂಗ್ ಮರೀಲಿ ಕೂಸೆ, ಒಂದ್ ರೀತಿ ನಿನ್ ಸಾವ್ಗೆ ನಾನೇ ಕಾರಣ ಆಗೋದ್ನಲ್ಲ ಕಮ್ಲೀ ಮಗಳೇ" ಎಂದು ಜೋರಾಗಿ ಅಳತೊಡಗಿದ. ದುಃಖ ತಡೆಯಲಾರದೆ ತನ್ನ ಎದೆ ಬಡಿದುಕೊಳ್ಳತೊಡಗಿದ. ಅವನ ಅತಿಯಾದ ಸಂಕಟ ಕಂಡು ಕಂಗಾಲಾದ ಸೀತವ್ವ, ದೇವಿ, ಜ್ಯೋತಿ ಮೂವರು ತಕ್ಷಣ ಅವನನ್ನು ಹಿಡಿದುಕೊಂಡು ಸಂತೈಸಿದರು. ಉರಿಯುತ್ತಿರುವ ದೀಪ ಹಾಗೇ ಮಂಕಾಗುತ್ತಿತ್ತು.. ದುಃಖದ ಬೀಡಾಗಿದ್ದ ಆ ಮನೆ ಹಾಗೇ ನಿಶ್ಯಬ್ದವಾಗುತ್ತಾ ಬಂದು ಎಲ್ಲೆಡೆ ಮೌನ ಆವರಿಸಿತು. ಕಮ್ಲಿಯ ನೆನಪುಗಳ ನಡುವೆ ಎಲ್ಲರೂ ನಿದ್ದೆಗೆ ಜಾರಿದರು.. ನಿದ್ದೆ ನೆಪಮಾತ್ರಕ್ಕಷ್ಟೇ. ಅಜ್ಜಿ ಸೀತವ್ವನಿಗಂತೂ ಸ್ವಲ್ಪವೂ ನಿದ್ದೆ ಹತ್ತಲೇ ಇಲ್ಲ. ಹ್ಯಾಗೆ ಹೊರಳಾಡಿದರೂ ಕಮ್ಲಿಯ ನೆನಪೇ ಮತ್ತೆಮತ್ತೆ ಬರುತ್ತಿತ್ತು. ನಾಲ್ಕು ದಿನದಿಂದ ಅತ್ತು ಅತ್ತು ಸೊರಗಿ ಹೋಗಿದ್ದ ಶಂಕ್ರು, ದೇವಿ, ಜ್ಯೋತಿ ಎಲ್ಲರೂ ಆಗತಾನೆ ನಿದ್ದೆಯ ಮಂಪರಿನಲ್ಲಿದ್ದರು. ತೊಟ್ಟಿಲಿಂದ ಮತ್ತೆ ಮಗು ಅಳುವಿನ ಶಬ್ದ ಕೇಳಿಸಿತು. ಯಾರೂ ಆ ಕಡೆ ಗಮನಿಸಿದಂತೆ ಕಾಣಲಿಲ್ಲ. ಅಜ್ಜಿಯೇ ಎದ್ದು ಹೋಗಿ ಮಗುವಿಗೆ ಅದೇ ಬಾಟಲಿ ಹಾಲು ಕೊಟ್ಟು ತೊಟ್ಟಿಲನ್ನು ತೂಗುತ್ತಾ ತೂಗುತ್ತಾ ಹಾಗೇ ಸುಮಾರು ಹನ್ನೆರಡು ಮಾಸಗಳ ಹಿಂದಿನ ನೆನಪಿನಂಗಳಕ್ಕೆ ಹೋದಳು.

ಆಗ ಕಮ್ಲಿಗೆ ಹದಿನಾರು ವರ್ಷವಿರಬಹುದು. ಎಸ್.ಎಸ್.ಎಲ್.ಸಿ ಪರೀಕ್ಷೆಯನ್ನು ಉನ್ನತ ದರ್ಜೆಯಲ್ಲಿ ಪಾಸಾಗಿದ್ದ ಅವಳನ್ನು ಶಂಕ್ರು ಪ್ರತಿಷ್ಠಿತ ಕಾಲೇಜೊಂದಕ್ಕೆ ಸೇರಿಸಿದ್ದ. ಪ್ರಥಮ ಪಿಯುಸಿಯಲ್ಲಿ ಕಮ್ಲಿ ಚೆನ್ನಾಗಿಯೇ ಓದುತ್ತಾ ಗುರುಹಿರಿಯರಿಗೆ ಅಚ್ಚುಮೆಚ್ಚಿನವಳಾಗಿದ್ದಳು. ಅಜ್ಜಿ ಸೀತವ್ವಳಿಗಂತೂ ಮೊಮ್ಮಗಳ ಸಾಧನೆಯನ್ನು ಕಂಡು ಅತೀವ ಆನಂದವಾಗಿತ್ತು. ತುಂಬು ಹೃದಯದಿಂದ ಮೊಮ್ಮಗಳ ಏಳ್ಗೆಗಾಗಿ ಹಾರೈಸುತ್ತಿದ್ದಳು.

* * * * *

ಅದೊಂದು ದಿನ ಬಹುಶಃ ಸೋಮವಾರ ಅಂತಾ ಕಾಣುತ್ತೆ. ಸೀತವ್ವ ತನ್ನ ಮಗಳ ಮನೆಯಲ್ಲಿದ್ದಳು. ಮಧ್ಯಾಹ್ನದ ಸಮಯ... ಹೊರಗಡೆ ಕಾಲಿಂಗ್‌ಬೆಲ್ ಒಂದೇ ಸಮನೆ ಸದ್ದು ಮಾಡಿತ್ತಿದೆ. ತಕ್ಷಣ ಹೋಗಿ ಬಾಗಿಲು ತೆರೆದ ಸೀತವ್ವಳಿಗೆ ಅಚ್ಚರಿ ಕಾದಿತ್ತು ಕಮ್ಲೀ! ಕಮ್ಲೀ ಬಾಗಿಲ ಬಳಿ ನಿಂತಿದ್ದಳು. "ಕಮ್ಲೀ! ಏನವ್ವಾ ಆಶ್ಚರ್ಯ... ಈವತ್ತೇನು ಸೂರ್ಯ ಪಶ್ಚಿಮದಲ್ಲಿ ಹುಟ್ಟಿರೋವಂಗೆ ಕಾಣುತ್ತೆ... ಬಾ ಮಗ ಒಳಗೆ..." ಎಂದು ಸಂತಸದಿಂದ ಒಳ ಕರೆದ ಅಜ್ಜಿಯ ಮಾತಿಗೆ ಮನಸೋತ ಕಮ್ಲಿ ಸ್ವಲ್ಪ ಹಿಂಜರಿಕೆಯಿಂದಲೇ ತನ್ನ ಅತ್ತೆ ಮನೆಯ ಒಳಗೆ ಬಂದಳು. ತಂದೆಯ ಆಸ್ತಿ ವಿಚಾರವಾಗಿ ಕಮ್ಲಿಯ ತಂದೆ ಮತ್ತು ಅವನ ತಂಗಿಯ ನಡುವೆ ಮನಸ್ತಾಪ ಉಂಟಾಗಿ ಒಬ್ಬರನ್ನೊಬ್ಬರು ಮಾತಾಡಿಸುತ್ತಿರಲಿಲ್ಲ ಅಪ್ಪನಂತೂ "ಮಗಳೇ ಯಾವುದೇ ಕಾರಣಕ್ಕೂ ನೀನು ನಿಮ್ಮ ಅತ್ತೆ ಅನ್ನಿಸ್ಕೊಂಡಿರೋಳ ಮನೆ ಹೊಸಿಲು ತುಳಿಬಾರ್ದು" ಎಂದು ತಾಕೀತು ಮಾಡಿದ್ದ ಅದನ್ನೇ ಮನದಲ್ಲಿ ನೆನೆಸಿಕೊಳ್ಳುತ್ತಿದ್ದಳು ಕಮ್ಲಿ "ದೊಡ್ಡೋರು ಏನಾರ ಜಗಳ ಆಡಿಕೊಳ್ಳಲಿ, ಮಕ್ಕಳು ಅದನ್ನೆಲ್ಲ ಮನಸ್ಸಿನಲ್ಲಿ ಮಡಿಕೋಬಾರ್ದು ಕಣವ್ವ... ಈವತ್ತು ನೀನು ಈ ಮನಗೆ ಬಂದಿದ್ದು ನಂಗೆ ತುಂಬಾನೆ ಸಂತೋಷ ಆತು ನನ್ ಕಂದ. ಇರು ಈಗ ಬಂದೆ" ಎಂದು ಅಜ್ಜಿ ಒಳಗೆ ಹೋಗುತ್ತಿದ್ದಂತೆಯೇ ಕಮ್ಲಿ ಮನೆಯ ಒಳಗೆಲ್ಲಾ ದೃಷ್ಟಿ ಹಾಯಿಸಿದಳು. ಅಜ್ಜಿಯ ಹೊರತು ಬೇರೆ ಯಾರೂ ಮನೆಯಲ್ಲಿ ಇದ್ದಂತೆ ಕಾಣಲಿಲ್ಲ.

ಹಾಗೆ ಗೋಡೆಯ ಮೇಲೆ ಕಣ್ಣಾಯಿಸುತ್ತಿದ್ದಾಗ ಅಲ್ಲಿ ತೂಗು ಹಾಕಿದ್ದ ಹಳೇ ಫೋಟೋವನ್ನು ಕೈಗೆತ್ತಿಕೊಂಡಳು. ತಾನು ಮತ್ತು ತನ್ನ ಅತ್ತೆ ಮಗಳು ಒಟ್ಟಿಗೆ ತೆಗೆಸಿಕೊಂಡಿದ್ದ ಚಿಕ್ಕ ವಯಸ್ಸಿನ ಫೋಟೋ. ಇಬ್ಬರೂ ಒಂದೇ ತರಹದ ಫ್ರಾಕ್ ಹಾಕಿಕೊಂಡು ಸ್ಟುಡಿಯೋ ಒಂದರಲ್ಲಿ ತೆಗೆಸಿದ್ದು... ಮೇಲೆಲ್ಲಾ ಧೂಳು ತುಂಬಿಕೊಂಡಿತ್ತು. ಅದನ್ನು ತನ್ನ ವೇಲಿನಿಂದ ಒರೆಸುತ್ತಿದ್ದಳು. ಆಗಿನ ಸಿಹಿ ನೆನಪುಗಳನ್ನು ಮೆಲುಕು ಹಾಕಿಕೊಂಡಳು...

* * * * *

ತನ್ನ ಮನೆಗೆ ಅತ್ತೆ ಮತ್ತು ಅವರ ಮಕ್ಕಳು ಬೇಸಿಗೆ ರಜಕ್ಕೆ ಬರುತ್ತಿದ್ದುದು. ಎಲ್ಲರೂ ಒಟ್ಟಾಗಿ ಆಟ ಆಡುತ್ತಿದ್ದುದು. ಹಾಗೇ ಕಮ್ಲಿ ಮತ್ತು ಅವಳ ತಂಗಿ ದಸರಾ ರಜಾ ಬಂದಾಗ ಅತ್ತೆಯ ಮನೆಗೆ ಬರುತ್ತಿದ್ದುದು. ಮಾವ ಎಲ್ಲರನ್ನೂ ಕರೆದುಕೊಂಡು ವಸ್ತುಪ್ರದರ್ಶನ, ಜಂಬೂಸವಾರಿ ಮುಂತಾದ ಕಡೆಗೆ ಕರೆದುಕೊಂಡು ಹೋಗುತ್ತಿದ್ದುದು. ಟಾಂಗಾದ ಮೇಲೆ ಎಲ್ಲರೂ ಕುಳಿತು ಅರಮನೆಯ ಸುತ್ತೆಲ್ಲಾ ಸುತ್ತಾಡುತ್ತಿದ್ದುದು ಎಲ್ಲ. ಆದರೆ ಈಗ ಪರಿಸ್ಥಿತಿಯೇ ಬೇರೆ... ತನ್ನ ಅಪ್ಪ ಮತ್ತು ಅವರ ತಂಗಿಯಾದ ತನ್ನ ಅತ್ತೆ ಇಬ್ಬರಲ್ಲೂ ಉಂಟಾಗಿದ್ದ ಮನಸ್ತಾಪ, ಚಿಗುರೊಡೆದು ಹೆಮ್ಮರವಾಗಿ ಈಗ ಒಬ್ಬರ ನ್ನೊಬ್ಬರು ಕಂಡರೆ ಆಗದಷ್ಟು ಬೆಳೆದಿತ್ತು ಆ ಕಾರಣಕ್ಕಾಗಿ ಯಾರೂ ಇನ್ನೊಬ್ಬರ ಮನೆಗೆ ಹೋಗುವುದು ಹೆಚ್ಚು ಕಡಿಮೆ ನಿಷಿದ್ಧವೇ ಆಗಿತ್ತು. ಎಲ್ಲವನ್ನೂ ನೆನೆಸಿಕೊಂಡು ಕಮ್ಲಿಯ ಕಣ್ಣಂಚಿನಲ್ಲಿ ನೀರು ತುಂಬಿಕೊಂಡಿತು. ಅಜ್ಜಿಗೆ ತಿಳಿಯದ ಹಾಗೆ ಕಣ್ಣೀರನ್ನು ಒರೆಸಿಕೊಂಡಳು. ಅಷ್ಟರಲ್ಲಿ ಅಜ್ಜಿ ನಿಂಬೇಹಣ್ಣಿನ ಶರಬತ್ತನ್ನು ಮಾಡಿಕೊಂಡು ಬಂದಿದ್ದಳು. ಒತ್ತಾಯದ ಮೇಲೆ ಅದನ್ನು ಕುಡಿಯುತ್ತಿದ್ದ ಮೊಮ್ಮಗಳನ್ನು ನೋಡಿ ಒಳಗೇ ಒಂಥರಾ ಸಂಕಟ ಅನುಭವಿಸುತ್ತಿದ್ದಳು ಸೀತವ್ವ, ಶರಬತ್ತನ್ನು ಕುಡಿದ ಕಮ್ಲಿ ಸ್ವಲ್ಪ ಹೊತ್ತು ಏನನ್ನೂ ಮಾತಾಡಲೇ ಇಲ್ಲ. ಆಮೇಲೆ ನಿಧಾನವಾಗಿ ತಡವರಿಸುತ್ತಾ ಕೇಳಿದಳು.

"ಅಜ್ಜೀ... ಹೂ ಮುಡಿಸೋದುಕ್ಕೆ ಬರೋದು ಅಂದರೆ ಏನು?" "ಅದೇ ಕಣವ್ವ ಹುಡುಗನ ಕಡೆಯವರು ಹುಡುಗಿ ನಮಗೆ ಒಪ್ಪಿಗೆ ಅಂತಾ ಹುಡುಗಿಗೆ ಹೂ ಮುಡುಸಿ ಹೋಗೋ ಶಾಸ್ತ್ರ" "ಹಾಗಾದರೆ ಅಜ್ಜಿ ಅಪ್ಪಾ, ಅಮ್ಮಾ ಎಲ್ಲರೂ ಮನೆಯಲ್ಲಿ ಮಾತನಾಡಿಕೊಳ್ಳುತ್ತಿದ್ದುದ್ದು ಇದೇನಾ" ಅಜ್ಜಿಗೆ ಈ ಮಾತು ಕೇಳಿ ಆಶ್ಚರ್ಯವಾಯಿತು. "ಏನ್ ಮಗಾ ನೀನ್ ಹೇಳ್ತಿರೋದು..." ಅರ್ಥವಾಗದೆ ಕೇಳಿದಳು.

"ಅದೇ ಅಜ್ಜಿ, ನನ್ನನ್ನು ಅದ್ಯಾವುದೋ ಊರಿನವರು ಹಿಂದೆ ನೋಡಿಕೊಂಡು ಹೋಗಿದ್ರಲ್ಲ ಅವರು ಇದೇ ಶುಕ್ರವಾರ ಹೂ ಮುಡಿಸೋದುಕ್ಕೆ ಬರ‍್ತಾರಂತೆ."

"ಏನವ್ವಾ ಹಿಂಗ್ ಹೇಳ್ತಾ ಇದ್ದೀಯೆ, ನಾನು ಅವತ್ತೇ ನಿಮ್ಮಂಪಂಗೆ ಅಷ್ಟು ಬಗೆ ಹೇಳಿದ್ನಲ್ಲಾ, ಕಮ್ಲಿಗೆ ಈಗಲೇ ಮದುವೆ ಬ್ಯಾಡ, ಮಗಾ ತುಂಬಾ ಚಿಕ್ಕದು, ಅದುಕ್ಕೆ ಏನೂ ಗೊತ್ತಿಲ್ಲ ಅಂತ" "ಆದ್ರೂ ಅಪ್ಪಾ ಅವತ್ತು ನಿನ್ ಮಾತಿಗೆ ಒಪ್ಪಿಕೊಂಡು ಈಗ ಬೇರೇನೆ ಹೇಳ್ತಾ ಇದೆ... ಅಮ್ಮನ ಒತ್ತಡ ಬೇರೆ. ನನ್ಗ್ಯಾಕೋ ತುಂಬಾ ಭಯ ಆಗ್ತಿದೆ ಅಜ್ಜಿ"

"ಅವತ್ತೇ ನೀನು ಎಲ್ಲಾ ಹೇಳಿದ್ಯಲ್ಲ ನಂಗೆ, ನಂಗೂ ಎಲ್ಲಾ ಅರ್ಥ ಆಗುತ್ತೆ ನೀನು ಚೆನ್ನಾಗಿ ಓದಬೇಕು.. ಇಪ್ಪತ್ತು ವರ್ಷ ಆದ ಮೇಲೆ ಮದುವೆ ಆಗಬೇಕು ಅಂತಾ... ನಿಮ್ಮ ಮೇಷ್ಟ್ರೂ ಅವತ್ತು ಇದರ ಬಗ್ಗೆ ನಿಮ್ಮಪ್ಪನ್ ಕೂಡ ಮಾತಾಡಿದ್ರಲ್ಲವ್ವ." "ಏನೋ ಅಜ್ಜಿ ನನಗೆ ಚೆನ್ನಾಗಿ ಓದಿ ಒಳ್ಳೇ ಡಾಕ್ಟರ್ ಆಗಬೇಕು ಅಂತಾ ಆಸೆ. ಆದ್ರೆ ಒಳ್ಳೇ ಸಂಬಂಧ ಅಂತ ಎಲ್ಲಾ ಹೇಳಿ ಅಮ್ಮ ಅಮ್ಮನ ಅಣ್ಣ, ಊರಜ್ಜಿ ಅಪ್ಪನ ತಲೆ ಕೆಡಿಸಿದ್ದಾರೆ"... ಹೀಗೆ ಇಬ್ಬರ ಮಧ್ಯೆ ಸಂಭಾಷಣೆಗಳು ಬಹಳ ಹೊತ್ತು ನಡೆಯಿತು. ಕಾಲೇಜು ಬಿಡುವ ಸಮಯವಾಗಿದ್ದರಿಂದ ಕಮ್ಲಿ ಅಲ್ಲಿಂದ ಹೊರಡಲು ಅನುವಾದಳು. ಹೋಗುವುದಕ್ಕೆ ಮುಂಚೆ ತನಗೆ ಗೊತ್ತಾಗಿರುವ ಈ ಮದುವೆಯನ್ನು ಹ್ಯಾಗಾದರೂ ನಿಲ್ಲಿಸಬೇಕೆಂದು ಅಜ್ಜಿಯಲ್ಲಿ ಪರಿಪರಿಯಾಗಿ ಕಣ್ಣೀರಿಡುತ್ತಾ ಬೇಡಿಕೊಂಡಳು. ಅಷ್ಟಕ್ಕೂ ಅವಳಿಗೀಗ ಹದಿನಾರು ತುಂಬಿ ಹದಿನೇಳು ತುಂಬಿತ್ತು. ಸಾಲದ್ದಕ್ಕೆ ರಕ್ತ ಕಡಿಮೆಯಾಗಿ ನಿಶ್ಯಕ್ತಳಾಗಿದ್ದಳು.

ಮದುವೆಗಂತೂ ಅವಳಿಗೆ ಈಗ ಸರಿಯಾದ ವಯಸ್ಸಲ್ಲ. ಇದನ್ನೆಲ್ಲ ಅರಿತಿದ್ದ ಅಜ್ಜಿ ತುಂಬಾ ಯೋಚನೆ ಮಾಡಿದಳು. ತಕ್ಷಣವೇ ಕಾರ್ಯ ಪ್ರವೃತ್ತಳಾಗಿ ಮೊಮ್ಮಗಳ ಆಸೆಯಂತೆ ಮದುವೆಯನ್ನು ತಡೆಯುವ ಎಲ್ಲಾ ರೀತಿಯ ಪ್ರಯತ್ನಗಳನ್ನೂ ಮಾಡಿದಳು. ಅವರಿವರಿಂದ ತನ್ನ ಮಗನಿಗೆ ಹೇಳಿಸಿದಳು. ಚಿಕ್ಕ ವಯಸ್ಸಿನಲ್ಲಿ ಹೆಣ್ಣು ಮಕ್ಕಳಿಗೆ ಮದುವೆ ಮಾಡುವುದರಿಂದ ಆಗುವ ಅನಾಹುತಗಳನ್ನು ವಿವರಿಸಿ, ಅವನಿಗೆ ತಿಳಿ ಹೇಳುವ ಕೆಲಸ ಮಾಡಿದಳು. ಕಡೆಗೆ ಕಮ್ಲಿಯ ಮದುವೆಯನ್ನು ನಿಲ್ಲಿಸಲು ಪೊಲೀಸರಿಗೆ ಬೇರೆಯವರ ಮೂಲಕ ದೂರು ಕೊಡುವ ನಿರ್ಧಾರಕ್ಕೂ ಬರಲಾಯಿತು. ಆದರೆ ಶಂಕ್ರು 'ಯಾರಾದರೂ ಈ ವಿಚಾರವಾಗಿ ಮುಂದುವರೆದರೆ ನನ್ನ ಮತ್ತು ನನ್ನ ಹೆಂಡತಿಯ ಹೆಣ ನೋಡಬೇಕಾಗುತ್ತದೆ 'ಎಂದು ಹೆದರಿಸಿದ. ಅವನ ಒಂದು ಮಾತಿನಿಂದ ಎಲ್ಲಾ ಪ್ರಯತ್ನಗಳೂ ನಿಷ್ಫಲವಾಗಿ ಹೋದವು. ಕಾಲ ಮಿಂಚಿ ಹೋಗಿತ್ತು. ತಂದೆ ತಾಯಿಗಳ ಆಸೆಯೇ ಬೇರೆಯಾಗಿತ್ತು. ಈಗ ಬಂದಿರುವ ವರ ತುಂಬಾ ಒಳ್ಳೆಯವನು. ಒಳ್ಳೆಯ ಸಂಬಂಧ. ಮುಂದೆ ಇಂತಹ ಸಂಬಂಧ ಸಿಗುವುದಿಲ್ಲವೋ ಏನೋ... ಜೊತೆಗೆ ಸುತ್ತಮುತ್ತಲಿನವರ, ಹುಡುಗಿಯ ಸೋದರಮಾವಂದಿರ ಒತ್ತಡ... "ನಾವೇ ಮದುವೆಯ ಎಲ್ಲಾ ಖರ್ಚು ನೋಡಿಕೊಳ್ಳುತ್ತೇವೆ" ಹಾಗೆ ಹೀಗೆ... ಎಂದು. ಹ್ಯಾಗೋ ಅಂತೂಇಂತೂ ಆ ಕಮ್ಲಿಯನ್ನು ಬಲವಂತವಾಗಿ ಒಪ್ಪಿಸಿ 'ಮದುವೆ' ಎನ್ನುವ ಕಂದಕಕ್ಕೆ ನೂಕಿಯೇ ಬಿಟ್ಟರು.

ಪಾಪ ಕಮ್ಲೀ, ಮದುವೆ ಮಂಟಪದಲ್ಲಿ ತನ್ನೆಲ್ಲಾ ಆಸೆ ಆಕಾಂಕ್ಷೆಗಳನ್ನು ಬದಿಗೊತ್ತಿ, ತನ್ನೆಲ್ಲಾ ಕನಸುಗಳಿಗೆ ತಿಲಾಂಜಲಿ ನೀಡಿ ಕಣ್ಣೀರಿಡುತ್ತಾ ಗಂಡನ ಕೈಯಲ್ಲಿ ತಾಳಿ ಕಟ್ಟಿಸಿಕೊಂಡು 'ಸಂಸಾರ' ವೆಂಬ ಬಂಧನಕ್ಕೆ ಒಳಗಾದಳು. ಅದೆ ಮದುವೆಯಾಗಿ ಒಂದು ವರ್ಷದಲ್ಲಿ ಆಗಬಾರದ್ದು. ಆಗಿ ಹೋಯಿತು. ತುಂಬು ಗರ್ಭಿಣಿಯಾಗಿದ್ದ ಕಮ್ಲಿಗೆ ಹೆರಿಗೆ ಬೇನೆ ಪ್ರಾರಂಭವಾದಾಗ ಶಂಕ್ರು ಅವಳನ್ನು ಹತ್ತಿರದ ಆಸ್ಪತ್ರೆಗೆ ಸೇರಿಸಿದ. ಗರ್ಭಕೋಶ ತುಂಬಾನೆ ಚಿಕ್ಕದಾಗಿದ್ದರಿಂದ ಒಳಗೆ ಮಗು ಅಡ್ಡಡ್ಡ ಸಿಕ್ಕಿ ಹಾಕಿಕೊಂಡು ತುಂಬಾನೇ ಕಷ್ಟವಾಗುತ್ತಿತ್ತು. ವೈದ್ಯರು ಎಷ್ಟೇ ಪ್ರಯತ್ನಿಸಿದರೂ ಪರಿಸ್ಥಿತಿ ಕೈ ಮೀರುತ್ತಿತ್ತು. ಇದನ್ನು ತಿಳಿದ ಅವರು

ಶಂಕ್ರುವಿಗೆ ಮಗಳನ್ನು ಬೇರೆ ದೊಡ್ಡಾಸ್ಪತ್ರೆಗೆ ಕರೆದುಕೊಂಡು ಹೋಗಲು ಸಲಹೆ ನೀಡಿದರು. ರಾತ್ರಿ ಒಂದು ಗಂಟೆಯ ಸಮಯ. ಅಂತೂ ಇಂತೂ ಯಾರದೋ ಸಹಾಯದಿಂದ ಕಮ್ಲಿಯನ್ನು ದೊಡ್ಡಾಸ್ಪತ್ರೆಗೆ ಸೇರಿಸುವಷ್ಟರಲ್ಲಿ ಶಂಕ್ರು ಬಸವಳಿದು ಹೋಗಿದ್ದ. ಅಲ್ಲಿನ ವೈದ್ಯರು ಕಮ್ಲಿಯ ಪರಿಸ್ಥಿತಿಯನ್ನು ನೋಡಿ ತಕ್ಷಣ ಆಪರೇಷನ್ ಮಾಡಿ ಮಗು ತೆಗೆಯಲು ಮುಂದಾದರು. ಆಪರೇಷನ್ ಥಿಯೇಟರ್‌ಗೆ ಹೋಗುವ ಮುಂಚೆ

ಶಂಕ್ರು ಮತ್ತು ದೇವಿಯನ್ನು ಕರೆದು "ಇದೆಲ್ಲಾ ಚಿಕ್ಕ ವಯಸ್ಸಿನಲ್ಲಿ ಮದುವೆ ಮಾಡಿದ್ದರ ಫಲ, ಇದರ ಹೊಣೆಯೆಲ್ಲಾ ನಿಮ್ಮದೇ, ನೀವೇ ನಿಮ್ಮ ಕೈಯಾರೆ ನಿಮ್ಮ ಮಗಳನ್ನ ಸಾವಿನ ಕಂದಕಕ್ಕೆ ನೂಕ್ತಿದ್ದೀರಾ, " ಎಂದು ಹೇಳುತ್ತಾ ಚೆನ್ನಾಗಿ ಬೈದರು. ಶಂಕ್ರುವಿಗೆ ಆಗ ತಾನು ಮಾಡಿದ ತಪ್ಪಿನ ಅರಿವಾಗಿ ತಲೆತಗ್ಗಿಸಿ ದುಃಖಿಸುತ್ತಿದ್ದ. ಒಳಗಡೆ ಕಮ್ಲಿ ಮತ್ತು ಮಗು ಸಾವು ಬದುಕಿನ ಮಧ್ಯೆ ಹೋರಾಡುತ್ತಿದ್ದರು. ಸ್ವಲ್ಪ ಸಮಯದ ನಂತರ ಒಳಗಡೆಯಿಂದ ಮಗುವಿನ ಅಳು ಕೇಳಿಬಂತು. ಶಂಕ್ರು, ದೇವಿ, ಸೀತವ್ವ, ಜ್ಯೋತಿ ಎಲ್ಲರಿಗೂ ಆನಂದವಾಯಿತು. ಅಷ್ಟೊತ್ತಿಗೆ ಒಳಗಿನಿಂದ ಬಂದ ವೈದ್ಯೆ "ನೋಡಿ, ಮಗು, ಗಂಡು ಮಗು ಆರೋಗ್ಯವಾಗಿದೆ,

ಆದರೆ..." ಮುಂದಕ್ಕೆ ಮಾತನಾಡಲೇ ಇಲ್ಲ. ಶಂಕ್ರೂಗೆ ಗರಬಡಿದಂತಾಯಿತು. "ಆದರೆ... ಏನ್ ಡಾಕ್ಟ್ರೆ, ದಯವಿಟ್ಟು ಹೇಳಿ" ಎಂದು ಅಂಗಲಾಚಿದ.

* * * * *

"ಆದರೆ... ತಾಯಿಯ ಪರಿಸ್ಥಿತಿ ತುಂಬಾ ಹದಗೆಟ್ಟಿದೆ, ಮೊದಲೇ ನಿಶ್ಯಕ್ತಳಾಗಿದ್ದಳು, ಸಾಕಷ್ಟು ರಕ್ತ ಬೇರೆ ಹೋಗಿದೆ ಅವಳನ್ನು ಐ.ಸಿ. ಯುಗೆ ಶಿಫ್ಟ್ ಮಾಡ್ತಿದ್ದೀವಿ. ಇನ್ನೂ ಅರ್ಧಗಂಟೆ ಏನೂ ಹೇಳೋಕಾಗಲ್ಲ..." ಈ ಮಾತುಗಳನ್ನು ಕೇಳುತ್ತಿದ್ದಂತೆಯೇ ಶಂಕ್ರು ಮತ್ತು ದೇವಿ ಅಲ್ಲಿಯೇ ಕುಸಿದುಹೋದರು. ತಕ್ಷಣ ಸೀತವ್ವ ಮತ್ತು ಜ್ಯೋತಿ ಇಬ್ಬರನ್ನೂ ಸಂತೈಸಿದರು.

"ಡಾಕ್ಟ್ರೆ ನನ್ನ ಕಂದನ್ನ ಒಂದು ಸಾರಿ ನೋಡಬಹುದಾ?" ಸೀತವ್ವಾ ದೀನಳಾಗಿ ಬೇಡಿಕೊಂಡಳು. "ಈಗಲೇ ಆಗೊಲ್ಲ, ಆಮೇಲೆ ನಾವೇ ಹೇಳ್ತೀವಿ" ಎಂದಷ್ಟೇ ಹೇಳಿ ಕಮ್ಲಿಯನ್ನು ಐ.ಸಿ. ಯುಗೆ ಶಿಫ್ಟ್ ಮಾಡಿದರು.

ಸ್ವಲ್ಪ ಹೊತ್ತಾದ ಮೇಲೆ ಯಾರಾದರೂ ಒಬ್ಬರು ಮಾತ್ರ ಹೋಗಿ ನೋಡಬಹುದು ಎಂದಾಗ ಶಂಕ್ರು ತಾನೇ ಹೋಗುತ್ತೇನೆಂದು ಆ ವಾರ್ಡಿನ ಒಳಗೆ ಹೋದ. ಅಲ್ಲಿ ಬರೀ ನಿಶ್ಯಬ್ದ... ಮಗಳು ಕಮ್ಲಿ ಮಲಗಿದ್ದಾಳೆ. ಅವಳ ಕೈಗೆ ಏನೋ ಡ್ರಿಪ್ಸ್ ಕಟ್ಟಿದ್ದಾರೆ. ಮೂಗಿಗೆಲ್ಲಾ ಏನೇನೋ ಪೈಪ್ ಹಾಕಿದ್ದಾರೆ. ಕಣ್ಣು ಮುಚ್ಚಿದ್ದಾಳೆ... ಹಾಗೇ ಅವಳನ್ನು ನೋಡಿ ಒಳಗೊಳಗೇ ದುಃಖಿಸುತ್ತಿದ್ದ ಶಂಕ್ರು ಕಮ್ಲಿ ಆಗ ತಾನೆ ಸ್ವಲ್ಪ ಅಲುಗಾಡಿದಳು. ತಕ್ಷಣ ಅವಳ ಮುಖದ ಬಳಿ ಬಂದು "ಕಮ್ಲಿ ನೋಡು ಮಗಾ... ಕಣ್ಣು ಬಿಡವ್ವಾ" ಎಂದ. ಕಮ್ಲಿ ನಿಧಾನವಾಗಿ ಕಣ್ಣು ಬಿಟ್ಟಳು... ಅವಳ ಉಸಿರಾಟ ತುಂಬಾ ತೀವ್ರವಾಗಿತ್ತು ಒಂದೇ ಒಂದು ಮಾತು ಹೇಳಿದಳು. ಅದೂ ತಡವರಿಸುತ್ತಾ "ಅಪ್ಪಾ... ಅಪ್ಪಾ... ಜ್ಯೋತಿಗೆ.. ಜ್ಯೋತಿಗೆ ನನ್ನ ತರಾ ಆಗಬಾರದು... ಅವಳನ್ನು ಚೆನ್ನಾಗಿ... ಚೆನ್ನಾಗಿ..." ಮುಂದಿನ ಪದಗಳು ಅವಳ ಬಾಯಿಂದ ಬರಲೇ ಇಲ್ಲ, ಕಣ್ಣುಗಳು ಹಾಗೇ ನಿಶ್ಚಲವಾದವು. ದೇಹ ತಣ್ಣಗಾಗತೊಡಗಿತು. ಶಂಕ್ರು ಮಗಳನ್ನು ಅಲುಗಾಡಿಸುತ್ತಾ "ಕಮ್ಲೀ, ಮಗಳೇ..." ಎಂದು ಜೋರಾಗಿ ಚೀರಿದ...ಅಲ್ಲಿಂದ "ಡಾಕ್ಟ್ರೇ, ಡಾಕ್ಟ್ರೆ, ಬೇಗ ಬನ್ನಿ ನನ್ನ ಮಗಳು ಹ್ಯಾಗ್ಯಾಗೋ ಆಡ್ತಿದಾಳೆ, ಬೇಗ ಬನ್ನಿ" ಎಂದು ಚೀರಿಕೊಂಡ. ತಕ್ಷಣ ಓಡೋಡಿ ಬಂದ ಡಾಕ್ಟರ್ ಕಮ್ಲಿಯನ್ನು ಪರೀಕ್ಷಿಸಿ ನೋಡಿ "ಅಯಾಮ್ ಸಾರಿ" ಎಂದು ಹೇಳಿ ಅಸಹಾಯಕರಾಗಿ ನಿಂತಿದ್ದರು... ಮಗಳೇ, ಕಮ್ಲೀ.. ಶಂಕ್ರುವಿನ ಆಕ್ರಂದನ ಮುಗಿಲು ಮುಟ್ಟಿತ್ತು.

ಇಷ್ಟನ್ನೆಲ್ಲಾ ನೆನಪಿಸಿಕೊಳ್ಳುತ್ತಾ ಸೀತವ್ವ ಕಂಬನಿ ಒರೆಸಿಕೊಂಡಳು. ಮಗು ನಿದ್ರಿಸುತ್ತಿತ್ತು ಅದನ್ನೇ ನೋಡುತ್ತಾ ಪಾಪ ಈ ಕೂಸಿನದೇನು ತಪ್ಪು. ಕಮ್ಲಿಯ ಸಾವಿಗೆ ಈ ಹಸುಗೂಸು ಹೆಂಗ್ ಕಾರಣವಾಗುತ್ತೆ ಎಲ್ಲಾ ಯಾಕ್ ಈ ಮಗೀನ ದೂಷಣೆ ಮಾಡ್ತಾರೆ. ಇಲ್ಲ. ನನ್ನ ಕಮ್ಲಿ ತಾನು ನಂದಿ ಹೋಗಿ ಈ ದೀಪ ಹೊತ್ತಿಸಿ ಹೋಗೋಳೆ... ಜೊತೆಗೆ ನಮ್ಮ ಸಮಾಜಕ್ಕೇ ಒಂದು ಸಂದೇಶ ಕೊಟ್ಟು ಹೋಗೋಳೆ. ಈ ಮಗ ಕಮ್ಲಿಯ ಕನಸುಗಳಿಗೆ ಜೀವ ತುಂಬೋ ಸುಕುಮಾರ. ಅಂತಾ ಮಗೂ ಮುಖಾನ ಹಾಗೇ ನೋಡ್ತಾ. ನಿದ್ದೆ ಹೋದಳು. ಇದು ಬರೀ ಕಥೆಯಲ್ಲ. ಒಂದು ಹೆಣ್ಣಿನ ಧಾರುಣ ವ್ಯಥೆ.

"ಬಾಲ್ಯ ವಿವಾಹ ಅಳಿಯಲಿ, ಹೆಣ್ಣಿನ ಪ್ರಾಣ ಉಳಿಯಲಿ"

ವಾರಭವಿಷ್ಯ

3.05.2026 ರಿಂದ 9.05.2026

ಈ ವಾರದಲ್ಲಿ ಗ್ರಹಗಳ ರಾಶಿ ಸಂಚಾರ: ರವಿ-ಮೇಷ, ಚಂದ್ರ-ಧನುಸ್ಸು, ಮಕರ, ಕುಜ-ಮೀನ, ಬುಧ-ಮೀನ, ಬುಧ-ಮೇಷ, ಗುರು-ಮಿಥುನ, ಶುಕ್ರ-ವೃಷಭ, ಶನಿ-ಮೀನ, ರಾಹು-ಕುಂಭ ಮತ್ತು ಕೇತು-ಸಿಂಹ



ವಿ.ಕೇಶವಮೂರ್ತಿ
ಜ್ಯೋತಿಷ್ಯ ವಿದ್ವಾಂಸರು, 'ಭಾವಸಾರ್ ರತ್ನ'
'ಚೈತನ್ಯಶ್ರೀ ಪ್ರಶಸ್ತಿ ಪುರಸ್ಕೃತರು'
'ಕಲ್ಪದ್ರುಮ ಜ್ಯೋತಿಷ್ಯ ಅಧ್ಯಯನ ಕೇಂದ್ರ'
ವಿಳಾಸ: 533, 6ನೇ ಕ್ರಾಸ್, ಬೋಗಾದಿ ಉತ್ತರ,
ಮೈಸೂರು ನಿರ್ಮಿತಿ ಕೇಂದ್ರ ಹತ್ತಿರ, ಮೈಸೂರು.
ಮೊ: 9740973224, 9739548720

ಮೇಷ (ಚು,ಚೆ,ಲ,ಲಿ,ಲು,ಲೆ,ಲೂ,ಅ)

ಯಾವುದೂ ನೀವಂದುಕೊಂಡಂತೆ ಸಾಗುತ್ತಿಲ್ಲವೆ, ಈ ಸಪ್ತಾಹದ ಕಡೆಯವರೆಗೆ ಕಾಯಿರಿ. ಕೈ ಹಾಕಿದ ಕೆಲಸಗಳು ನಿಂತು ನಿಂತು ಸಾಗುತ್ತಿದ್ದರೆ ಸಮಯಕ್ಕಾದವನೆ ನೆಂಟ ಎಂಬಂತೆ ಕಾಣದ ಕೈ ಸಹಾಯ ದೊರಕುವುದು. ಸಜ್ಜನರ ಸಹವಾಸದಿಂದ ವಾರ ಮಧ್ಯೆ ಕೊಂಚ ನಿರಾಳದ ತಂಗಾಳಿ ಬೀಸುವುದು. ಪ್ರವಾಸೋದ್ಯಮ ಏಜೆನ್ಸಿಯವರಿಗೆ ಬೇಡಿಕೆ ಹೆಚ್ಚಾಗಿ, ಕೈ ತುಂಬಾ ಹಣ ಸಂಪಾದನೆ ಆಗುವುದು.

ಶ್ರೀ ಸುಬ್ರಮಣ್ಯಸ್ವಾಮಿ ದರ್ಶನ. ಶುಭ ಸಂಖ್ಯೆ-6

ವೃಷಭ (ಇ,ಉ,ಎ,ಒ,ವ,ವಿ,ವು,ವೆ,ವೂ)

ವಾರದಾರಂಭ'ಕ್ಕೆ ಆರೋಗ್ಯದಲ್ಲಿ ಸುಧಾರಣೆ. ಸಾಮಾಜಿಕವಾಗಿ ಮೇಲು ಸ್ಥರಕ್ಕೆ ಬರುವಿರಿ. ಅದರಿಂದ ಮನೋಲ್ಲಾಸ, ದೈವ ಕಾರ್ಯಗಳಲ್ಲಿ ಆಸಕ್ತಿ. ಮಕ್ಕಳ ಹಿತಚಿಂತನೆಗೆ ಪ್ರಾಧಾನ್ಯತೆ ನೀಡಿ, ಅವರು ವಿದ್ಯಾ ವ್ಯಾಸಂಗಗಳಿಂದ ಕೀರ್ತಿಗೆ ಭಾಜನರಾಗುವರು. ವಿವಾಹ ಯೋಗ್ಯರಿಗೆ ಶುಭ ಸಮಾಚಾರ ದೊರೆಯಲಿದೆ. ಸಾಲ ಮಾಡಿದರೂ ಸದ್ವಿನಿಯೋಗವಾಗಲಿದೆ. ವಾರಾಂತ್ಯಕ್ಕೆ ಶಾರ್ಟ್ ಟ್ರಿಪ್‌ಗಳು ಉಂಟಾಗಲಿದೆ.

ಶ್ರೀ ದೇವೀ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-4

ಮಿಥುನ (ಕ,ಕಿ,ಕು,ಘ,ಙ,ಛ,ಕೆ,ಕೊ,ಹ)

ಆತುರಗಾರನಿಗೆ ಬುದ್ಧಿ ಮಟ್ಟ ಎಂಬಂತೆ ನಡೆದು ತೊಂದರೆ ಎದುರಿಸಬೇಕಾಗುವುದು. ವ್ಯಾಪಾರ, ಉದ್ಯೋಗಗಳಲ್ಲಿ ಅಲ್ಪ ಲಾಭಕ್ಕೆ ತೃಪ್ತಿ ಪಟ್ಟುಕೊಳ್ಳಿ, ಸಾಲಗಾರರ ತಗಾದೆಯೂ ಇರುತ್ತದೆ. ರಾಜಕಾರಣಿಗಳಿಗೆ ಅಪವಾದ ಸುತ್ತಿಕೊಳ್ಳುವುದು. ವಾರದ ಕಡೆಗೆ ವಿಲಾಸಿ ವಸ್ತುಗಳನ್ನು ಕೊಳ್ಳುವಿರಿ. ಆಟ-ಪಾಟಗಳಲ್ಲಿ ಗೆಲುವನ್ನು ಕಾಣುವಿರಿ. ಆತುರದ ಡ್ರೈವಿಂಗ್ ಕ್ಷೇಮವಲ್ಲ.

ಶ್ರೀ ವಿಷ್ಣು ಸಹಸ್ರನಾಮ ಪಠಿಸಿ. ಶುಭ ಸಂಖ್ಯೆ-5

ಕಟಕ (ಹೊ,ಹು,ಹೆ,ಡ,ಡಿ,ಡು)

ಸಪ್ತಾಹದ ಆರಂಭಕ್ಕೆ ಮನಸ್ಸಿಗೆ ಮುದ ನೀಡುವ ಪ್ರಸಂಗಗಳು. ಮನೆಗೆ ಅತಿಥಿ-ಅಭ್ಯಾಗತರ ಆಗಮನ, ಅವರ ಸತ್ಕಾರಕ್ಕೆ ಹೇರಳ ಧನ ವ್ಯಯ. ಗುರುಬಲದ ಕೊರತೆಯಿಂದ ಶ್ರಮದಿಂದ ಕಾರ್ಯ ಸಾಧನೆ. ಋಣಬಾಧೆಗಳು ಕಾಡುವುದು. ಅಪರಿಚಿತರೊಂದಿಗೆ ನಿಮ್ಮ ಬ್ಯಾಂಕ್ ವಿವರಗಳನ್ನು ಹಂಚಿಕೊಳ್ಳಬೇಡಿ. ವಾರಾಂತ್ಯಕ್ಕೆ ದಾನ-ಧರ್ಮ ಬುದ್ಧಿ, ಅಸಹಾಯಕರಿಗೆ ಸಹಾಯ ಮಾಡುವುದರಿಂದ ಧನ್ಯತಾಭಾವ.

ಶ್ರೀ ದುರ್ಗಾಸ್ತುತಿ, ಶುಭ ಸಂಖ್ಯೆ-8

ಸಿಂಹ (ಮ,ಮಿ,ಮು,ಮೊ,ಮೆ,ಟ,ಟಿ,ಟು,ಟೆ)

ವಾರದಾರಂಭಕ್ಕೆ ವಿತ್ತಲಾಭ, ವಸ್ತ್ರಾಭರಣ ಲಾಭ ಕೈ ಹಿಡಿದ ಮಹತ್ವದ ಕೆಲಸ ಪೂರ್ಣಗೊಳ್ಳಲು ಗುರು ಕೃಪೆಯೇ ಕಾರಣ. ನಿಂತು ಹೋಗಿದ್ದ ಕೆಲಸಗಳು ಮರು ಚಾಲನೆ ಪಡೆಯುವುದು. ಕ್ರಯ-ವಿಕ್ರಯ ಲೇವಾದೇವಿ ವ್ಯವಹಾರಗಳ ಉತ್ತಮ ಆದಾಯವನ್ನು ಕಾಣುವಿರಿ. ನೆರೆಹೊರೆಯಲ್ಲಿ ಭ್ರಾತೃತ್ವದಿಂದ ಮೆಚ್ಚುಗೆಗೆ ಪಾತ್ರರಾಗುವಿರಿ. ಧರ್ಮಗುರುಗಳ ಭೇಟಿ ಹಾಗೂ ಆಶೀರ್ವಚನ ದೊರೆಯುವುದು.

ಶ್ರೀ ಸೂರ್ಯಸ್ತುತಿ ಸಂಖ್ಯೆ. ಶುಭ ಸಂಖ್ಯೆ-1

ಕನ್ಯಾ (ಟೊ,ಪ,ಪಿ,ಪು,ಫ,ಣ,ಠ,ಪೆ,ಪೊ)

ಪರಿಶ್ರಮದಿಂದ ಧನ ಸಂಪಾದನೆ, ಹಾಗೆ ಸಂಪಾದಿತ ಹಣ ಬಹುಪಾಲು ಅಪವ್ಯಯವಾಗುವ ಸಾಧ್ಯತೆ. ಇದು ನಿಮ್ಮ ನ್ಯೂನತೆಗಳನ್ನು ಸರಿಪಡಿಸಿಕೊಳ್ಳುವ ವಾರ. ಉದ್ಯೋಗದಲ್ಲಿ ನೀವು ಬಯಸಿದ ಬದಲಾವಣೆಗಳು ಸಂಭವಿಸಬಹುದು. ಸಣ್ಣ ಕೈಗಾರಿಕೆಗಳಿಗೆ ಬೇಡಿಕೆ ಹೆಚ್ಚು. ಆದಾಯವೂ ಹೆಚ್ಚುವುದು. ಶ್ರೀಮತಿಯೊಂದಿಗೆ ಮನಸ್ತಾಪಕ್ಕೆ ಕೊಡದಿರಿ. ವಿದ್ಯಾರ್ಥಿಗಳಿಗೆ ಅನಿರೀಕ್ಷಿತ ಅವಕಾಶಗಳು ದೊರೆಯುತ್ತವೆ.

ಶ್ರೀ ಶಿವಾಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-3

ತುಲಾ (ರ,ರಿ,ರು,ರೆ,ರೊ,ತ,ತಿ,ತು,ತೆ)

ವಾರದಾರಂಭಕ್ಕೆ ಯತ್ನ ಕಾರ್ಯಗಳು ನಿಧಾನಗತಿಯಲ್ಲಿ ಸಾಗಿದರೂ ಗುರುಕೃಪೆಯಿಂದ ಗುರಿ ಮುಟ್ಟುವುದು. ಹೊಸ ಮಿತ್ರರು ದೊರೆಯುವರು. ಆದರೆ ಗುಣ ಅರಿತು ಗೆಳೆತನ ಮಾಡಿ. ಸರ್ಕಾರಿ ಕೆಲಸಗಳು ನಿಮಗೆ ಅನುಕೂಲಕರವಾಗಿರುವುದು. ಕಾಕವಾಹನನಾದ ಶ್ರೀ ಶನಿಯೂ ಶುಭನಿರುವ ಕಾರಣ ಋಣ ಮುಕ್ತಿ, ಶತ್ರು ನಿಗ್ರಹಗಳಿಗೆ ಸಹಾಯಕರನಾಗಿದ್ದಾನೆ. ಅಕಾಲಿಕ ಭೋಜನದಿಂದ ಆರೋಗ್ಯ ಕೆಡುವುದು.

ಶ್ರೀ ಮನ್ನಾರಾಯಣ ಉಪಾಸನೆ. ಶುಭ ಸಂಖ್ಯೆ-7

ವೃಶ್ಚಿಕ (ತೊ,ನ,ನಿ,ನು,ನೆ,ನೊ,ಯು,ಯಿ,ಯ)

ನಿಮ್ಮ ಯೋಜನೆಗಳು ಕಾರ್ಯರೂಪಕ್ಕೆ ಬರಲು ಹೆಚ್ಚಿನ ತಯಾರಿಯ ಅಗತ್ಯವಿದೆ. ವ್ಯಾಪಾರ ವ್ಯವಹಾರಗಳಲ್ಲೂ ಲಾಭ ಗಳಿಸಲು ಕಷ್ಟಪಡುವಿರಿ. ಆಲಸ್ಯದಿಂದ ಕೆಲಸಗಳು ಅಪೂರ್ಣವಾಗುವುದು. ಸರ್ಕಾರಿ ನೌಕರರಿಗೆ ಮೇಲಧಿಕಾರಿಗಳ ಸಹಕಾರ, ಮೆಚ್ಚುಗೆಗಳು ದೊರೆಯುತ್ತದೆ. ಆರ್ಥಿಕ ಸಮಸ್ಯೆಗಳಿಂದ ಕೆಲವು ಮಟ್ಟಿಗೆ ಹೊರಬರುತ್ತೀರಿ. ವಾರದ ಕೊನೆಯಲ್ಲಿ ಕುಟುಂಬದಲ್ಲಿ ಗೊಂದಲ ಉಂಟಾಗಬಹುದು.

ಶ್ರೀ ಯೋಗಾನರಸಿಂಹಸ್ವಾಮಿ ದರ್ಶನ. ಶುಭ ಸಂಖ್ಯೆ-9

ಧನುಸ್ಸು (ಯೆ,ಯೊ,ಬ,ಬಿ,ಬು,ಧ,ಭ,ಢ,ಬೆ)

ವಾರದ ಆದಿಗೆ ಕೊಡು ತರುವ ವ್ಯವಹಾರದಲ್ಲಿ ಮಿಶ್ರ ಫಲವನ್ನು ಅನುಭವಿಸುವಿರಿ. ಹಣಕಾಸಿನ ಹೊಂದಾಣಿಕೆ ಸುಸೂತ್ರವಾಗಿದ್ದರೂ ನಿಮ್ಮ ಊಹೆಗೂ ಮೀರಿ ಖರ್ಚುಗಳು ಎದುರಾಗುವುದು. ರಾಜಕಾರಣಿಗಳಿಗೆ ಭ್ರಷ್ಟತೆಯ ಭಯ ಕಾಡುವುದು. ಸಜ್ಜನರ ಸಹವಾಸ ಹಾಗೂ ಪವಿತ್ರ ಕ್ಷೇತ್ರಗಳ ಭೇಟಿ. ಮನೆಯಲ್ಲಿ ಮಂಗಳ ಕಾರ್ಯ ನಡೆಯುವುದು. ಮಹಿಳಾ ಮಣಿಯರು ಮಾಂಗಲ್ಯ ಸರ ರಕ್ಷಿಸಿಕೊಂಡು ಓಡಾಡಲಿ.

ಶ್ರೀ ಗುರುರಾಯರ ಪೂಜೆ. ಶುಭ ಸಂಖ್ಯೆ-2

ಮಕರ (ಬೊ,ಜ,ಜೆ,ಶಿ,ಶು,ಶೆ,ಶೊ,ಗ,ಗಿ)

ಈ ವಾರವೆಲ್ಲ ಚಂದ್ರ ಸಂಚಾರ ಶುಭ ಭಾವಗಳಲ್ಲಿ ಇರುವುದರಿಂದ ಪ್ರಿಯಜನರ ಸಂಗ, ಸಹವಾಸಗಳಿಂದ ಮನಸ್ಸಿಗೆ ಖುಷಿ. ಎಲ್ಲರಲ್ಲೂ ಪ್ರೀತ್ಯಾದರಗಳನ್ನು ಗಳಿಸುವಿರಿ. ನಿರೀಕ್ಷಿತ ಮೂಲಗಳಿಂದ ಧನಾದಾಯವಾಗುವುದು. ಸತಿ-ಪತಿಯರಲ್ಲಿ ಅನುರಾಗ ಹೆಚ್ಚುವುದು. ಗೋವು ಪಾಲಕರಿಗೆ ಹೆಚ್ಚಿನ ಧನಲಾಭ. ಸರ್ಕಾರಿ ನೌಕರರಿಗೆ ಬೇಡದ ಸ್ಥಳಕ್ಕೆ ವರ್ಗಾವಣೆಯಿಂದ ಬೇಸರ. ದೂರ ಪ್ರಯಾಣಗಳನ್ನು ಮುಂದೂಡಿ.

ಶ್ರೀ ಶನಿ ಅಷ್ಟೋತ್ತರ ಪಠಿಸಿ. ಶುಭ ಸಂಖ್ಯೆ-5

ಕುಂಭ (ಗು,ಗೆ,ಗೊ,ಸ,ಸಿ,ಸು,ಸೆ,ಸೊ,ದ)

ಶ್ರೀ ಗುರುವಿನ ಭ್ರಮಣ ಹಾಗೂ ಚಂದ್ರಗ್ರಹ ನಿಮ್ಮ ರಾಶಿಯಲ್ಲಿ ಗೋಚರಿಸುವ ಪರಿಣಾಮ ಆರ್ಥಿಕ ಸ್ಥಿತಿಯಲ್ಲಿ ಮುನ್ನಡೆಯನ್ನು ಸಾಧಿಸುವಿರಿ. ಈ ವಾರ ನೀವು ಬಹಳಷ್ಟು ಸಾಧಿಸುವ ಸಾಮರ್ಥ್ಯವನ್ನು ಹೊಂದಿರುತ್ತೀರಿ. ಬಂದ ಅವಕಾಶಗಳು ಕೈ ಜಾರದಂತೆ ನೋಡಿಕೊಳ್ಳಿ. ಯಾವುದೇ ಹೊಸ ಯೋಜನೆ ಆರಂಭಿಸಲು ಸಮಯ ಚೆನ್ನಾಗಿ ಮಹತ್ವದ ಕಾರ್ಯದಲ್ಲಿ ಕಾನೂನು ಸಲಹೆಯ ಅಗತ್ಯವಿದೆ.

ಶ್ರೀ ಶಿರಡಿ ಸಾಯಿಬಾಬಾ ದರ್ಶನ. ಶುಭ ಸಂಖ್ಯೆ-3

ಮೀನ (ದಿ,ದು,ಖ,ಝ,ಥ,ತೆ,ದೊ,ಚ,ಚಿ)

ಇದು ನಿಮಗೆ ಸಾಡೇಸಾತಿ ಶನಿಪ್ರಭುವಿನ ಕಾಲ. ಕೈ ಕೆಸರಾದರೆ ಬಾಯಿ ಮೊಸರು. ಚೆನ್ನಾಗಿದ್ದರೆ ನೆಂಟರು, ಕೆಟ್ಟರೆ ಯಾರೂ ಇಲ್ಲ. ಶುಭ ಚಂದ್ರನಿಂದ ಧನಾದಾಯ ಇದ್ದರೂ ಕಾಯಿಲೆ-ಕಸಾಲೆಗಳಿಂದ ವೈದ್ಯೋಪಚಾರಕ್ಕೆ ವ್ಯಯವಾದೀತು. ಕೆಲವು ನಿರ್ಣಯಗಳು ಸಫಲತೆಯತ್ತ ಮುಖ ಮಾಡಲಿವೆ. ಯೋಚಿಸಿ ಮುಂದಡಿ ಇಡಿ. ವಾರದ ಕಡೆಗೆ ಕೆಲಸದ ಒತ್ತಡ ಹೆಚ್ಚಾಗಿ ದೇಹಾಲಸ್ಯವಾಗುವುದು.

ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿ. ಶುಭ ಸಂಖ್ಯೆ-6

ಮೈಸೂರು ಮಿತ್ರ

ನಂ.ಗೂಡಲ್ಲಿ ಒಳ ಚರಂಡಿ ಸಮಸ್ಯೆಗೆ ಶಾಶ್ವತ ಪರಿಹಾರ

21.96 ಕೋಟಿ ರೂ. ಕಾಮಗಾರಿಗೆ ಶಾಸಕ ದರ್ಶನ್ ಚಾಲನೆ

ನಂಜನಗೂಡು: ಕಳೆದ 20 ವರ್ಷಗಳ ಒಳ ಚರಂಡಿ ವ್ಯವಸ್ಥೆಯ ಸಮಸ್ಯೆಗೆ ಶಾಶ್ವತ ಪರಿಹಾರ ಒದಗಿಸಿ ನಂಜನಗೂಡು ಪಟ್ಟಣ ಪ್ರದೇಶದ ಜನರಿಗೆ ಒಳಚರಂಡಿ ಮೂಲ ಸೌಕರ್ಯ ಒದಗಿಸುವ ಸಲುವಾಗಿ ಹೊಸದಾಗಿ 21 ಕೋಟಿ 96 ಲಕ್ಷ ವೆಚ್ಚದಲ್ಲಿ ಭೂಮಿ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ ತಿಳಿಸಿದರು.

ನಗರದ ರಾಮಸ್ವಾಮಿ ಬಡಾವಣೆ, ವಿದ್ಯಾನಗರ, ಕಲ್ಲಹಳ್ಳಿ ಬಡಾವಣೆಗಳಲ್ಲಿ 21ಕೋಟಿ 96 ಲಕ್ಷ ವೆಚ್ಚದ ಒಳಚರಂಡಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

2006ರಿಂದ ನಂಜನಗೂಡು ಪಟ್ಟಣದಲ್ಲಿ ಒಳಚರಂಡಿ ಕಾಮಗಾರಿ ನಡೆದಿದ್ದು, ಕಳೆದ 20 ವರ್ಷಗಳಿಂದಲೂ ಸಹ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಲು ಸಾಧ್ಯವಾಗಿಲ್ಲ, ಜೊತೆಗೆ ನಂಜನಗೂಡು ಪಟ್ಟಣದಲ್ಲಿ ಹೊಸದಾಗಿ ಯೋಜನೆ ಇಲ್ಲದ ಬಡಾವಣೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ, ಇದರಿಂದಾಗಿ ಜನರಿಗೆ ಮೂಲ ಸೌಕರ್ಯವನ್ನು ಒದಗಿಸಲು ಸಾಧ್ಯವಾಗುತ್ತಿಲ್ಲ, ನಾನು ಶಾಸಕನಾಗಿ ಆಯ್ಕೆಯಾದ ನಂತರ ಜನ ಸಂಪರ್ಕ ಸಭೆ ನಡೆಸುವ ವೇಳೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿ ಮೂಲ ಸೌಕರ್ಯ ಒದಗಿಸುವಂತೆ ಜನರು ಮನವಿ ಮಾಡಿದ್ದರು.



ಅಭಿವೃದ್ಧಿ ಕಾಮಗಾರಿಗೆ ಗುದ್ದಲಿ ಪೂಜೆ ನೆರವೇರಿಸುತ್ತಿರುವ ಶಾಸಕ ದರ್ಶನ್.

ಈ ಬಗ್ಗೆ ಅಧಿವೇಶನದಲ್ಲಿ ಒಳಚರಂಡಿ ವ್ಯವಸ್ಥೆಗೆ ಅನುದಾನ ಕಲ್ಪಿಸುವಂತೆ ಸಚಿವರ ಗಮನ ಸೆಳೆದಿದ್ದೆ, ನನ್ನ ಮನವಿಯ ಮೇರೆಗೆ ಹಾಗೂ ಪರಿಸರ ಮಾಲಿನ್ಯಕ್ಕೆ ಕಡಿವಾಣ ಹಾಕುವ ಹಿತದೃಷ್ಟಿಯಿಂದಾಗಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಹೊಸದಾಗಿ 21 ಕೋಟಿ 96 ಲಕ್ಷ ಅನುದಾನವನ್ನು ನೀಡಿದೆ, ಈ ಅನುದಾನದಲ್ಲಿ ಹೊಸದಾಗಿ ನಗರ ಸಭೆಗೆ ಸೇರ್ಪಡೆಯಾದ ದೇವಿರಮ್ಮನಹಳ್ಳಿ ಗ್ರಾಮ ಪಂಚಾಯಿತಿ ಪ್ರದೇಶದ ರಾಮಸ್ವಾಮಿ ಬಡಾವಣೆ ಸೇರಿದಂತೆ ಹೊಸ ಬಡಾವಣೆಗಳು ಮತ್ತು ವಿದ್ಯಾನಗರ ಬಡಾವಣೆ, ಕಲ್ಲಹಳ್ಳಿ ಸುತ್ತಮುತ್ತಲಿನ ಹೊಸ ಬಡಾವಣೆಗಳಲ್ಲಿ ಒಳಚರಂಡಿ ವ್ಯವಸ್ಥೆಯ ಕಾಮಗಾರಿ ನಡೆಯಲಿದ್ದು ಜನತೆಗೆ ಶೀಘ್ರದಲ್ಲಿ ಒಳಚರಂಡಿ ವ್ಯವಸ್ಥೆ ಲಭ್ಯವಾಗಲಿದೆ ಎಂದು ಹೇಳಿದರು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕುರಹಟ್ಟಿಕೆ.ಜಿ.ಮಹೇಶ್, ಗ್ಯಾರಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ನಗರಸಭಾ ಮಾಜಿ ಅಧ್ಯಕ್ಷ ಶ್ರೀಕಂಠಸ್ವಾಮಿ, ಕಾಂಗ್ರೆಸ್ ಎಸ್ಸಿ ಘಟಕ ರಾಜ್ಯ ಪ್ರಧಾನ ಕಾರ್ಯದರ್ಶಿ ರವಿಪ್ರಕಾಶ್, ಎಸ್ಸಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಉಪ್ಪಿನಹಳ್ಳಿಶಿವಣ್ಣ, ನಗರಸಭಾ ಮಾಜಿ ಸದಸ್ಯರಾದ ಎಸ್.ಪಿ.ಮಹೇಶ್, ಕೆ.ಎಂ.ಬಸವರಾಜು, ರಮೇಶ್, ಯೋಗೀಶ್, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಕರಳಾಪುರ ನಾಗರಾಜು, ಯುವ ಕಾಂಗ್ರೆಸ್ ತಾಲೂಕು ಅಧ್ಯಕ್ಷ ವಿಜಯಕುಮಾರ್, ಮುಖಂಡರಾದ ಅಬ್ದುಲ್ ಖಾದರ್, ಶಿರೇಖಾ, ಶಿವಶಂಕರ್, ಗೋವಿಂದರಾಜು, ಅಕ್ರಮ ಸಕ್ರಮ ಸಮಿತಿ ಸದಸ್ಯ ಹಾಡ್ಯ ಜಯರಾಮ್, ನಗರಸಭಾ ಆಯುಕ್ತ ಎಂ.ಬಸವರಾಜು, ಎಇಇ ಮಹೇಶ್, ಎಇ ಸಮಂತ್, ಪರಿಸರ ನೈರ್ಮಲ್ಯ ಅಧಿಕಾರಿ ಮೈತ್ರಾದೇವಿ, ಇತರರು ಉಪಸ್ಥಿತರಿದ್ದರು.

ಕ್ರಿಕೆಟ್ ಆಡುವಾಗ ದುರಂತ

ಬಾಲ್ ಹಿಡಿಯುವಾಗ ವಿದ್ಯುತ್ ತಂತಿ ಮುಟ್ಟಿ ಬಾಲಕ ಸಾವು

ಬೆಟ್ಟದಪುರ: ಕ್ರಿಕೆಟ್ ಆಟವಾಡುವ ವೇಳೆ ಬಾಲನ್ನು ಹಿಡಿಯಲು ಹೋದ ಬಾಲಕ ನೋರ್ವ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿರುವ ಘಟನೆಯೊಂದು ಸಂಭವಿಸಿದೆ. ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಬೆಟ್ಟದತುಂಗ ಬಿಟಿಎಂ ಕೊಪ್ಪಲು ಗ್ರಾಮದ ಪ್ರಸನ್ನ ಎಂಬುವರ ಪುತ್ರ ಧನಂಜಯ್ ಎಂಬಾತನೇ ವಿದ್ಯುತ್ ಸ್ಪರ್ಶದಿಂದ ಸಾವನ್ನಪ್ಪಿದ ಬಾಲಕ.




6ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಈತ ಇಂದು ಮಧ್ಯಾಹ್ನ ಸ್ನೇಹಿತರೊಂದಿಗೆ ಕ್ರಿಕೆಟ್ ಆಡುವ ವೇಳೆ ಬಾಲು ತುಂಡಾಗಿ ಬಿದ್ದಿದ್ದ ತಂತಿ ಮೇಲೆ ಬಿತ್ತು. ಇದು ಗೊತ್ತಿಲ್ಲದೆ ಈತ ಬಾಲನ್ನು ಮುಟ್ಟುವ ಬದಲು ತಂತಿಯನ್ನು ಮುಟ್ಟಿದಾಗ ವಿದ್ಯುತ್ ಸ್ಪರ್ಶವಾಗಿ ಬಾಲಕ ಮೃತಪಟ್ಟಿದ್ದಾನೆ. ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದ್ದು ದೂರು ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ಎಸ್.ಜಯಶ್ರೀ ತಾಲೂಕಿಗೆ ಪ್ರಥಮ ರ್‍ಯಾಂಕ್

ಬನ್ನೂರು: ಪಟ್ಟಣದ ವಿವೇಕಾನಂದ ಪದವಿ ಪೂರ್ವ ಕಾಲೇಜಿನ ದ್ವಿತೀಯ ಪಿಯುಸಿ ವಿದ್ಯಾರ್ಥಿನಿ ಎಸ್.ಜಯಶ್ರೀ ವಿಜ್ಞಾನ ವಿಭಾಗದಲ್ಲಿ 594 ಅಂಕ ಪಡೆದು ರಾಜ್ಯಕ್ಕೆ 6ನೇ, ಮೈಸೂರು ಜಿಲ್ಲೆಗೆ 3ನೇ ಹಾಗೂ ತಾಲೂಕಿಗೆ ಪ್ರಥಮ ರ್‍ಯಾಂಕ್ ಪಡೆದಿದ್ದಾರೆ.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಚುನಾವಣೆಯಲ್ಲಿ ಜಯಭೇರಿ



ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ವಿಜೇತರಾದ ಶಿಕ್ಷಕರು ವಿಜಯೋತ್ಸವ ಆಚರಿಸಿದರು.

ತಿ.ನರಸೀಪುರ, ಮೇ 2– ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಗೆ ನಡೆದ ಚುನಾವಣೆಯಲ್ಲಿ ರಾಜ್ಯ ಸರ್ಕಾರಿ ನೌಕರರ ಸಂಘದ ತಿ.ನರಸೀಪುರ ತಾಲೂಕು ಘಟಕದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ, ಗೌರವಾಧ್ಯಕ್ಷ ಸುಬ್ರಹ್ಮಣ್ಯ ಹಾಗು ಪ್ರಧಾನ ಕಾರ್ಯದರ್ಶಿ ನಾಗೇಶ್ ಸೋಸ್ಲೆ ತಂಡದಿಂದ ಸ್ಪರ್ಧಿಸಿದ್ದ ಶಿಕ್ಷಕರು ಭರ್ಜರಿ ಜಯಗಳಿಸಿದ್ದಾರೆ.

ಪಟ್ಟಣದ ಶಿಕ್ಷಕರ ಭವನದಲ್ಲಿ ಕಾರ್ಯಕಾರಿ ಸಮಿತಿ ಆಯ್ಕೆಗಾಗಿ ಬೆಳಗ್ಗೆಯಿಂದ ಸಂಜೆವರೆಗೂ ಮತದಾನ ನಡೆಯಿತು. ಮತದಾನ ಪ್ರಕ್ರಿಯೆ ನಂತರ ಮತ ಎಣಿಕೆ ಕಾರ್ಯ ನಡೆದು ಎಂಟು ಮಂದಿ ಪುರುಷರು ಹಾಗೂ ನಾಲ್ವರು ಮಹಿಳಾ ಶಿಕ್ಷಕರು ಭರ್ಜರಿ ಜಯಗಳಿಸಿದರು. ಈ ಮೂಲಕ ಶಿವಶಂಕರ ಮೂರ್ತಿ, ಸುಬ್ರಹ್ಮಣ್ಯ ಹಾಗೂ ನಾಗೇಶ್ ಸೋಸ್ಲೆ ತಂಡದಿಂದ ಸ್ಪರ್ಧಿಸಿದ್ದ ಎಲ್ಲ 12 ಮಂದಿ ಅಭ್ಯರ್ಥಿಗಳು ಗೆಲುವು ಸಾಧಿಸಿ ಕ್ಲೀನ್ ಸ್ವೀಪ್ ಮಾಡಿದರು.

ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಕಾರ್ಯಕಾರಿ ಸಮಿತಿಗೆ ಕಳೆದ ಏ.19ರಂದೇ ಚುನಾವಣೆ ನಡೆಯಬೇಕಿತ್ತಾದರೂ ಮತದಾನ ಪಟ್ಟಿಯಿಂದ ಕೈಬಿಟ್ಟು ಚುನಾವಣೆ ನಡೆಸಲಾಗುತ್ತಿದೆ ಎಂಬ ಕೆಲ ಶಿಕ್ಷಕರ ಆರೋಪದ ಹಿನ್ನೆಲೆಯಲ್ಲಿ ಚುನಾವಣೆಗೆ ತಡೆಯಾಜ್ಞೆ ನೀಡಲಾಗಿತ್ತು.

ಶುಕ್ರವಾರ ನಡೆದ ಚುನಾವಣೆಯಲ್ಲಿ ಕಾರ್ಯ ಕಾರಿ ಸಮಿತಿಗೆ ಆಯ್ಕೆ ಬಯಸಿ ಸ್ಪರ್ಧೆಗಿಳಿದಿದ್ದ ಎ.ಗಜೇಂದ್ರ(341),ಸಿ.ಮಹದೇವಸ್ವಾಮಿ(304), ಸಿ.ಕಿಕ್ಕೇರಿಶೆಟ್ಟಿ (288) ಎಂ.ಮಲ್ಲಣ್ಣ(308), ಎನ್.ರೇವಣ್ಣ (357), ಜಿ.ಸಿದ್ದಮಲ್ಲಪ್ಪ(297), ಸಿ.ಸುರೇಶ್ (286), ಸುಬ್ರಹ್ಮಣ್ಯ (293) ಹಾಗು ಮಹಿಳಾ ವಿಭಾಗದಿಂದ ಅಕ್ಕ ಮಹಾದೇವಿ (326), ಕೆ.ಆರ್.ಚಂದ್ರಕಲಾ(319), ಎಸ್.ನಂದಿನಿ (322) ಹಾಗು ಎಂ.ವೈ.ಜೀನತ್(298) ಮತ ಪಡೆದು ಗೆಲುವು ಸಾಧಿಸಿದರೆ, ಎನ್.ಮಹದೇವಸ್ವಾಮಿ(223) ಬಿ.ಕೇಶವ (187) ಟಿ.ಎನ್.ನಾಗೇಂದ್ರ(144) ಹಾಗು ಎಸ್.ಸಲೀನ 218 ಮತ ಪಡೆದು ಪರಾಭವಗೊಂಡರು. ಚುನಾವಣಾಧಿಕಾರಿಯಾಗಿ ಎಂ.ಎಸ್.ಪ್ರಕಾಶ್, ಸಹಾಯಕ ಚುನಾವಣಾಧಿಕಾರಿಯಾಗಿ ಕೆ.ಪಿ.ಮಹದೇವಸ್ವಾಮಿ ಕರ್ತವ್ಯ ನಿರ್ವಹಿಸಿದರು.

ಈ ವೇಳೆ ವಿಜೇತ ಅಭ್ಯರ್ಥಿಗಳನ್ನು ರಾಜ್ಯ ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಎಂ.ವಿ.ಶಿವಶಂಕರಮೂರ್ತಿ ಅಭಿನಂದಿಸಿದರು. ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಮಾಜಿ ಅಧ್ಯಕ್ಷ ಟಿ.ಎಸ್.ಸುಬ್ಬಣ್ಣ, ಗೌರವಾಧ್ಯಕ್ಷ ಡಿ.ಜಿ.ನಾರಾಯಣ, ರಾಜ್ಯ ಪರಿಷತ್ ಸದಸ್ಯ ನಾರಾಯಣಮೂರ್ತಿ, ಖಜಾಂಚಿ ಸಿದ್ದರಾಜು, ಟಿಒಟಿ ನಾಗರಾಜು, ಕನ್ನಡ ಪುಟ್ಟಸ್ವಾಮಿ, ಸುಂದರರಾಜ್,ವೆಂಕಟೇಶ್, ಎನ್‌ಪಿಎಸ್ ಅಧ್ಯಕ್ಷ ಶ್ರೀಧರ್, ಕುಪ್ಯ ಪುಟ್ಟಸ್ವಾಮಿ, ರಮೇಶ್, ನಾಗರಾಜು, ಪ್ರಸನ್ನ, ಪ್ರಕಾಶ್, ನಾಗೇಂದ್ರ, ದೇವರಾಜು, ಬಿ.ಎಸ್.ಮಹೇಶ್, ಕುಮಾರ ಸ್ವಾಮಿ, ಮಹೇಶ್, ಮಂಜುನಾಥ್, ರಮೇಶ್, ಪರಮೇಶ್, ಪುಟ್ಟಸ್ವಾಮಿ, ಮಹದೇವಯ್ಯ ಹಾಜರಿದ್ದರು.

ಭಾರೀ ಮಳೆಗೆ ನೆಲಕಚ್ಚಿದ ಬಾಳೆ



ಹಂಪಾಪುರ: ಹೆಚ್.ಡಿ.ಕೋಟೆ ತಾಲೂಕಿನ ಹಂಪಾಪುರ ಹೋಬಳಿಯ ಕರಿಗಳ ಗ್ರಾಮದಲ್ಲಿ ಶುಕ್ರವಾರ ಸಂಜೆ ಸುರಿದ ಬಿರುಗಾಳಿ ಮಳೆಯ ಅಬ್ಬರಕ್ಕೆ ಕೃಷಿ ಹಾನಿ ಸಂಭವಿಸಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಹಂಪಾಪುರ ಹೋಬಳಿಯ ಕರಿಗಳ ಗ್ರಾಮದ ಸವಿತ, ಹೆಚ್.ಬಿ.ರಾಜೇಶ್ ಎಂಬುವವರಿಗೆ ಸೇರಿದ ಎರಡು ಎಕ್ಕರೆ ಬಾಳೆ ತೋಟ ಸರ್ವನಾಶವಾಗಿವೆ. ಫಸಲಿಗೆ ಬಂದಿದ್ದ ಅಪಾರ ಪ್ರಮಾಣದ ಬೆಳೆ ಕಳೆದುಕೊಂಡು ರೈತರು ಕಂಗಾಲಾಗಿದ್ದಾರೆ. ಇನ್ನೊಂದು ತಿಂಗಳಿನಲ್ಲಿ ಬಾಳೆಗೊನೆ ಕಟಾವು ಮಾಡಿ ಮಾರಾಟ ಮಾಡಬೇಕಿತ್ತು. ಆದರೆ ಭಾರೀ ಮಳೆ, ಗಾಳಿಗೆ ಬಾಳೆಗೊನೆ ಸಹಿತ ಗಿಡ ಮುರಿದು ಬಿದ್ದಿವೆ. ಇದರಿಂದಾಗಿ 7ರಿಂದ 8 ಲಕ್ಷ ನಷ್ಟವಾಗಿದೆ.

ಹಂಪಾಪುರ ಹೋಬಳಿಯ ಹಲವಾರು ಗ್ರಾಮದಲ್ಲಿ ಮಳೆಸಹಿತ ಬಿರುಗಾಳಿಗೆ ರೈತರು ಬೆಳೆದಿದ್ದ ಬಾಳೆ, ಮೆಕ್ಕೆಜೋಳ, ಟೊಮೊಟೊ, ಸೌತೆಕಾಯಿ, ಚೊಟ್ಟು ಇನ್ನು ಹಲವಾರು ಬೆಳೆಗಳು ನೆಲಕಚ್ಚಿದ್ದು ರೈತರಿಗೆ ದೊಡ್ಡ ಪ್ರಮಾಣದಲ್ಲಿ ನಷ್ಟವಾಗಿದೆ.

ಸಂಬಂಧ ಪಟ್ಟ ಅಧಿಕಾರಿಗಳು ಪರಿಶೀಲನೆ ನಡೆಸಿ ಎಕರೆಗೆ 2 ರಿಂದ 3 ಲಕ್ಷ ಪರಿಹಾರ ನೀಡಬೇಕು ಎಂದು ಹೆಚ್.ಬಿ.ರಾಜೇಶ್ ಒತ್ತಾಯಿಸಿದ್ದಾರೆ.

ಮೇ 5ರಂದು ಜೆಡಿಎಸ್ ನಾಯಕ ಕೃಷ್ಣನಾಯಕರ ಹುಟ್ಟು ಹಬ್ಬ

ಹೆಚ್.ಡಿ.ಕೋಟೆ, ಮೇ 2– ಸಮಾಜ ಸೇವಕ, ಜೆಡಿಎಸ್ ಮುಖಂಡ ಕೆ.ಎಂ.ಕೃಷ್ಣನಾಯಕ ಅವರ ಹುಟ್ಟುಹಬ್ಬ ಮೇ 5ರಂದು ಸರಳವಾಗಿ ಆಚರಿಸಲಾಗುವುದು ಎಂದು ಸರಗೂರು ತಾಲೂಕು ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ ತಿಳಿಸಿದರು.

ತಾಲೂಕು ಪತ್ರಕರ್ತರ ಕಚೇರಿಯಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕ್ಷೇತ್ರದಲ್ಲಿ ಕೃಷ್ಣನಾಯಕ ಅವರು ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡು, ವಿದ್ಯಾರ್ಥಿಗಳಿಗೆ, ಕೂಲಿಕಾರ್ಮಿಕರಿಗೆ, ಬಡವರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಕಡಿಮೆ ದರದಲ್ಲಿ ಅಪ್ಪಾಜಿ ಕ್ಯಾಂಟೀನ್ ತೆರೆದು ಉಪಹಾರ ಮತ್ತು ಮಧ್ಯಾಹ್ನದ ಊಟವನ್ನು ನೀಡುತ್ತಿದ್ದಾರೆ. ಅದಲ್ಲದೆ ಕೋವಿಡ್ ಸಮಯದಲ್ಲಿ ಆಂಬುಲೆನ್ಸ್ ಸೇವೆ ಒದಗಿಸಿ ಔಷಧಿಗಳನ್ನು ಉಚಿತವಾಗಿ ನೀಡುವುದು ಸೇರಿದಂತೆ ಇನ್ನೂ ಹಲವಾರು ಸಮಾಜ ಸೇವೆಗಳಲ್ಲಿ ತೊಡಗಿಕೊಂಡು ಸುಮಾರು ಹತ್ತು ವರ್ಷಗಳಿಂದ ಕ್ಷೇತ್ರದಲ್ಲಿ ಸಮಾಜ ಸೇವೆ ಮಾಡಿಕೊಂಡು ಬರುತ್ತಿದ್ದಾರೆ.



ಸುದ್ದಿಗೋಷ್ಠಿಯಲ್ಲಿ ಮಾತನಾಡುತ್ತಿರುವ ಜೆಡಿಎಸ್ ಅಧ್ಯಕ್ಷ ಗೋಪಾಲಸ್ವಾಮಿ.

ಅವರು ಹುಟ್ಟುಹಬ್ಬವನ್ನು ಇದುವರೆಗೂ ಆಚರಿಸಿಕೊಂಡಿರಲಿಲ್ಲ. ಆದರೆ, ಅವರ ಸೇವೆಯನ್ನು ಮೆಚ್ಚಿ, ತಾಲೂಕು ಜೆಡಿಎಸ್, ಅಭಿಮಾನಿಗಳು, ಕಾರ್ಯಕರ್ತರು ಮತ್ತು ಮುಖಂಡರು ಸೇರಿ ಹುಟ್ಟುಹಬ್ಬವನ್ನು ಆಚರಿಸಲು ತೀರ್ಮಾನಿಸಿದ್ದಾರೆ ಎಂದರು.

ಅಂದು ಬೆಳಗ್ಗೆ, ತಾಲೂಕಿನ ಶಕ್ತಿ ದೇವತೆ ಚಿಕ್ಕದೇವಮ್ಮನ ಬೆಟ್ಟದಲ್ಲಿ, ತಾಯಿಗೆ ವಿಶೇಷ ಪೂಜೆ ಸಲ್ಲಿಸಿ, ಸಿಹಿ ಹಂಚಿ ನಂತರ ಸರಗೂರು ಪಟ್ಟಣದ ಮಹಾವೀರ ವೃತ್ತದಲ್ಲಿ ಅಭಿಮಾನಿಗಳು ಕೇಕ್ ಕತ್ತರಿಸಿ ಸಿಹಿ ಹಂಚಿ ಸಂಭ್ರಮಿಸಲಿದ್ದಾರೆ. ನಂತರ ಹ್ಯಾಂಡ್ ಪೋಸ್ಟ್ ಸರ್ಕಲ್‌ನಲ್ಲಿ ಒಕ್ಕಲಿಗರ ಸಂಘದ ತಾಲೂಕು ಅಧ್ಯಕ್ಷ ಹರೀಶ್‌ಗೌಡ ಅವರ ನೇತೃತ್ವದಲ್ಲಿ ವಿದ್ಯಾಗಣಪತಿಗೆ ವಿಶೇಷ ವಿಶೇಷ ಪೂಜೆ ಸಲ್ಲಿಸಿ ಸಾರ್ವಜನಿಕರಿಗೆ ಲಾಡು ವಿತರಣೆ ಮಾಡಲಾಗುವುದು ಎಂದರು. ನಂತರ ಚಿತ್ತದಾಮದಲ್ಲಿರುವ ನಿವಾಸಿಗಳಿಗೆ ಊಟದ ವ್ಯವಸ್ಥೆ ಹಾಗೂ ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ, ಪಟ್ಟಣದಲ್ಲಿರುವ ಆದಿ ಚುಂಚನಗಿರಿ ಸಮುದಾಯ ಭವನದಲ್ಲಿ, ಕೇಕ್ ಕತ್ತರಿಸುವುದರ ಮೂಲಕ ಆಚರಿಸಿ ನಂತರ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಹೆಚ್.ಡಿ.ಕೋಟೆ ಜೆಡಿಎಸ್ ತಾಲೂಕು ಅಧ್ಯಕ್ಷ ಜೆಡಿಎಸ್ ಟೌನ್ ಅಧ್ಯಕ್ಷ ಮಹೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಹೊ.ಕೆ.ಮಹೇಂದ್ರ ಕಾರ್ಯದರ್ಶಿ ಶಿವಕುಮಾರ್, ಮುಖಂಡರುಗಳಾದ ಸೊಗಳ್ಳಿ ಚಿಕ್ಕತಿಮ್ಮ ನಾಯಕ, ದೇವನಾಯಕ, ಕೆ.ವಿ.ಮಾದೇವಸ್ವಾಮಿ, ಎಚ್. ಎನ್. ನಾಗರಾಜ ಶೆಟ್ಟಿ, ಎಚ್.ಎ.ರಮೇಶ್ ಇದ್ದರು.

ಈರೇಗೌಡ ನಿಧನ

ಕೆ.ಆರ್.ನಗರ: ತಾಲೂಕಿನ ಸಿದ್ದನಕೊಪ್ಪಲು ಗ್ರಾಮದ ಚಿಕ್ಕ ಈರೇಗೌಡ (78) ಶನಿವಾರ ಸಂಜೆ ನಿಧನರಾದರು. ಭಾನುವಾರ ಮಧ್ಯಾಹ್ನ 12ಕ್ಕೆ ಸ್ವಗ್ರಾಮದಲ್ಲಿ ಅಂತ್ಯ ಸಂಸ್ಕಾರ ನೆರವೇರಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ. ಮೃತರು ಪತ್ನಿ, ಗ್ರಾಪಂ ಮಾಜಿ ಸದಸ್ಯ ಮಹದೇವ್ ಸೇರಿ, ಇಬ್ಬರು ಪುತ್ರರು ಹಾಗೂ ಓರ್ವ ಪುತ್ರಿ ಮತ್ತು ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ.



ಮೂರನೇ ಪುಟದಿಂದ

ಅಭಿವೃದ್ಧಿ ಕಡೆ ಗಮನ ಕೊಡಿ

ಇದನ್ನು ಮಾಡದೆ, ಓಲೈಕೆ ರಾಜಕಾರಣ ಮಾಡಿಕೊಂಡು ಸರ್ಕಾರಕ್ಕೆ ಕೆಟ್ಟ ಹೆಸರು ತರುವ ಕೆಲಸ ನಡೆದಿದೆ. ನಗರದಲ್ಲಿ ಬಿದ್ದ ಒಂದೇ ಮಳೆಗೆ 10 ಜನರ ಪ್ರಾಣ ಹೋಗಿದೆ. ಅಲ್ಲದೆ, ಸಾರ್ವಜನಿಕರ ಆಸ್ತಿ–ಪಾಸ್ತಿ ಹಾನಿಯಾಗಿರುವುದಕ್ಕೆ ಅಧಿಕಾರಿಗಳ ನಿರ್ಲಕ್ಷ್ಯ ಧೋರಣೆ ಕಾರಣವಲ್ಲವೆ ಎಂದು ಪ್ರಶ್ನಿಸಿದರು. ಸರ್ಕಾರದ ಕಾರ್ಯಕ್ರಮಗಳ ಅನುಷ್ಠಾನ ಜಾರಿ ಜೊತೆಗೆ ಜನರ ಸಂಕಷ್ಟಗಳಿಗೆ ಸ್ಪಂದಿಸುವುದು ನಿಮ್ಮ ಕರ್ತವ್ಯ, ಅದನ್ನು ನೀವು ಮಾಡುತ್ತಿದ್ದೀರಾ. ನಿಮಗೆ ವಹಿಸಿರುವ ಇಲಾಖೆಗಳಲ್ಲಿ ಸಭೆಗಳನ್ನು ನಡೆಸಿ ಕೆಳ ಹಂತದ ಅಧಿಕಾರಿಗಳ ಮೇಲೆ ಹಿಡಿತ ಹೊಂದಿದರೆ, ಸಮಸ್ಯೆಗಳೇ ಎದುರಾಗುವುದಿಲ್ಲ. ನಿಮಗೆ ವಹಿಸಿರುವ ಜಿಲ್ಲೆಗಳಲ್ಲಿ ಪ್ರವಾಸವನ್ನೂ ಮಾಡುವುದಿಲ್ಲ. ಕೊಠಡಿಯಲ್ಲೇ ಕುಳಿತು ಆಡಳಿತ ನಡೆಸಿದರೆ, ಜನರ ಸಮಸ್ಯೆಗಳು ನಿಮಗೆ ತಿಳಿಯುವುದಾದರೂ ಹೇಗೆ ಎಂದು ಪ್ರಶ್ನಿಸಿದರು.

ಜನಪರವಾಗಿ ಇರಬೇಕೇ ಹೊರತು ಜನ ವಿರೋಧಿ ಆಗಬಾರದು. ರಾಜಕಾರಣಿಗಳಿಗಿಂತ ಅಧಿಕಾರಿಗಳಿಗೆ ಹೆಚ್ಚು ಕೆಲಸ ಇರುತ್ತದೆ. ನಾವು ಬರುತ್ತೇವೆ. ಹೋಗುತ್ತೇವೆ. ಆದರೆ, ನೀವು 30 ರಿಂದ 35 ವರ್ಷ ಖಾಯಂ ಆಗಿರುತ್ತೀರಿ. ನೀವು ನೀಡುವಂತಹ ಅಭಿಪ್ರಾಯಗಳು ಸಂವಿಧಾನರೀತ್ಯ ಇರಬೇಕು. ಸತ್ಯ ಹಾಗೂ ನಿರ್ಭೀತಿಯಿಂದ ಕೂಡಿರಬೇಕು. ಇದನ್ನು ಪಾಲಿಸುತ್ತಿದ್ದೀರಾ ಎಂದರು. ದೇಶದ ಮೊದಲ ಗೃಹ ಸಚಿವ ಸರದಾರ್ ವಲ್ಲಭ ಭಾಯ್ ಪಟೇಲ್ ಅವರು, ಕಾರ್ಯದರ್ಶಿಗಳು ನಿರ್ಭಯ ಹಾಗೂ ಸ್ವತಂತ್ರವಾಗಿ ತಮ್ಮ ಅಭಿಪ್ರಾಯಗಳನ್ನು ಮಂತ್ರಿಗಳಿಗೆ ತಿಳಿಸಬೇಕು.

ಸಚಿವರಿಗೆ ಸತ್ಯ ಹೇಳಿ!: ಮಂತ್ರಿ ಅಸಮಾಧಾನಗೊಳ್ಳುವರೆಂಬ ಕಾರಣಕ್ಕೆ ಸತ್ಯ ಹೇಳುವುದರಿಂದ ಹಿಂಜರಿಯಬಾರದು. ನಿಮ್ಮ ಅಭಿಪ್ರಾಯಗಳನ್ನು ಮುಕ್ತವಾಗಿ ತಿಳಿಸಿ, ಯಾರೇ, ಎಷ್ಟೇ ಒತ್ತಡ ಹೇರಿದರೂ ಕಾನೂನಿನ ವಿರುದ್ಧ ಕೆಲಸ ಮಾಡಬೇಡಿ ಎಂದಿದ್ದರು. ಅಧಿಕಾರಿಗಳು ಎಂದೂ ಸರ್ಕಾರಕ್ಕೆ ತಪ್ಪು ಮಾಹಿತಿ ನೀಡಬಾರದು. ತಪ್ಪು ದಾರಿಗೆ ಎಳೆಯಬಾರದು. ನಿಮ್ಮ ನಿಲುವು ಮತ್ತು ತೀರ್ಮಾನ ಜನಪರವಾಗಿರಬೇಕು ಎಂದರು. ಡಾ.ಬಾಬಾ ಸಾಹೇಬ್ ಅಂಬೇಡ್ಕರ್ 1949 ನವೆಂಬರ್ 25ರಂದು ಮಾಡಿದ ಭಾಷಣದಲ್ಲಿ, ರಾಜಕೀಯ ಪ್ರಜಾಪ್ರಭುತ್ವ ಸಾಮಾಜಿಕ ಹಾಗೂ ಆರ್ಥಿಕ ಸಮಾನತೆಯ ತಳಹದಿಯ ಮೇಲೆ ನಿಂತಿದೆ ಎಂದಿದ್ದರು. ಅಂದರೆ, ದೇಶದ ಪ್ರತಿಯೊಬ್ಬರಿಗೂ ಆರ್ಥಿಕ ಹಾಗೂ ಸಾಮಾಜಿಕ ಶಕ್ತಿ ತುಂಬುವ ಕಾರ್ಯ ಮಾಡಿದರೆ ಮಾತ್ರ ನಿಜವಾದ ರಾಜಕೀಯ ಸ್ವಾತಂತ್ರ್ಯ ಸಾಕಾರಗೊಳ್ಳಲು ಸಾಧ್ಯ ಎಂದರು.


15295 ಅರ್ಜಿ ವಿಲೇವಾರಿ

ಸೇರಿಸಿ ಪ್ಯಾಕೇಜ್ ಮೂಲಕ ಮೀಸಲಾತಿ ತಪ್ಪಿಸಲು ಅವಕಾಶ ನೀಡಬಾರದು. ಎಲ್ಲಾ ಕಾಮಗಾರಿಗಳನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಬೇಕು. ಕಾಮಗಾರಿ ವಿಳಂಬದಿಂದ ನಿರ್ಮಾಣ ವೆಚ್ಚ ಹೆಚ್ಚಳಕ್ಕೆ ಅವಕಾಶ ಆಗುತ್ತದೆ. ಈ ವರ್ಷ ಮಳೆ ಶೇ.5ರಷ್ಟು ಕಡಿಮೆಯಾಗುವ ಸಾಧ್ಯತೆಯಿದೆ. ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಮ್ಮ ವ್ಯಾಪ್ತಿಯ ಜಿಲ್ಲೆಯಲ್ಲಿ ಕುಡಿಯುವ ನೀರಿನ ಪರಿಸ್ಥಿತಿ ಬಗ್ಗೆ ನಿರಂತರ ನಿಗಾ ವಹಿಸಬೇಕು. ಈ ಕುರಿತು ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಜೊತೆ ಸಭೆ ನಡೆಸಬೇಕು, ತಮ್ಮ ಉಸ್ತುವಾರಿಯ ಜಿಲ್ಲೆಯ ಸಮಸ್ಯೆಗಳನ್ನು ಬಗೆಹರಿಸುವುದು ಆಯಾ ಕಾರ್ಯದರ್ಶಿಗಳ ಜವಾಬ್ದಾರಿಯಾಗಿದೆ, ಯಾವುದೇ ಕಾರಣಕ್ಕೂ ಕುಡಿಯುವ ನೀರಿಗೆ ತೊಂದರೆ ಆಗಬಾರದು ಎಂದರು.

ಮೂವರ ದುರ್ಮರಣ

ಸೇಫ್ಟಿ ಜಾಕೆಟ್ ಧರಿಸಿದ್ದರು ಎನ್ನಲಾಗಿದೆ. ಬೋಟ್ ನೀರಿನಲ್ಲಿ ಮುಳುಗುತ್ತಿದ್ದಂತೆಯೇ ತಕ್ಷಣ ಮತ್ತೊಂದು ಬೋಟ್‌ನಲ್ಲಿ ಕಾರ್ಯಾಚರಣೆ ನಡೆಸಿ ಶ್ವೇತಾ, ಪತಿ ಜಸ್ವಿನ್ ಹಾಗೂ ಪುತ್ರ ಅಯ್ಯನ್‌ರನ್ನು ರಕ್ಷಿಸಿದರು. ಮೃತ ವಿ.ಮಂಜುನಾಥ್, ಪತ್ನಿ ಜಸ್ವಿರನ್ನು ರಕ್ಷಿಸುವ ಹೊತ್ತಿಗೆ ತೀವ್ರ ಅಸ್ವಸ್ಥರಾಗಿದ್ದರು. ಕೂಡಲೇ ಇಬ್ಬರನ್ನು ಆಸ್ಪತ್ರೆಗೆ ಕರೆದೊಯ್ಯುವ ವೇಳೆ ಮಾರ್ಗಮಧ್ಯೆ ಮೃತಪಟ್ಟಿದ್ದಾರೆ. ಬಳಿಕ ಇಬ್ಬರ ಮೃತದೇಹವನ್ನು ಸಾರ್ವಜನಿಕ ಆಸ್ಪತ್ರೆಯಲ್ಲಿ ಶವಪರೀಕ್ಷೆ ನಡೆಸಿ ವಾರಸುದಾರರಿಗೆ ಒಪ್ಪಿಸಿದರು. ಮೃತರ ಮಗಳು ಶ್ವೇತಾ ನೀಡಿದ ದೂರಿನ ಮೇರೆಗೆ ಕೆ.ಆರ್.ಎಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೀನಿಗೆ ಮೇವು ಹಾಕಲು ಹೋಗಿ ಜಲಸಮಾಧಿ: ಶುಕ್ರವಾರ ಸಂಜೆ ಬೀಸಿದ ಬಿರುಗಾಳಿ ಸಹಿತ ಮಳೆಗೆ ತಾಲೂಕಿನ ಗಿರಿಯಾರಹಳ್ಳಿ ಬಳಿಯ ಕೆಆರ್‌ಎಸ್ ಹಿನ್ನೀರು ಪ್ರದೇಶದಲ್ಲಿ ಮೀನಿಗೆ ಮೇವು ಹಾಕಲು ಹೋಗಿದ್ದ ಯುವಕ ದೋಣಿ ಮುಗುಚಿ ಮೃತಪಟ್ಟಿದ್ದು, ಮೃತ ದೇಹಕ್ಕಾಗಿ ಶೋಧಕಾರ್ಯ ನಡೆಯುತ್ತಿದೆ. ಗಿರಿಯಾರಹಳ್ಳಿಯ ಈಶ್ವರ ಎಂಬುವರ ಪುತ್ರ ಮಧು(25) ಮೃತ ಯುವಕ. ಶುಕ್ರವಾರ ಸಂಜೆ ಕೆಆರ್‌ಎಸ್ ಹಿನ್ನೀರಿನಲ್ಲಿ ಮೀನು ಹಿಡಿಯಲು ಬಲೆ ಬೀಸಿದ್ದ ಮಧು, ಇದೇ ವೇಳೆ ಮೀನಿಗೆ ಮೇವು ಹಾಕಲು ದೋಣಿಯಲ್ಲಿ ನದಿಗೆ ಇಳಿದಿದ್ದಾನೆ. ಆಕಸ್ಮಿಕವಾಗಿ ಬೀಸಿದ ಬಿರುಗಾಳಿ ಸಹಿತ ಮಳೆಯಿಂದ ದೋಣಿ ಮುಗುಚಿ ನದಿಯಲ್ಲಿ ಮುಳುಗಿದ್ದಾನೆ. ಶುಕ್ರವಾರ ರಾತ್ರಿಯಿಂದಲೂ ಮೃತ ದೇಹಕ್ಕಾಗಿ ಶೋಧ ಕಾರ್ಯಾಚರಣೆ ನಡೆಯುತ್ತಿದೆ. ಘಟನೆ ಸಂಬಂಧ ಕೆ.ಆರ್.ಎಸ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.



ಮೃತಪಟ್ಟ ಮಧು

ಶಾಸಕ ಸ್ಥಾನ ಅನರ್ಹ

ದಿನಗಳಲ್ಲಿ ಈ ಕ್ರಮ ಕೈಗೊಳ್ಳಲಾಗಿದೆ. ಈ ಆದೇಶದೊಂದಿಗೆ ಧಾರವಾಡ ಗ್ರಾಮೀಣ ವಿಧಾನ ಸಭಾ ಕ್ಷೇತ್ರವು ಅಧಿಕೃತವಾಗಿ ತೆರವಾಗಿದೆ.

ಭಾರತೀಯ ಸಂವಿಧಾನದ ವಿಧಿ 191(1)(ಇ) ಮತ್ತು ಜನಪ್ರತಿನಿಧಿ ಕಾಯ್ದೆ 1951ರ ಸೆಕ್ಷನ್ 8ರ ಅಡಿಯಲ್ಲಿ ಈ ಅನರ್ಹತೆ ಆದೇಶವನ್ನು ಹೊರಡಿಸಲಾಗಿದೆ. ನಿಯಮಗಳ ಪ್ರಕಾರ, ಯಾವುದೇ ಜನಪ್ರತಿನಿಧಿಗೆ ಎರಡು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಜೈಲು ಶಿಕ್ಷೆಯಾದಲ್ಲಿ ಅವರು ತಕ್ಷಣವೇ ಶಾಸಕ ಸ್ಥಾನಕ್ಕೆ ಅನರ್ಹರಾಗುತ್ತಾರೆ.

ಯೋಗೇಶ್ ಗೌಡ ಹತ್ಯೆ ಪ್ರಕರಣದಲ್ಲಿ ವಿನಯ್ ಕುಲಕರ್ಣಿ 15ನೇ ಆರೋಪಿಯಾಗಿದ್ದರು. ಇವರೂ ಸೇರಿದಂತೆ 16 ಮಂದಿ ತಪ್ಪಿತಸ್ಥರು ಎಂದು ಏಪ್ರಿಲ್ 16 ರಂದು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ತೀರ್ಪು ನೀಡಿತ್ತು ಏ.17ರಂದು 16 ಮಂದಿಗೆ ಜೀವಾವಧಿ ಶಿಕ್ಷೆ ಘೋಷಣೆ ಮಾಡಿತ್ತು. ಏತನ್ಮಧ್ಯೆ, ವಿನಯ್ ಕುಲಕರ್ಣಿ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದಾರೆ. ಶಿಕ್ಷೆಗೆ ತಡೆಯಾಜ್ಞೆ ನೀಡಬೇಕು ಮತ್ತು ಜಾಮೀನು ನೀಡಬೇಕು ಎಂದು ಅವರು ಮನವಿ ಮಾಡಿದ್ದಾರೆ.

ರಾಜೇಗೌಡರಿಗೆ ಗೆಲುವು

ನಡೆಯಿತು. ಶಾಸಕ ಟಿ.ಡಿ.ರಾಜೇಗೌಡ ಪರ ಕಾರ್ಯಕರ್ತರು ಘೋಷಣೆ ಕೂಗಿ, ಹೂವಿನ ಮಳೆ ಸುರಿಸಿದ್ದು, ಹರ್ಷ ವ್ಯಕ್ತಪಡಿಸಿದ್ದಾರೆ.

ಹೈಕೋರ್ಟ್ ಆದೇಶದ ಮೇರೆಗೆ ಇಂದು ಚಿಕ್ಕಮಗಳೂರು ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಶೃಂಗೇರಿ ವಿಧಾನಸಭಾ ಕ್ಷೇತ್ರದ ಅಂಚೆ ಮತಗಳ ಮರು ಮತಎಣಿಕೆ ಮಾಡಲಾಗಿದೆ. ಹಾಲಿ ಮತ್ತು ಮಾಜಿ ಶಾಸಕರ ನಡುವೆ ಮರು ಎಣಿಕೆ ಫೈಟ್ ಜೋರಾಗಿತ್ತು. ಸಾಕಷ್ಟು ಕುತೂಹಲದ ಮಧ್ಯೆ ಇದೀಗ ಮರು ಮತ ಎಣಿಕೆಯಲ್ಲೂ ಕಾಂಗ್ರೆಸ್ ಶಾಸಕ ಟಿ.ಡಿ.ರಾಜೇಗೌಡ ಗೆಲುವು ಸಾಧಿಸಿದ್ದಾರೆ.

ಶಾಸಕ ಟಿ.ಡಿ.ರಾಜೇಗೌಡ ಗೆದ್ದಿದ್ದಾರೆ ಎಂದು ಅಭಿಮಾನಿಗಳ ಸಂಭ್ರಮ: ಇನ್ನು ಅತ್ತ ಶಾಸಕ ಟಿ.ಡಿ.ರಾಜೇಗೌಡ ಗೆಲುವು ಸಾಧಿಸುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಅವರ ಅಭಿಮಾನಿಗಳು ಸಂಭ್ರಮಿಸಿದರು. 267 ಮತಗಳು ಬಹುತೇಕ ತಿರಸ್ಕೃತ ಬೆನ್ನಲ್ಲೇ ರಾಜೇಗೌಡ ಗೆದ್ದರು ಎಂದು ಕಾರ್ಯಕರ್ತರು ಘೋಷಣೆ ಕೂಗಿ ಸಂಭ್ರಮಿಸಿದರು.

ಭಾರತಕ್ಕೆ ಮುಂಗಾರು ಪ್ರವೇಶ

ದಿನಗಳು ಮುಂದುವರಿಯುವ ಸಾಧ್ಯತೆಯಿದೆ ಎಂದು ಐಎಂಡಿ ತನ್ನ ಮಾಸಿಕ ಮುನ್ಸೂಚನೆಯಲ್ಲಿ ತಿಳಿಸಿದೆ. ಮೇ ತಿಂಗಳಲ್ಲಿ ದೇಶಾದ್ಯಂತ ಸರಾಸರಿ ಮಳೆ ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ಇಲಾಖೆ ಗಮನಿಸಿದೆ. ಆದರೆ ಪೂರ್ವ, ಈಶಾನ್ಯ ಮತ್ತು ಪೂರ್ವ ಮಧ್ಯ ಭಾರತದ ಕೆಲವು ಭಾಗಗಳು ಸಾಮಾನ್ಯಕ್ಕಿಂತ ಕಡಿಮೆ ಮಳೆಯಾಗಬಹುದು. ಮೇ ನಲ್ಲಿ ದೇಶದ ಹಲವು ಭಾಗಗಳಲ್ಲಿ ಕನಿಷ್ಠ ತಾಪಮಾನವು ಸಾಮಾನ್ಯಕ್ಕಿಂತ ಹೆಚ್ಚಾಗಿರುತ್ತದೆ ಎಂದು ಹವಾಮಾನ ಶಾಸ್ತ್ರದ ಮಹಾನಿರ್ದೇಶಕ ಮೃತ್ಯುಂಜಯ್ ಮೊಹಾಪಾತ್ರ ಹೇಳಿದ್ದಾರೆ. ಇದೇ ಸಮಯದಲ್ಲಿ, ವಾಯುವ್ಯ ಭಾರತದ ಹಲವಾರು ಪ್ರದೇಶಗಳು, ಮಧ್ಯ ಭಾರತದ ಕೆಲವು ಭಾಗಗಳು ಮತ್ತು ಭಾರತದ ಪರ್ಯಾಯ ದ್ವೀಪದ ಪಕ್ಕದ ಪ್ರದೇಶಗಳು ಮತ್ತು ಈಶಾನ್ಯ ಭಾರತದ ದಕ್ಷಿಣ ಭಾಗಗಳಲ್ಲಿ ಸಾಮಾನ್ಯ ಅಥವಾ ಸಾಮಾನ್ಯಕ್ಕಿಂತ ಕಡಿಮೆ ತಾಪಮಾನವನ್ನ ಅನುಭವಿಸುವ ಸಾಧ್ಯತೆಯಿದೆ. ಮಾನ್ಸೂನ್ ಆರಂಭದ ಬಗ್ಗೆ ಮಾತನಾಡಿದ ಮಹಾಪಾತ್ರ, ನೈಋತ್ಯ ಮಾನ್ಸೂನ್ ಮೇ 14 ಮತ್ತು 16ರ ನಡುವೆ ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳನ್ನು ತಲುಪುವ ನಿರೀಕ್ಷೆಯಿದೆ ಎಂದು ಹೇಳಿದರು.



ಉಪಲೋಕಾಯುಕ್ತ ನ್ಯಾ.ವೀರಪ್ಪ ಸೂಚನೆ

ಇತ್ತೀಚಿಗೆ ಸೂಚಿಸಿದ್ದಾರೆ. ಅಲ್ಲದೆ, ಈ ಎಲ್ಲಾ ಅಧಿಕಾರಿಗಳಿಗೂ ಈ ಆದೇಶದ ಪ್ರತಿ ಕಳುಹಿಸಿ ಪೂರಕ ದಾಖಲಾತಿಗಳೊಂದಿಗೆ ಮುಂದಿನ ಜೂನ್ 29ರೊಳಗೆ ಖುದ್ದು ಹಾಜರಾಗಿ ಆಕ್ಷೇಪಣೆ ಸಲ್ಲಿಸಲು ನಿರ್ದೇಶಿಸುವಂತೆ ಹೇಳಿದ್ದಾರೆ.

ಗಂಜಾಮ್ ಗ್ರಾಮದಲ್ಲಿ ರಾಜಾರೋಷವಾಗಿ ಗಾಂಜಾ, ಚರಸ್ ಮತ್ತು ಅಫೀಮು ಸಿಗುತ್ತಿದೆ. ಅದರಲ್ಲೂ ಪುಟ್ಟ ಮಕ್ಕಳ ಕೈಯ್ಯಲ್ಲಿ ಮಾದಕ ವಸ್ತುಗಳು ಕಾಣಿಸುತ್ತಿವೆ. ಶಾಲಾ–ಕಾಲೇಜಿಗೆ ಹೋಗಬೇಕಾದ ಮಕ್ಕಳು ವ್ಯಸನಿಗಳಾಗಿ ಜೀವನವನ್ನೇ ಹಾಳು ಮಾಡಿಕೊಳ್ಳುತ್ತಿದ್ದಾರೆ. ಡ್ರಗ್ಸ್ ದಂಧೆ ನಡೆಯುತ್ತಿದ್ದರೂ ಪೊಲೀಸ್ ಇಲಾಖೆ ಯಾವುದೇ ಕ್ರಮವಹಿಸದೆ, ಪೆಡ್ಲರ್‌ಗಳಿಂದ ಹಣ ಪಡೆದು ಕಣ್ಮುಚ್ಚಿ ಕುಳಿತಿದ್ದಾರೆ ಎಂದು ಮಾಧ್ಯಮದಲ್ಲಿ ಏ.21ರಂದು ವರದಿಯಾಗಿತ್ತು. ಮಾದಕ ವಸ್ತುಗಳನ್ನು ಆಗುಂತಕರು ಸರಬರಾಜು ಮಾಡಿ ಮಕ್ಕಳ ಜೀವನವನ್ನೇ ಹಾಳು ಮಾಡುತ್ತಿರುವುದು ಕಂಡುಬಂದರೂ ಪೊಲೀಸ್ ಇಲಾಖೆಯವರು ಕಾನೂನು ರೀತ್ಯಾ ಯಾವುದೇ ಕ್ರಮ ಕೈಗೊಳ್ಳದೇ ಕರ್ತವ್ಯ ಲೋಪವೆಸಗಿರುತ್ತಾರೆ. ಈ ಗಂಭೀರ ವಿಚಾರದ ಬಗ್ಗೆ ಗಮನಹರಿಸದೆ ಸಂಬಂಧಪಟ್ಟ ಇತರೆ ಇಲಾಖೆಯವರೂ ನಿರ್ಲಕ್ಷಿಸಿದ್ದಾರೆ. ಈ ಪ್ರಕರಣದಲ್ಲಿ ಸಾರ್ವಜನಿಕ ಹಿತಾಸಕ್ತಿ ಇರುವುದರಿಂದ, ಸದರಿ ವಿಷಯದ ಬಗ್ಗೆ ತನಿಖೆಯ ಹಾಗೂ ವಿಚಾರಣೆಯ ಅವಶ್ಯಕತೆ ಇರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ ಎಂದು ಆದೇಶದಲ್ಲಿ ತಿಳಿಸಿದ್ದಾರೆ.

ಬಿಜೆಪಿ ಕಾರ್ಮಿಕರ ಪ್ರಕೋಷ್ಠ ವಿಭಾಗದ ಶ್ರಮಿಕರಿಗೆ ಸನ್ಮಾನ...



ಬೆಂಗಳೂರಿನ ಬಿಜೆಪಿ ಕಚೇರಿಯ ಜಗನ್ನಾಥ ಭವನದಲ್ಲಿ ಕಾರ್ಮಿಕರ ಪ್ರಕೋಷ್ಠದಿಂದ ನಡೆದ ಕಾರ್ಮಿಕರ ದಿನಾಚರಣೆಯಲ್ಲಿ ಶ್ರಮಿಕರನ್ನು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಆತ್ಮೀಯವಾಗಿ ಸನ್ಮಾನಿಸಿದರು. ಈ ವೇಳೆ ಪ್ರಕೋಷ್ಠದ ಪರಮೇಶ್‌ಗೌಡ, ಮುಖಂಡರಾದ ಟೆನಿಸ್ ಗೋಪಿ, ಶಿವಣ್ಣ, ರಾಮಕೃಷ್ಣ, ಗೋಪಾಲ್, ರಾಜು, ಚಲುವ, ಕಿರಣ್, ಅಭಿ ಇನ್ನಿತರರಿದ್ದರು.

ಆರ್‌ಬಿಐ ಉಪ ಗವರ್ನರ್ ಆಗಿ ರೋಹಿತ್ ಜೈನ್ ನೇಮಕ




ನವದೆಹಲಿ: ಕೇಂದ್ರ ಸರ್ಕಾರವು ರೋಹಿತ್ ಜೈನ್ ಅವರನ್ನು ಭಾರತೀಯ ರಿಸರ್ವ್ ಬ್ಯಾಂಕಿನ ಹೊಸ ಉಪ ಗವರ್ನರ್ ಆಗಿ 3 ವರ್ಷಗಳ ಅವಧಿಗೆ ನೇಮಕ ಮಾಡಿದೆ. ಅವರ ನೇಮಕಾತಿಯನ್ನು ಕ್ಯಾಬಿನೆಟ್‌ನ ನೇಮಕಾತಿ ಸಮಿತಿಯು ಅನುಮೋದಿಸಿದೆ. ಅವರು ಮೇ 3ರಂದು ಅಥವಾ ನಂತರ ಅಧಿಕಾರ ವಹಿಸಿಕೊಳ್ಳುವ ನಿರೀಕ್ಷೆಯಿದೆ. ಆರ್‌ಬಿಐ ಉಪ ಗವರ್ನರ್ ಆಗಿದ್ದ ಟಿ.ರವಿಶಂಕರ್ ಅವರ ಅಧಿಕಾರಾವಧಿ ಮುಗಿದಿದೆ. ಹೀಗಾಗಿ, ಅವರ ಸ್ಥಾನವನ್ನು ರೋಹಿತ್ ಜೈನ್ ವಹಿಸಿಕೊಳ್ಳಲಿದ್ದಾರೆ.

ರೋಹಿತ್ ಜೈನ್ ಸುಮಾರು ಮೂರು ದಶಕಗಳ ಅನುಭವವನ್ನು ಹೊಂದಿದ್ದಾರೆ. ಅವರು ರಿಸರ್ವ್ ಬ್ಯಾಂಕಿನಲ್ಲಿ ಮೇಲ್ವಿಚಾರಣೆ, ಮಾನವ ಸಂಪನ್ಮೂಲ ನಿರ್ವಹಣೆ, ಬ್ಯಾಂಕಿಂಗ್ ಮತ್ತು ಇತರ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ್ದಾರೆ.



ಮೈಸೂರಿಗೆ ಭೇಟಿ ನೀಡಿದ ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ ಕೆ.ಎಚ್.ಮುನಿಯಪ್ಪ ಅವರನ್ನು ಮಾಜಿ ಸಚಿವ ಕೋಟೆ ಎಂ.ಶಿವಣ್ಣ, ವಿಧಾನ ಪರಿಷತ್ ಮಾಜಿ ಸದಸ್ಯ ಸಿ.ರಮೇಶ್, ನಿವೃತ್ತ ಪ್ರಾಧ್ಯಾಪಕರಾದ ಡಾ.ವೆಂಕಟೇಶ್ ಕುಮಾರ್, ಯುವ ಮುಖಂಡ ಪ್ರಕಾಶ್ ಪುಷ್ಪಗುಚ್ಛ ನೀಡಿ ಅಭಿನಂದಿಸಿದರು.



ಕರ್ನಾಟಕ ರಾಜ್ಯ ಪತ್ತಿನ ಸಹಕಾರ ಮಹಾಮಂಡಲದ ಅಧ್ಯಕ್ಷ ಚಂದ್ರಶೇಖರ್ ಅವರ ಹುಟ್ಟುಹಬ್ಬಕ್ಕೆ ಶಾಸಕ ಕೆ.ಹರೀಶ್‌ಗೌಡರು ಶುಭಾಶಯ ಕೋರಿದರು. ಈ ವೇಳೆ ಚಾಮರಾಜ ಕ್ಷೇತ್ರ ಇಂದಿರಾಗಾಂಧಿ ಬ್ಲಾಕ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ಪಾಲಿಕೆ ಮಾಜಿ ಸದಸ್ಯರಾದ ಗೋಪಿ, ಡೆಲ್ಲಿ ರವಿ, ಜನತಾ ಬಜಾರ್ ನಿರ್ದೇಶಕರಾದ ಮಂಜುನಾಥ್, ಮಹೇಶ್, ರಮೇಶ್, ರಾಂಪ್ಪ ಇದ್ದರು.

ಅಮೆರಿಕ ನಂಬಿಕೆಗೆ ಯೋಗ್ಯವಲ್ಲ, ಮತ್ತೆ ಯುದ್ಧ ಆರಂಭವಾಗಬಹುದು

ಇರಾನ್ ಸ್ಫೋಟಕ ಹೇಳಿಕೆ

ಟೆಹ್ರಾನ್: ಕದನವಿರಾಮ ಘೋಷಣೆಯಾಗಿದ್ದರೂ ಇರಾನ್ ಮತ್ತು ಅಮೆರಿಕದ ನಡುವಿನ ಉದ್ವಿಗ್ನತೆ ಇನ್ನೂ ಹೆಚ್ಚಾಗಿದೆ. ಎರಡೂ ದೇಶಗಳ ನಡುವಿನ ಪರಿಸ್ಥಿತಿ ಮತ್ತೆ ಉಲ್ಬಣಗೊಳ್ಳಬಹುದು. ಅಮೆರಿಕ ಮತ್ತು ಇಸ್ರೇಲ್ ಜೊತೆ ಯುದ್ಧ ಮತ್ತೆ ಆರಂಭವಾಗಬಹುದು ಎಂದು ಇರಾನ್ ಸೇನೆ ಎಚ್ಚರಿಸಿದೆ. ಇರಾನ್ ಸೇನಾ ಉಪ ಅಧಿಕಾರಿ ಮೊಹಮ್ಮದ್ ಜಾಫರ್ ಅಸಾದಿ ಅಮೆರಿಕ ಯಾವುದೇ ಒಪ್ಪಂದಗಳನ್ನು ಸರಿಯಾಗಿ ಪಾಲಿಸುತ್ತಿಲ್ಲ ಎಂದು ಟೀಕಿಸಿದ್ದಾರೆ.

ಅಮೆರಿಕದ ಅಧಿಕಾರಿಗಳ ಹೇಳಿಕೆಗಳು ಕೇವಲ ಪ್ರದರ್ಶನಕ್ಕಾಗಿ ಮಾತ್ರ ಎಂದು ಅಸ್ಸಾದಿ ಆರೋಪಿಸಿದ್ದಾರೆ. ಇರಾನ್ ಸೇನೆಯು ಸಂಪೂರ್ಣವಾಗಿ ಸಿದ್ಧವಾಗಿದೆ. ಮತ್ತೆ ಯಾವುದೇ ದಾಳಿ ನಡೆದರೂ ಪ್ರತೀಕಾರ ತೀರಿಸಿಕೊಳ್ಳುತ್ತದೆ ಎಂದು ಸ್ಪಷ್ಟವಾಗಿ ಹೇಳಿದ್ದಾರೆ. ಇರಾನ್ ಜೊತೆಗಿನ ಹೊಸ ಪ್ರಸ್ತಾಪವನ್ನು ಟ್ರಂಪ್ ತಿರಸ್ಕರಿಸಿದ ಸಮಯದಲ್ಲಿಯೇ ಅವರ ಈ ಹೇಳಿಕೆ ಬಂದಿದೆ ಇರಾನ್ ತಾನು ಒಪ್ಪಿಕೊಳ್ಳಲು ಸಾಧ್ಯವಾಗದ ಷರತ್ತುಗಳನ್ನು ವಿಧಿಸುತ್ತಿದೆ ಎಂದು ಟ್ರಂಪ್ ಹೇಳಿದ್ದಾರೆ. ಇರಾನ್ ನಾಯಕರು ಒಗ್ಗಟ್ಟಿನಲ್ಲಿಲ್ಲ ಎಂದು ಆರೋಪಿಸಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ. ಕಾರ್ಯಕ್ರಮವೊಂದರಲ್ಲಿ ಟ್ರಂಪ್ ಮಾತನಾಡುತ್ತಾ, ಪರಮಾಣು ಶಸ್ತ್ರಾಸ್ತ್ರಗಳು ಹುಚ್ಚರ ಕೈಗೆ ಸಿಗಲು ಬಿಡಲು ಸಾಧ್ಯವಿಲ್ಲದ ಕಾರಣ ಅಮೆರಿಕ ಈ ಯುದ್ಧದಲ್ಲಿ ಭಾಗವಹಿಸಿದೆ ಎಂದು ಹೇಳಿದ್ದಾರೆ.

ಮೈಸೂರು–ಹೈದರಾಬಾದ್ ಮತ್ತೊಂದು ವಿಮಾನ ಹಾರಾಟ ಆರಂಭ

ಸಾಂಸ್ಕೃತಿಕ ನಗರಿ–ಮುತ್ತಿನ ನಗರಿ ನಡುವಿನ ವ್ಯಾಪಾರ, ಕೈಗಾರಿಕೆ, ಪ್ರವಾಸೋದ್ಯಮ ಬೆಳವಣಿಗೆಗೆ ಉತ್ತೇಜನ

ಮೈಸೂರು, ಮೇ 2(ಬಿಎಲ್‌ಯು)– ಮೈಸೂರು ಹಾಗೂ ಹೈದರಾಬಾದ್ ನಡುವೆ ಮತ್ತೊಂದು ವಿಮಾನ ಹಾರಾಟ ನಿನ್ನೆಯಿಂದ ಆರಂಭವಾಗಿದೆ. ಈಗಾಗಲೇ ಮೈಸೂರು ಹಾಗೂ ಹೈದರಾಬಾದ್ ನಡುವೆ ಹಾರಾಟ ನಡೆಸುತ್ತಿರುವ ಹಾಲಿ ವಿಮಾನದ ಜೊತೆಗೆ ಹೆಚ್ಚುವರಿಯಾಗಿ ಮತ್ತೊಂದು ವಿಮಾನ ಸೇವೆ ಕಲ್ಪಿಸಲಾಗಿದೆ.

ಮೈಸೂರು ವಿಮಾನ ನಿಲ್ದಾಣದಲ್ಲಿ ನಡೆದ ಸರಳ ಕಾರ್ಯಕ್ರಮದಲ್ಲಿ ಸಂಸದ ಯದುವೀರ್ ಅವರು ಫ್ಲ್ಯಾಗ್ ತೋರುವ ಮೂಲಕ ವಿಮಾನ ಹಾರಾಟಕ್ಕೆ ವಿಧ್ಯುಕ್ತ ಚಾಲನೆ ನೀಡಿದರು. ಇದೇ ವೇಳೆ ಪ್ರಯಾಣಿಕರೊಬ್ಬರಿಗೆ ಸಾಂಕೇತಿಕವಾಗಿ ಟಿಕೆಟ್ ಸಹ ಹಸ್ತಾಂತರಿಸಿದರು. ಈ ಸಂದರ್ಭದಲ್ಲಿ ಶಾಸಕ ಜಿ.ಟಿ.ದೇವೇಗೌಡ ಹಾಗೂ ಮೈಸೂರು ವಿಮಾನ ನಿಲ್ದಾಣದ ನಿರ್ದೇಶಕಿ



ಪಿ.ವಿ.ಉಷಾ ಕುಮಾರಿ ಹಾಜರಿದ್ದರು.

ಸಾಂಸ್ಕೃತಿಕ ನಗರಿ ಮೈಸೂರು ಹಾಗೂ ಮುತ್ತಿನ ನಗರಿ ಹೈದರಾಬಾದ್ ನಡುವಿನ ವಾಣಿಜ್ಯ, ವ್ಯಾಪಾರ, ಕೈಗಾರಿಕಾ ಬೆಳವಣಿಗೆ ಹಾಗೂ ಪ್ರವಾಸೋದ್ಯಮಕ್ಕೆ ಇದರಿಂದ ಹೆಚ್ಚಿನ ಉತ್ತೇಜನ ದೊರೆಯಲಿದೆ.

ಹೈದರಾಬಾದ್‌ನಿಂದ ಮಧ್ಯಾಹ್ನ 12.10ಕ್ಕೆ ಹೊರಡುವ ಇಂಡಿಯೋ ಏರ್‌ಲೈನ್ಸ್ ವಿಮಾನ ಮಧ್ಯಾಹ್ನ 2 ಗಂಟೆಗೆ ಮೈಸೂರು ವಿಮಾನ ನಿಲ್ದಾಣಕ್ಕೆ ಆಗಮಿಸಲಿದೆ. ತರುವಾಯ ಮಧ್ಯಾಹ್ನ 2.20 ಗಂಟೆಗೆ ಮೈಸೂರು ವಿಮಾನ ನಿಲ್ದಾಣದಿಂದ ಹೊರಟು 4 ಗಂಟೆಗೆ ಹೈದರಾಬಾದ್ ತಲುಪಲಿದೆ ಮೈಸೂರು ಹಾಗೂ ಹೈದರಾಬಾದ್ ನಡುವೆ ಹೆಚ್ಚುವರಿ ವಿಮಾನ ಹಾರಾಟದಿಂದ ದಕ್ಷಿಣ ಭಾರತದ ಪ್ರಮುಖ ನಗರಗಳ ನಡುವಿನ ಸಂಪರ್ಕ ಸುಧಾರಿಸಲಿದೆ.

ಹೈದರಾಬಾದ್‌ನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಐಟಿ ಕಂಪನಿಗಳು, ಔಷಧ ತಯಾರಿಕಾ ಕಂಪನಿಗಳಿವೆ. ಮೈಸೂರಿನಲ್ಲಿರುವ ಐಟಿ ಹಾಗೂ ಔಷಧ ತಯಾರಿಕಾ ಕಂಪನಿಗಳ ಬೆಳವಣಿಗೆಗೆ ಇದರಿಂದ ಅನುಕೂಲಕರ ವಾತಾವರಣ ನಿರ್ಮಾಣವಾಗಲಿದೆ.

ಹೈದರಾಬಾದ್‌ನಂತೆ ಮೈಸೂರಿನಿಂದ ಗೋವಾಗೆ ಕೂಡ ಬಹಳ ಬೇಡಿಕೆ ಇದೆ ಇದನ್ನು ಮನಗಂಡು ಕೇಂದ್ರ ಸರ್ಕಾರ ಯಾವ ತೀರ್ಮಾನ ಮಾಡುತ್ತದೆ ಕಾದು ನೋಡಬೇಕಿದೆ

ಮೈಸೂರು ಹೈದಾರಾಬಾದ್ ನಡುವೆ ಶುಕ್ರವಾರದಿಂದ ಆರಂಭವಾದ ಹೆಚ್ಚುವರಿ ವಿಮಾನ ಹಾರಾಟದ ವೇಳಾಪಟ್ಟಿ

- ಹೈದರಾಬಾದ್‌ನಿಂದ ಮಧ್ಯಾಹ್ನ 12.10ಕ್ಕೆ ನಿರ್ಗಮನ
- ಮೈಸೂರಿಗೆ ಮಧ್ಯಾಹ್ನ 2 ಗಂಟೆಗೆ ಆಗಮನ
- ಮೈಸೂರಿನಿಂದ ಮಧ್ಯಾಹ್ನ 2.20 ನಿರ್ಗಮನ
- ಹೈದರಾಬಾದ್‌ಗೆ ಸಂಜೆ 4 ಗಂಟೆಗೆ ಆಗಮನ

ಈ ಹಿನ್ನೆಲೆಯಲ್ಲಿ ಹೊಸ ವಿಮಾನ ಸೇವೆಗೆ ಚಾಲನೆ ನೀಡಿದ ನಂತರ ಸಂಸದ ಯದುವೀರ್ ಹಾಗೂ ಜಿ.ಟಿ.ದೇವೇಗೌಡ ಅವರು ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳ ಜೊತೆ ಸಮಾಲೋಚನೆ ನಡೆಸಿದರು. ಈಗಾಗಲೇ ಸೇವೆಯಲ್ಲಿರುವಂತೆ ಹೈದರಾಬಾದ್‌ನಿಂದ ಹೊರಡುವ ವಿಮಾನ ಮಧ್ಯಾಹ್ನ 1.55 ಗಂಟೆಗೆ ಮೈಸೂರಿಗೆ ಆಗಮಿಸಲಿದೆ. ಹಾಗೆಯೇ ಸಂಜೆ 4.15 ಗಂಟೆಗೆ ಮೈಸೂರಿನಿಂದ ಹೈದರಾಬಾದ್‌ಗೆ ತೆರಳಲಿದೆ. ತಮಿಳುನಾಡಿನ ಚೆನ್ನೈ ನಿಂದ ಸಂಜೆ 6.50 ಗಂಟೆಗೆ ಮೈಸೂರಿಗೆ ಆಗಮಿಸ ಲಿರುವ ವಿಮಾನ. ತರುವಾಯ ಮೈಸೂರಿ ನಿಂದ ರಾತ್ರಿ 7.10 ಗಂಟೆಗೆ ಚೆನ್ನೈಗೆ ಪ್ರಯಾಣ ಆರಂಭಿಸಲಿದೆ.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಕರ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಡಕಾಯಿಟ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಕೋಟಿಗೊಬ್ಬ (ಕ)	4 ಪ್ರದರ್ಶನಗಳು
ರಾಜಕಮಲ್	
ಪೆಟ್ರಿಯೋಟ್ (ಮ)	4 ಪ್ರದರ್ಶನಗಳು
ಸಂಗಂ	
ಕರ (ತ)	4 ಪ್ರದರ್ಶನಗಳು
ಲಿಡೋ	
ಮಾಣಿಕ್ಯ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಪುನೀತ್ ನಿವಾಸ (ಕ)	4 ಪ್ರದರ್ಶನಗಳು

ಮನೆಯಲ್ಲೇ ನೇಣು ಬಿಗಿದ ಸ್ಥಿತಿಯಲ್ಲಿ ಜಡ್ಜ್ ಶವ ಪತ್ತೆ: ಆತ್ಮಹತ್ಯೆ ಶಂಕೆ

ನವದೆಹಲಿ: ತಮ್ಮ ಮನೆಯ ಕೊಠಡಿ



ಯಲ್ಲೇ ಸೀಲಿಂಗ್ ಫ್ಯಾನ್‌ಗೆ ನೇಣು ಬಿಗಿದ ಸ್ಥಿತಿಯಲ್ಲಿ ಜಡ್ಜ್ ಶವ ಪತ್ತೆಯಾಗಿರುವ ಘಟನೆ ದೆಹಲಿಯ ಸಫ್ದರ್ಜಂಗ್ ಪ್ರದೇಶದಲ್ಲಿ ನಡೆದಿದ್ದು, ಆತ್ಮಹತ್ಯೆ ಶಂಕೆ ವ್ಯಕ್ತವಾಗಿದೆ.

ಅಮನ್ ಕುಮಾರ್ ಶರ್ಮಾ (30) ಮೃತ ದುರ್ದೈವಿ. ಅವರ ಸೋದರ ಮಾವ ಪೊಲೀಸರಿಗೆ ಮಾಹಿತಿ ನೀಡಿದ ಬಳಿಕ ಸ್ಥಳಕ್ಕೆ ಭೇಟಿ ನೀಡಿದ ಪೊಲೀಸರು ಪರಿಶೀಲಿಸಿ, ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ಕಳುಹಿಸಿದ್ದಾರೆ.

ಸಾವಿಗೆ ನಿಖರ ಕಾರಣ ಇನ್ನೂ ತಿಳಿದುಬಂದಿಲ್ಲ, ಜೊತೆಗೆ ಯಾವುದೇ ಡೆತ್ ನೋಟ್ ಕೂಡ ಪತ್ತೆಯಾಗಿಲ್ಲ, ಒಟ್ಟಿನಲ್ಲಿ ಎಲ್ಲಾ ಆಯಾಮಗಳಲ್ಲೂ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪುಣೆಯ ಸಿಂಬಿಯೋಸಿಸ್ ಕಾನೂನು ಶಾಲೆಯಿಂದ ಪದವಿ ಪಡೆದ ಅಮನ್ ಕುಮಾರ್ ಶರ್ಮಾ 2018 ರಲ್ಲಿ ಬಿಎಎಲ್‌ಎಲ್‌ಬಿ ಪೂರ್ಣಗೊಳಿಸಿದರು. 2021ರ ಜೂನ್ 19 ರಂದು ದೆಹಲಿಯ ನ್ಯಾಯಾಂಗ ಸೇವೆಗೆ ಸೇರಿದ್ದರು. ಜಡ್ಜ್ ಹುದ್ದೆಗೇರುವ ಜೊತೆಗೆ ದೆಹಲಿಯ ಕರ್ಕಾರ್ಡೂಮಾ ನ್ಯಾಯಾಲಯದ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿಯಾಗಿಯೂ ನೇಮಿಸಲಾಗಿತ್ತು

ವಾಣಿಜ್ಯ ಸಿಲಿಂಡರ್ ದರ 993 ರೂ. ಹೆಚ್ಚಳ

ಹೋಟೆಲ್ ಉದ್ಯಮಕ್ಕೆ ಸಂಕಷ್ಟ; ಆದರೂ ತಿಂಡಿ-ಊಟದ ದರ ಏರಿಕೆ ಮಾಡದಿರಲು ನಿರ್ಧಾರ

ಮೈಸೂರು,ಮೇ.2(ಎಂಟಿವೈ)– ವಾಣಿಜ್ಯ ಬಳಕೆಯ 19 ಕೆಜಿಯ ಸಿಲಿಂಡರ್‌ಗೆ ಏಕಾಏಕಿ 993 ರೂ. ಹೆಚ್ಚಳ ಮಾಡಲಾಗಿದ್ದು, ಹೋಟೆಲ್ ಉದ್ಯಮ ಸಂಕಷ್ಟ ಪರಿಸ್ಥಿತಿಗೀಡಾಗಿದೆ. ಕೂಡಲೇ ಬೆಲೆ ಹೆಚ್ಚಳ ಹಿಂಪಡೆಯಬೇಕು ಎಂದು ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಆಗ್ರಹಿಸಿದ್ದಾರೆ.

ಮೈಸೂರಿನ ಕೃಷ್ಣಮೂರ್ತಿಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ವಾಣಿಜ್ಯ ಬಳಕೆಯ ಸಿಲಿಂಡರ್ ಇತಿಹಾಸದಲ್ಲೇ ಈ ಪ್ರಮಾಣದ ಬೆಲೆ ಏರಿಕೆಯಾಗಿರಲಿಲ್ಲ. ಇದರಿಂದ ಹೋಟೆಲ್ ಉದ್ಯಮವೇ ತತ್ತರಿಸುವಂತಾಗಿದೆ. ಹಾಗಾಗಿ ಹೋಟೆಲ್ ಉದ್ಯಮ ನಂಬಿರುವವರು, ಗ್ರಾಹಕರು, ತೊಂದರೆಗೀಡಾಗಿದ್ದಾರೆ ಎಂದರು

ವಾಣಿಜ್ಯ ಸಿಲಿಂಡರ್ ಬೆಲೆಯನ್ನು ಶೇ.25ರಷ್ಟು ಹೆಚಿಸಲಾಗಿದೆ. ಈಗಾಗಲೇ ಅಗತ್ಯ ವಸ್ತುಗಳ ಬೆಲೆ ದುಬಾರಿಯಾಗಿದೆ. ಹೋಟೆಲ್ ತಿಂಡಿ, ಉಟೋಪಚಾರ ಬೆಲೆಗಳು ಇನ್ನೂ ಹೆಚ್ಚಾಗಿ ಸಾಮಾನ್ಯ ಜನರ ಜೀವನ ಅಸ್ತವ್ಯಸ್ತವಾಗುತ್ತದೆ. ಜೀವನ ನಡೆಸುವುದೇ ಕಷ್ಟಕರವಾಗಲಿದೆ. 2026 ರಲ್ಲಿ ವಾಣಿಜ್ಯ ಸಿಲಿಂಡರ್ ಬೆಲೆ ಏರುತ್ತಲೇ ಇದೆ. ಜನವರಿಯಲ್ಲಿ 1,774 ರೂ. ಇದ್ದ 19 ಕೆ.ಜಿ ಸಿಲಿಂಡರ್ ಬೆಲೆ ಫೆಬ್ರವರಿಯಲ್ಲಿ 1,794.50 ರೂ., ಮಾರ್ಚ್ 1ರಂದು 1,824 ರೂ., ಮಾ.7ರಂದು 1,938 ರೂ., ಏಪ್ರಿಲ್ 1ರಂದು 2,141 ರೂ., ಮೇ 1ರಂದು 3,132 ರೂ. ಇದೆ. ಮಾರ್ಚ್ 1ರಿಂದ ಮೇ1ರವರೆಗೆ ಒಟ್ಟು 1,440 ರೂ. ಏರಿಕೆಯಾಗಿದೆ. ಇದರಿಂದಾಗಿ ಉಪಹಾರ ದರ್ಶಿನಿ, ಮೆಸ್ ಮತ್ತು ಹೋಟೆಲ್‌ಗಳು ಆರ್ಥಿಕ ನಷ್ಟಕ್ಕೆ ಸಿಲುಕಿವೆ ಎಂದು ಅಸಮಾದಾನ ವ್ಯಕ್ತಪಡಿಸಿದರು.

ಕೇಂದ್ರ ಸರ್ಕಾರ ಹಲವಾರು ತೆರಿಗೆಗಳನ್ನು ಸಂಗ್ರಹಿಸುತ್ತಿದೆ. ದೊಡ್ಡ ಮೊತ್ತದ ತೆರಿಗೆ ಸರ್ಕಾರಕ್ಕೆ ಬರುತ್ತಿದೆ. ಆದ್ದರಿಂದ ಪಶ್ಚಿಮ ಏಷಿಯಾದ ಸಂಘರ್ಷ ಮುಗಿಯುವವರೆಗೂ ಜಿಎಸ್‌ಟಿ ತೆರಿಗೆ ಸರಿದೂಗಿಸಿಕೊಂಡು ಏರಿಸಿರುವ ಸಿಲಿಂಡರ್ ಬೆಲೆ ಹಿಂದಕ್ಕೆ ಪಡೆಯಬೇಕು. ಈಗಾಗಲೇ ವಿದ್ಯುತ್ ಶುಲ್ಕ, ನೀರಿನ ಶುಲ್ಕ, ಕಾರ್ಮಿಕರ ವೇತನ ಸೇರಿದಂತೆ ಹಲವು ರಹದಾರಿಗಳ ಶುಲ್ಕ ಹೆಚ್ಚಿಸಲಾಗಿದೆ. ಮತ್ತೆ ಸಿಲಿಂಡರ್ ದರ ಏರಿಕೆಯು ಗಾಯದ ಮೇಲೆ ಬರೆ ಎಳೆದಂತಾಗಿದೆ. ಅಗತ್ಯ ವಸ್ತುಗಳನ್ನು ಯಾವುದೇ ಕಾರಣಕ್ಕೂ ಈ ಮಟ್ಟಕ್ಕೆ ಏರಿಸಲೇಬಾರದು. ತೆರಿಗೆಗಳಲ್ಲಿ ನಷ್ಟವನ್ನು ಸರಿದೂಗಿಸಿಕೊಳ್ಳಬೇಕು. ಲಾಭದಾಯಕ ಉದ್ದೇಶವನ್ನು ಕೇಂದ್ರ ಸರ್ಕಾರ ಮೊದಲು ಕೈ ಬಿಡಬೇಕು. ಜಿಎಸ್‌ಟಿ ಮೂಲಕ ಸಾವಿರಾರು ಕೋಟಿ ಸಂಗ್ರಹಿಸುತ್ತಿರುವ ಕೇಂದ್ರ ಸರ್ಕಾರ ಗ್ಯಾಸ್ ಸಿಲಿಂಡರ್ ದರ ಏರಿಕೆ ಕೈಬಿಟ್ಟು ದರ, ವ್ಯತ್ಯಾಸವನ್ನು ಸರಿದೂಗಿಸಿಕೊಳ್ಳಬೇಕು ಎಂದು ಆಗ್ರಹಿಸಿದರು.



ತುಂಬಾ ತೊಂದರೆಯಾಗುತ್ತಿದೆ

"ವಾಣಿಜ್ಯ ಸಿಲಿಂಡರ್ ಬೆಲೆ ಹೆಚ್ಚಳದಿಂದ ಹೋಟೆಲ್ ನಡೆಸುವುದಕ್ಕೆ ಸ್ವಲ್ಪ ತೊಂದರೆಯಾಗುತ್ತಿದೆ. ಆದರೂ, ನಮ್ಮನ್ನೆ ನಂಬಿರುವ ಗ್ರಾಹಕರ ಹಿತ ಕಾಪಾಡಲು ಹೋಟೆಲ್ ನಡೆಸಲಾಗುತ್ತಿದೆ. ವಾಣಿಜ್ಯ ಸಿಲಿಂಡರ್ 991 ರೂ. ಹೆಚ್ಚಿಸಿದ್ದರೂ ತಿಂಡಿ. ಊಟದ ದರ ಹೆಚ್ಚಿಸುವುದಿಲ್ಲ.

- ಮಲ್ಲೇಶ್. ಮಾಲೀಕರು, ಲಕ್ಷ್ಮೀ ಟಿಫಾನಿಸ್

ತಿಂಡಿ, ತಿನಿಸು ಬೆಲೆ ಹೆಚ್ಚಳವಿಲ್ಲ

ಇರಾನ್ ಮೇಲೆ ಅಮೇರಿಕಾ–ಇಸ್ರೇಲ್ ಯುದ್ಧ ಆರಂಭಿಸಿದ ಬಳಿಕ ಉಂಟಾದ ಅಡುಗೆ ಅನಿಲ ಪೂರೈಕೆಯಲ್ಲಿನ ವ್ಯತ್ಯಾಸದಿಂದಾಗಿ ಇತ್ತೀಚೆಗಷ್ಟೇ ಹೋಟೆಲ್ ಮಾಲೀಕರು ತಿಂಡಿ, ಊಟಕ್ಕೆ 5ರಿಂದ 10 ರೂ. ಹೆಚ್ಚಳ ಮಾಡಿದ್ದರು. ಇದೀಗ ವಾಣಿಜ್ಯ ಸಿಲಿಂಡರ್ ಬೆಲೆ 993 ರೂ. ಹೆಚ್ಚಳ ಮಾಡಿದ್ದರೂ, ಗ್ರಾಹಕರಿಗೆ ಸಮಸ್ಯೆಯಾಗಬಾರದು ಎಂದು ದರ ಹೆಚ್ಚಳಕ್ಕೆ ಇನ್ನು ನಿರ್ಧರಿಸಿಲ್ಲ.

- ಸಿ.ನಾರಾಯಣಗೌಡ, ಅಧ್ಯಕ್ಷರು, ಮೈಸೂರು ಜಿಲ್ಲಾ ಹೋಟೆಲ್ ಮಾಲೀಕರ ಸಂಘ

ವಾಣಿಜ್ಯ ಸಿಲಿಂಡರ್ ಬೆಲೆ ಏರಿಕೆಗೆ ಖಂಡನೆ

ಮೈಸೂರು, ಮೇ 2– ಪಂಚ ರಾಜ್ಯ ಚುನಾವಣೆ ಮುಗಿದ ಬೆನ್ನಲ್ಲೇ ವಾಣಿಜ್ಯ ಸಿಲಿಂಡರ್ ಬೆಲೆಯಲ್ಲಿ ದಿಢೀರ್ 991 ರೂ. ಏರಿಕೆ ಮಾಡುವ ಮೂಲಕ ಕೇಂದ್ರದ ಬಿಜೆಪಿ ಸರ್ಕಾರ ತನ್ನ ನರಿ ಬುದ್ಧಿ ಪ್ರದರ್ಶಿಸಿದೆ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಬಿ.ಸುಬ್ರಹ್ಮಣ್ಯ ಕಿಡಿಕಾರಿದ್ದಾರೆ.



ಸ್ವಾತಂತ್ರ್ಯ ಪಡೆದು 79 ವರ್ಷಗಳಾಗಿದ್ದು, ಈವರೆಗೆ ಯಾವ ಸರ್ಕಾರವೂ ಈ ಪ್ರಮಾಣದಲ್ಲಿ ಬೆಲೆ ಏರಿಕೆ ಮಾಡಿರಲಿಲ್ಲ. ಕೇಂದ್ರ ಸರ್ಕಾರ ಬಕಾಸುರನಂತೆ ಜನರ ಜೀವ ಹಾಗೂ ಜೀವನವನ್ನು ನುಂಗುತ್ತಿದೆ. ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆ ಹೆಚ್ಚಿಸಿದೆ. ಮತದಾನದವರೆಗೆ ಮೋದಿ ಸರ್ಕಾರವು ಉದ್ದೇಶಪೂರ್ವಕವಾಗಿ ವಾಣಿಜ್ಯ ಬಳಕೆಯ ಸಿಲಿಂಡರ್ ಬೆಲೆ ಏರಿಕೆಯನ್ನು ತಡೆದು, ಈಗ ದಿಢೀರ್ ಬೆಲೆ ಏರಿಸಿ ಜನರ ರಕ್ತ ಹೀರುತ್ತಿದೆ. ವಿಶ್ವಗುರುವಿನ 56 ಇಂಚಿನ ಎದೆಯಲ್ಲಿ ಒಂದಿಂಚೂ ಕರುಣೆ ಇಲ್ಲ ಎನ್ನುವುದು ಬಯಲಾಗಿದೆ ಎಂದಿದ್ದಾರೆ

ಕೇವಲ 4 ತಿಂಗಳ ಅವಧಿಯಲ್ಲಿ ಕೇಂದ್ರ ಸರ್ಕಾರ ವಾಣಿಜ್ಯ ಬಳಕೆಯ ಎಲ್‌ಪಿಜಿ ಸಿಲಿಂಡರ್ ದರವನ್ನು 6 ಬಾರಿ ಏರಿಕೆ ಮಾಡಿದ್ದು, ಒಟ್ಟು 1,518 ರೂ. ಹೊರೆಯನ್ನು ಬಳಕೆದಾರರ ಮೇಲೆ ಹೊರಿಸಿದೆ. ಮತದಾನದ ಬಳಿಕ ಅಧಿಕ ಏರಿಕೆ ಮಾಡಿದೆ. ಸಿಲಿಂಡರ್ ಬೆಲೆ ಏರಿಕೆಯಿಂದ ಹೋಟೆಲ್‌ಗಳಲ್ಲೂ ಆಹಾರದ ಬೆಲೆ ಹೆಚ್ಚಾಗಿ, ಜನಸಾಮಾನ್ಯರು ಕಂಗಾಲಾಗಿದ್ದಾರೆ. ಇದು ಕೇವಲ ಆರಂಭವಷ್ಟೇ, ಇಂತಹ ಮತ್ತಷ್ಟು ಅಗತ್ಯ ವಸ್ತುಗಳ ಬೆಲೆ ಏರಿಕೆಯು ಹೊಡೆತ ಕಾದಿವೆ. ಬೆಲೆ ಏರಿಕೆಯಿಂದ ರೋಸಿಹೋಗಿರುವ ಜನ ದಂಗೆ ಏಳುವ ಮುನ್ನ ಕೇಂದ್ರ ಸರ್ಕಾರ ಎಚ್ಚೆತ್ತುಕೊಳ್ಳಬೇಕು ಎಂದು ತಿಳಿಸಿದ್ದಾರೆ.

ಒಳ ಚರಂಡಿ, ಮಳೆ ನೀರು ನುಗ್ಗಿ ಖಾಸಗಿ ಬಡಾವಣೆಯ ಕಾಂಪೌಂಡ್ ಕುಸಿತ



ಮೈಸೂರು, ಮೇ 2(ಬಿಎಲ್‌ಯು)– ಮೈಸೂರಿನ ಕೇರ್ಗಳ್ಳಿ ಬಳಿಯ ಕಂದಾಯ ಬಡಾವಣೆಯಿಂದ ಒಳ ಚರಂಡಿ ಹಾಗೂ ಮಳೆ ನೀರು ನುಗ್ಗಿ ಖಾಸಗಿ ಬಡಾವಣೆಯ ಕಾಂಪೌಂಡ್ ಕುಸಿದಿದೆ.

ಕಂದಾಯ ಬಡಾವಣೆಯಲ್ಲಿ ವ್ಯವಸ್ಥಿತ ಒಳ ಚರಂಡಿ ಮಾರ್ಗ ಕಲ್ಪಿಸಿಲ್ಲ. ಇದರಿಂದ ಒಳ ಚರಂಡಿ ನೀರು ದಿಕ್ಕಾಪಾಲಾಗಿ ಹರಿಯುತ್ತಿದೆ. ಮೊನ್ನೆ ಭಾರೀ ಮಳೆಯಾದ ಸಂದರ್ಭದಲ್ಲಿ ಒಳ ಚರಂಡಿ ನೀರಿನ ಜೊತೆಗೆ ಮಳೆ ನೀರು ನುಗ್ಗಿ ಖಾಸಗಿ ಬಡಾವಣೆಯ ಹಳ್ಳದ ಬಳಿ ನಿಂತಿದೆ.

ಹೆಚ್ಚಿನ ಪ್ರಮಾಣದಲ್ಲಿ ನೀರು ನುಗ್ಗಿದ ಪರಿಣಾಮ ಸತ್ವ ಕಳೆದುಕೊಂಡ ಖಾಸಗಿ ಬಡಾವಣೆಯ ಕಾಂಪೌಂಡ್ ಕುಸಿದಿದೆ. ಸಾಮಾನ್ಯವಾಗಿ ಅಲ್ಲಿ ಮಕ್ಕಳು ಕ್ರಿಕೆಟ್ ಆಟವಾಡುತ್ತಿದ್ದರು. ಆದರೆ ಮಳೆ ಬಂದ ಕಾರಣ ಮಕ್ಕಳು ಅಲ್ಲಿಗೆ ಬರಲಿಲ್ಲವಾದ್ದರಿಂದ ಅನಾಹುತ ತಪ್ಪಿದೆ.

ಈ ವಿಚಾರ ತಿಳಿದ ನಂತರ ಇಂದು ಬೋಗಾದಿ ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ಸುಜಯ್ ಕುಮಾರ್, ಹಿರಿಯ ಆರೋಗ್ಯ ನಿರೀಕ್ಷಕ ಪುನೀತ್ ಸೇರಿದಂತೆ ಇತರೆ ಅಧಿಕಾರಿಗಳು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಕಂದಾಯ ಬಡಾವಣೆ ಸೇರಿದಂತೆ ಇತರೆ ಬಡಾವಣೆಗಳಿಂದ ಹರಿದು ಬರುತ್ತಿರುವ ಒಳ ಚರಂಡಿ ನೀರು ತಡೆಗೆ ಶಾಶ್ವತ ಪರಿಹಾರ ರೂಪಿಸುವುದಾಗಿ ಭರವಸೆ ನೀಡಿದರು. ಅಲ್ಲದೆ ನಾಳೆಯಿಂದಲೇ ಕೆಲಸ ಆರಂಭಿಸುವಂತೆ ಸ್ಥಳದಲ್ಲಿದ್ದ ಅಧಿಕಾರಿಗಳಿಗೆ ಸೂಚಿಸಿದರು.

ಮೊಬೈಲ್‌ಗಳಲ್ಲಿ ಮೊಳಗಿದ 'ಎಮರ್ಜೆನ್ಸಿ' ಸೈರನ್!

ನವದೆಹಲಿ/ಬೆಂಗಳೂರು: ಪ್ರಕೃತಿ ವಿಕೋಪಗಳು ಮತ್ತು ತುರ್ತು ಸಂದರ್ಭಗಳಲ್ಲಿ ನಾಗರಿಕರ ಸುರಕ್ಷತೆಯನ್ನು ಖಚಿತಪಡಿಸಲು ಕೇಂದ್ರ ಸರ್ಕಾರ ರೂಪಿಸಿರುವ 'ಸೆಲ್ ಬ್ರಾಡ್‌ಕಾಸ್ಟ್ ಅಲರ್ಟ್' ವ್ಯವಸ್ಥೆಯನ್ನು ದೇಶಾದ್ಯಂತ ಯಶಸ್ವಿಯಾಗಿ ಪರೀಕ್ಷಿಸಲಾಗಿದೆ.

ಇಂದು ಮಧ್ಯಾಹ್ನ 12 ಗಂಟೆ ಸಮಯದಲ್ಲಿ ದೇಶದ ಹಲವೆಡೆ ಮೊಬೈಲ್ ಫೋನ್‌ಗಳಲ್ಲಿ ಜೋರಾದ ಎಚ್ಚರಿಕೆ ಧ್ವನಿ ಹಾಗೂ ಸಂದೇಶಗಳು ಕಾಣಿಸಿಕೊಂಡು ಏನೂ ಅರಿಯದ ಜನರಲ್ಲಿ ಕೆಲಕಾಲ ಗೊಂದಲ ಉಂಟಾಯಿತು. ದೂರಸಂಪರ್ಕ ಇಲಾಖೆ ಹಾಗೂ ಸಂಬಂಧಿತ ರಾಷ್ಟ್ರೀಯ ಸಂಸ್ಥೆಗಳ ಸಹಕಾರದಲ್ಲಿ ಅಭಿವೃದ್ಧಿಪಡಿಸಲಾದ ಈ ಸ್ವದೇಶಿ ತಂತ್ರಜ್ಞಾನ ಆಧಾರಿತ ತುರ್ತು ಎಚ್ಚರಿಕೆ ವ್ಯವಸ್ಥೆ ಪರೀಕ್ಷೆ ಯಶಸ್ವಿಯಾಗಿ ನೆರವೇರಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ವೇಳೆ ಲಕ್ಷಾಂತರ ಮೊಬೈಲ್ ಬಳಕೆದಾರರಿಗೆ ಪರೀಕ್ಷಾ ಅಲರ್ಟ್ ಸಂದೇಶಗಳು ತಲುಪಿವೆ. ಈ ಹೊಸ ವ್ಯವಸ್ಥೆ ಸಾಮಾನ್ಯ ಎಸ್‌ಎಂಎಸ್ ಎಚ್ಚರಿಕೆಗಿಂತ ಹೆಚ್ಚು ವೇಗವಾಗಿ ಮತ್ತು ಪರಿಣಾಮಕಾರಿಯಾಗಿ ಮಾಹಿತಿ ತಲುಪಿಸುವಂತೆ ವಿನ್ಯಾಸಗೊಳಿಸಲಾಗಿದೆ.

ತುರ್ತು ಸಂದರ್ಭಗಳಲ್ಲಿ ಗಮನ ಸೆಳೆಯುವ ರೀತಿಯಲ್ಲಿ ಜೋರಾದ ಧ್ವನಿ ಹಾಗೂ ಸ್ಪಷ್ಟ ಸಂದೇಶಗಳ ಮೂಲಕ ನಾಗರಿಕರಿಗೆ ತಕ್ಷಣದ ಎಚ್ಚರಿಕೆ ನೀಡುವುದು ಇದರ ಪ್ರಮುಖ ಉದ್ದೇಶವಾಗಿದೆ.

ಕೆಲವರಲ್ಲಿ ಗಾಬರಿ; ಗೊಂದಲ!!

ಭೂಕಂಪ, ಸುನಾಮಿ, ಚಂಡಮಾರುತದಂತಹ ಪ್ರಕೃತಿ ವಿಕೋಪಗಳ ಜೊತೆಗೆ ಅನಿಲ ಸೋರಿಕೆ, ರಾಸಾಯನಿಕ ಅಪಾಯಗಳು ಹಾಗೂ ಇತರ ಮಾನವ ನಿರ್ಮಿತ ತುರ್ತು ಪರಿಸ್ಥಿತಿಗಳಲ್ಲಿಯೂ ಈ ವ್ಯವಸ್ಥೆ ಯನ್ನು ಬಳಸಲಾಗುತ್ತದೆ. ಯಾವುದೇ ವಿಳಂಬವಿಲ್ಲದೆ ಸ್ಥಳಾಧಾರಿತ ಎಚ್ಚರಿಕೆಗಳನ್ನು ನೀಡುವ ಸಾಮರ್ಥ್ಯ ಇದರ ಪ್ರಮುಖ ವೈಶಿಷ್ಟ್ಯವಾಗಿದೆ. ಸಂಪೂರ್ಣವಾಗಿ ಕಾರ್ಯಾರಂಭವಾದ ನಂತರ, ಈ ವ್ಯವಸ್ಥೆಯು ಮೊಬೈಲ್ ಫೋನ್ ಸೆಟ್ಟಿಂಗ್‌ಗಳ ಮೇಲೆ ಅವಲಂಬಿಸದೆ ಎಲ್ಲ ಹ್ಯಾಂಡ್‌ಸೆಟ್‌ಗಳಿಗೂ ತುರ್ತು ಸಂದೇಶಗಳನ್ನು ತಲುಪಿಸಲಾಗುವುದು ಅಧಿಕಾರಿಗಳು ತಿಳಿಸಿದ್ದಾರೆ. ಈ ಪರೀಕ್ಷಾ ಹಂತದಲ್ಲಿ ಇಂಗ್ಲೀಷ್, ಹಿಂದಿ ಹಾಗೂ ವಿವಿಧ ಪ್ರಾದೇಶಿಕ ಭಾಷೆಗಳಲ್ಲಿ ಸಂದೇಶಗಳನ್ನು ರವಾನಿಸಲಾಗಿದೆ. ಮೊಬೈಲ್ ಸೆಟ್ಟಿಂಗ್‌ಗಳಲ್ಲಿ ಟೆಸ್ಟ್ ಚಾನೆಲ್ ಸಕ್ರಿಯವಾಗಿದ್ದ ಬಳಕೆದಾರರಿಗೆ ಮಾತ್ರ ಈ ಅಲರ್ಟ್‌ಗಳು ತಲುಪಿವೆ ಎಂದು ಸ್ಪಷ್ಟಪಡಿಸಲಾಗಿದೆ. ಇದು ಕೇವಲ ಪರೀಕ್ಷಾ ಪ್ರಕ್ರಿಯೆಯಾಗಿದ್ದು, ಯಾವುದೇ ತುರ್ತು ಪರಿಸ್ಥಿತಿ ಇಲ್ಲ ಎಂದು ಸರ್ಕಾರ ತಿಳಿಸಿದೆ.

ನಂಜನಗೂಡಲ್ಲಿ ಬುದ್ಧ ನಡಿಗೆ; ತ್ರಿಸರಣ ಪಠಣ

ನಂಜನಗೂಡು: ಭಗವಾನ್ ಬುದ್ಧರ ಜಯಂತಿ ಅಂಗವಾಗಿ ಧಮ್ಮ ಧ್ವನಿ ಸೇವಾ ಟ್ರಸ್ಟ್ ವತಿಯಿಂದ ಬುದ್ಧ ನಡಿಗೆ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ನಡೆಸಲಾಯಿತು.

ಈ ಕಾರ್ಯಕ್ರಮಕ್ಕೆ ಪಟ್ಟಣದ ಅಂಬೇಡ್ಕರ್ ಪ್ರತಿಮೆ ಮುಂಭಾಗ ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್, ಜ್ಯೋತಿ ಬೆಳಗಿಸುವ ಮೂಲಕ ಚಾಲನೆ ನೀಡಿದರು.

ಬಿಕ್ಕುಗಳು, ಬೌದ್ಧ ಉಪಾಸಕರು ಹಾಗೂ ಉಪಾಸಕಿಯರು ತಿಸರಣ ಪಂಚಶೀಲಗಳನ್ನು ಪಠಿಸುತ್ತಾ, ಮೇಣದ ಬತ್ತಿ ಹಿಡಿದು ಬುದ್ಧ ನಡಿಗೆಯಲ್ಲಿ ಸಾಗಿದರು. ಬುದ್ಧನ ವಿಗ್ರಹವನ್ನೊಳಗೊಂಡ ನಡಿಗೆ ಅಂಬೇಡ್ಕರ್ ಪ್ರತಿಮೆಯಿಂದ ರಾಷ್ಟ್ರಪತಿ ರಸ್ತೆಯ ಮಾರ್ಗವಾಗಿ 4 ಕಿಲೋಮೀಟರ್ ಕ್ರಮಿಸಿ ಬುದ್ಧನಗರದಲ್ಲಿರುವ ಬುದ್ಧ ವಿಹಾರದಲ್ಲಿ ಅಂತ್ಯಗೊಂಡಿತು. ಮಕ್ಕಳು, ಮಹಿಳೆಯರು ಸೇರಿದಂತೆ ನೂರಾರು ಮಂದಿ ಗೌತಮ ಬುದ್ಧರಿಗೆ ನಮನ ಸಲ್ಲಿಸಿದರು. ಬಳಿಕ ಎಲ್ಲರೂ ಸಾಮೂಹಿಕ ಭೋಜನದಲ್ಲಿ ಪಾಲ್ಗೊಂಡರು.

ಮೆರವಣಿಗೆ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದ ಎನ್. ಭಾಸ್ಕರ್, ತಥಾಗತ ಗೌತಮ ಬುದ್ಧರ ತತ್ವ–ಆದರ್ಶಗಳನ್ನು ಎಲ್ಲರೂ ಪಾಲಿಸಬೇಕು. ಬುದ್ಧ ಗುರು ಬೋಧಿಸಿರುವ ಕರುಣೆ, ಮೈತ್ರಿ, ಸಮತೆಯ ಮಂತ್ರಗಳನ್ನು ಜೀವನದ ಧ್ಯೇಯವಾಗಿ ಸ್ವೀಕರಿಸಬೇಕು. ಜಗತ್ತಿನ ನಾನಾ ಕಡೆ ಯುದ್ಧ ನಡೆಯುತ್ತಿದೆ. ಜಗತ್ತಿಗೆ ಯುದ್ಧ ಬೇಡ, ಬುದ್ಧ ಬೇಕು. ಜಗತ್ತು ಶಾಂತಿ, ನೆಮ್ಮದಿಯಿಂದ ಇರಬೇಕಾದರೆ ಬುದ್ಧ ಗುರು ತೋರಿದ ಮಾರ್ಗದಲ್ಲಿ ಸಾಗಬೇಕು. ಸಂಘರ್ಷಮಯವಾದ ಲೋಕಕ್ಕೆ ಬುದ್ಧ ಗುರುವಿನ ಪ್ರಜ್ಞೆ ಅತ್ಯವಶ್ಯಕ ಎಂದರು.

ಬುದ್ಧ ನಡಿಗೆ ಕಾರ್ಯಕ್ರಮದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ದಮ್ಮ ಧ್ವನಿ ಸೇವಾ ಟ್ರಸ್ಟ್ ಅಧ್ಯಕ್ಷ ಕೆ.ಆರ್. ಮಹದೇವ, ಉಪಾಧ್ಯಕ್ಷ ವಾಸುದೇವ ಮೂರ್ತಿ, ಗೌರವಾಧ್ಯಕ್ಷ ದೊರೆಸ್ವಾಮಿ, ಪ್ರಧಾನ ಕಾರ್ಯದರ್ಶಿ ಟಿ.ಎಂ. ಅಂಕಯ್ಯ, ಖಜಾಂಚಿ ಆರ್.ದಾಸಯ್ಯ ವಕೀಲರಾದ ಪುಟ್ಟರಸ, ತಿಮ್ಮಯ್ಯ, ಎಸ್.ಪಿ. ಮಹೇಶ್, ಮುಖಂಡರಾದ ದಸಂಸ ಸಂಚಾಲಕ ಮಲ್ಲೇಶ್ ಮಲ್ಲಹಳ್ಳಿ, ನಾರಾಯಣ, ನಗರ್ಲೆ ವಿಜಯಕುಮಾರ್, ಡಿಸಿಸಿ ಕಿಸಾನ್ ಅಧ್ಯಕ್ಷ ಜಿ.ಮಹಾದೇವ, ಇಂದಿರಮ್ಮ, ಕಾವೇರಿ ಮಹಾಲಕ್ಷ್ಮಿ, ಭಾಗ್ಯ ಮತ್ತಿತರರು ಭಾಗವಹಿಸಿದ್ದರು.



ನಂಜನಗೂಡಿನಲ್ಲಿ ಭಗವಾನ್ ಬುದ್ಧರ ಜಯಂತಿ ಅಂಗವಾಗಿ ಧಮ್ಮ ಧ್ವನಿ ಸೇವಾ ಟ್ರಸ್ಟ್ ವತಿಯಿಂದ ಬುದ್ಧ ನಡಿಗೆ ವಿಜೃಂಭಣೆಯಿಂದ ನಡೆಯಿತು.

ಡಿಜಿಎಫ್ ಮಳಿಗೆಗಳ ಮುಚ್ಚಿಸಲು ಜೆಡಿಎಸ್ ಆಗ್ರಹ

- ಮಾಜಿ ಸಚಿವ ಸಾರಾ ಮಹೇಶ್, ಎಂಎಲ್ಸಿ ಮಂಜೇಗೌಡ, ಜೆಡಿಎಸ್ ನಗರಾಧ್ಯಕ್ಷ ಅಶ್ವಿನ್‌ಕುಮಾರ್ ಪೊಲೀಸರಲ್ಲಿ ಮನವಿ
- ಸಂತ್ರಸ್ತರಿಗೆ ಚಿನ್ನಾಭರಣ ಹಿಂದಿರುಗಿಸಲು ಕ್ರಮ ವಹಿಸುವಂತೆ ಒತ್ತಾಯ

ಮೈಸೂರು, ಮೇ 2– ಡಿಜಿಎಫ್ ವಂಚನೆ ಜಾಲಕ್ಕೆ ಸಿಲುಕಿ ನರಳುತ್ತಿರುವ ಗ್ರಾಹಕರಿಗೆ ನ್ಯಾಯ ಒದಗಿಸಬೇಕು ಎಂದು ಜೆಡಿಎಸ್ ನಾಯಕರು ಮೈಸೂರು ನಗರ ಪೊಲೀಸರನ್ನು ಒತ್ತಾಯಿಸಿದ್ದಾರೆ.

ಡಿಜಿಎಫ್ ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಸಂತ್ರಸ್ತರು ಮೊನ್ನೆ ನಗರ ಪೊಲೀಸ್ ಆಯುಕ್ತರ ಕಚೇರಿ ಬಳಿ ನಡೆಸಿದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಬೆಂಬಲ ಸೂಚಿಸಿದ ಮಾಜಿ ಸಚಿವ ಸಾ.ರಾ. ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಹಾಗೂ ಜೆಡಿಎಸ್ ಜಿಲ್ಲಾಧ್ಯಕ್ಷ ಅಶ್ವಿನ್ ಕುಮಾರ್, ಡಿಸಿಪಿ ಹರ್ಷ ಪ್ರಿಯಂವದ ಅವರನ್ನು ಆಗ್ರಹಪಡಿಸಿದರು.

ವಂಚನೆಗೊಳಗಾಗಿ ಚಿನ್ನ ಕಳೆದುಕೊಂಡಿರುವ 40ಕ್ಕೂ ಹೆಚ್ಚು ಮಹಿಳೆಯರು ನಮ್ಮ ನಾಯಕರಾದ ಕೇಂದ್ರ ಸಚಿವ ಹೆಚ್.ಡಿ. ಕುಮಾರಸ್ವಾಮಿ ಅವರನ್ನು ಭೇಟಿ ಮಾಡಿ, ಅಡವಿಟ್ಟಿರುವ ತಮ್ಮ ಚಿನ್ನವನ್ನು ವಾಪಸ್ ಕೊಡಿಸುವಂತೆ ಮನವಿ ಮಾಡಿದ್ದಾರೆ. ಈ ಹಿನ್ನೆಲೆಯಲ್ಲಿ ನಾವು ಧರಣಿ ನಿರತರ ಪರವಾಗಿ ಸೂಕ್ತ ಕ್ರಮಕ್ಕೆ ಒತ್ತಾಯಿಸುತ್ತಿದ್ದೇವೆ. ಪೊಲೀಸರು ನಿರ್ಲಕ್ಷ್ಯಿಸಿದರೆ ಬೃಹತ್ ಪ್ರತಿಭಟನೆ ಮಾಡುವುದಾಗಿ ಇದೇ ವೇಳೆ ಸಾ.ರಾ.ಮಹೇಶ್ ಎಚ್ಚರಿಸಿದರು.

ಕಡಿಮೆ ಬಡ್ಡಿಗೆ ಹೆಚ್ಚು ಮೊತ್ತದ ಸಾಲ ನೀಡುವುದಾಗಿ ನಂಬಿಸಿ ಚಿನ್ನಾಭರಣ ಗಿರಿವಿ ಇಟ್ಟುಕೊಂಡು ವಾಪಸ್ಸು ನೀಡದೆ ಕೋಟ್ಯಾಂತರ ರೂ. ವಂಚಿಸಿರುವ ಆರೋಪದಡಿ ಡಿಜಿಎಫ್ ಮಾಲೀಕ ಸೌಂದರ್ ರಾಜ್ ಅಲಿಯಾಸ್ ಚಿನ್ನತಂಬಿ ವಿರುದ್ಧ ಪ್ರಕರಣ ದಾಖಲಿಸಿ ಬಂಧಿಸುವುದರ ಜೊತೆಗೆ ಸಂತ್ರಸ್ತರಿಗೆ ಚಿನ್ನವನ್ನು ವಾಪಸ್ ಕೊಡಿಸಲು ಕ್ರಮ ವಹಿಸಬೇಕು. ನಗರದ ವಿವಿಧೆಡೆ ಇರುವ 10ಕ್ಕೂ ಹೆಚ್ಚು ಡಿಜಿಎಫ್ ಮಳಿಗೆಗಳನ್ನು ಮುಚ್ಚಿಸಬೇಕು ಎಂದು ಆಗ್ರಹಿಸಿದರು.

ಇಂತಹ ವಂಚನೆ ಪ್ರಕರಣಗಳು ಮರುಕಳಿಸುತ್ತಿದ್ದರೂ ಪೊಲೀಸರಿಗೆ ಮಾಹಿತಿ ಇಲ್ಲವೇ? ಚಿನ್ನತಂಬಿ ವಿರುದ್ಧ ಕಳೆದ ತಿಂಗಳು ದೂರು ದಾಖಲಾದಾಗಲೇ ಆತನನ್ನು ಬಂಧಿಸಿ, ಆತನ ಎಲ್ಲಾ ಗಿರಿವಿ ಅಂಗಡಿಗಳನ್ನು ಏಕೆ ಬಂದ್ ಮಾಡಿಸಲಿಲ್ಲ? ಎಂದು ಪ್ರಶ್ನಿಸಿದ ಅವರು, ಎಫ್‌ಐಆರ್ ದಾಖಲು ಮಾಡುತ್ತೀರಿ, ಆತ ಜಾಮೀನು ಪಡೆದುಕೊಂಡು ಮತ್ತೆಲ್ಲೋ ಅಂಗಡಿ ತೆರೆಯುತ್ತಾನೆ. ಆದ್ದರಿಂದ ಈತ ಮತ್ತೆಲ್ಲೂ ವ್ಯವಹಾರ ನಡೆಸದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.



ಮೈಸೂರು ನಗರ ಪೊಲೀಸ್ ಆಯುಕ್ತರ ಕಚೇರಿ ಬಳಿ ಧರಣಿ ನಡೆಸಿದ ಡಿಜಿಎಫ್ ಸಂತ್ರಸ್ತರ ಪರವಾಗಿ ಮಾಜಿ ಸಚಿವ ಸಾ.ರಾ.ಮಹೇಶ್, ಡಿಸಿಪಿ ಹರ್ಷಪ್ರಿಯಂವದ ಅವರೊಂದಿಗೆ ಚರ್ಚಿಸುತ್ತಿರುವುದು. ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ನಗರಾಧ್ಯಕ್ಷ ಅಶ್ವಿನ್‌ಕುಮಾರ್ ಇನ್ನಿತರರು ಚಿತ್ರದಲ್ಲಿದ್ದಾರೆ.

ಸ್ನೇಹಿತರ ಮಾತು ಕೇಳಿ ಆನ್‌ಲೈನ್ ಹೂಡಿಕೆಯಲ್ಲಿ 17.10 ಲಕ್ಷ ಕಳೆದುಕೊಂಡ ಮೈಸೂರಿನ ವ್ಯಕ್ತಿ!

ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು, ಮೇ 2(ಜಿಎ)–ಸ್ನೇಹಿತರ ಸಲಹೆ ಮೇರೆಗೆ ಆನ್‌ಲೈನ್ ಮೂಲಕ ಹೂಡಿಕೆ ಮಾಡಿ ಮೈಸೂರಿನ ವ್ಯಕ್ತಿಯೋರ್ವರು 17.10 ಲಕ್ಷ ರೂ. ಕಳೆದುಕೊಂಡಿದ್ದು, ಈ ಸಂಬಂಧ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಖಾಸಗಿ ಕಂಪನಿಯಲ್ಲಿ ಟ್ರೇಡಿಂಗ್ ಖಾತೆ ತೆರೆದು ಹೂಡಿಕೆ ಮಾಡುವಂತೆ ಇವರಿಗೆ ಸ್ನೇಹಿತರು ಸಲಹೆ ನೀಡಿದ್ದು, ಅದರಂತೆ ಖಾತೆ ತೆರೆದು ಆರಂಭದಲ್ಲಿ ಸ್ವಲ್ಪ ಹಣವನ್ನು ಹಿಂಪಡೆದಿದ್ದಾರೆ. ನಂತರ 2025 ಡಿಸೆಂಬರ್ 16ರಂದು ಸ್ನೇಹಿತ ವಾಟ್ಸಾಪ್ ಮೂಲಕ ಕರೆ ಮಾಡಿ ಈ ಕಂಪನಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ. ಗ್ರಾಹಕರಿಗೆ ಮೋಸ ಮಾಡುತ್ತಿದ್ದಾರೆ. ಈಗಲೇ ಹೂಡಿಕೆ ಹಣ ವಾಪಾಸ್ ತೆಗೆದು ಹೊಸ ಟ್ರೇಡಿಂಗ್ ಖಾತೆಯನ್ನು ತೆರೆಯುವಂತೆ ಹೇಳಿ ಮತ್ತೊಬ್ಬ ವ್ಯಕ್ತಿಯನ್ನು ಪರಿಚಯಿಸಿದ್ದಾರೆ.

ಆ ವ್ಯಕ್ತಿಯೂ ವಾಟ್ಸಾಪ್ ಕರೆ ಮಾಡಿ ಈ ಹಿಂದಿನ ಕಂಪನಿಯಲ್ಲಿ ಹೂಡಿಕೆ ಮಾಡಿರುವ 4.23 ಲಕ್ಷ ರೂ. ಹಣವನ್ನು ವಿತ್ ಡ್ರಾ ಮಾಡಿಕೊಳ್ಳುವಂತೆ ಹೇಳಿದ್ದು, ಅದರಂತೆ ವ್ಯಕ್ತಿಯೂ ಹಣ ವಾಪಾಸ್ ತೆಗೆದಿದ್ದಾರೆ. ನಂತರ ಹೊಸ ಖಾತೆ ಮಾಡಿಸಿದ ಅವರು, ವಾಟ್ಸಾಪ್ ಮೂಲಕ ವ್ಯಕ್ತಿಯ ಆಧಾರ್, ಪ್ಯಾನ್ ಕಾರ್ಡ್, ಫೋಟೋ, ಬ್ಯಾಂಕ್ ಖಾತೆಯ ಮಾಹಿತಿಯನ್ನು ಪಡೆದುಕೊಂಡು 2026ರ ಜನವರಿ 1ರಂದು ಆಕ್ಸಿಸ್ ಬ್ಯಾಂಕ್ ಖಾತೆಗೆ ಹೂಡಿಕೆ ಎಂದು ಮೊದಲು 1.80 ಲಕ್ಷ ರೂ. ಹಾಕಿಸಿಕೊಂಡಿದ್ದಾರೆ. ನಂತರ ಜ.4ರಿಂದ ಫೆ.11ರವರೆಗೆ ಬರೋಬ್ಬರಿ 9.60 ಲಕ್ಷ ರೂ ಹಣವನ್ನು ಜಮೆ ಮಾಡಲು ತಿಳಿಸಿದ್ದಾರೆ. ಲಾಭಾಂಶದ ಹಣ ಪಡೆಯಲು ನೀವು ಟ್ಯಾಕ್ಸ್ ಪೇ ಮಾಡಬೇಕು ಎಂದು ವಿವಿಧ ಖಾತೆಯಿಂದ 5.70 ಲಕ್ಷ ರೂ ಹಣವನ್ನು ಬ್ಯಾಂಕ್ ಖಾತೆ ಮತ್ತು ಯುಪಿಐ ಮೂಲಕ ವರ್ಗಾವಣೆ ಮಾಡಿಕೊಂಡಿದ್ದಾರೆ.

ಮಾ.12ರಂದು ಕಂಪನಿಯ ವ್ಯಕ್ತಿ ವಾಟ್ಸಾಪ್ ಕರೆ ಮಾಡಿ ಖಾತೆಗೆ 50 ಸಾವಿರ ರೂ. ಹಣವನ್ನು ಕಳುಹಿಸಿ ಬೇರೆ ಖಾತೆಗೆ ವರ್ಗಾವಣೆ ಮಾಡುವಂತೆ ತಿಳಿಸಿದ್ದಾರೆ. ಮಾ.13ರಂದು 45 ಸಾವಿರ ರೂ. ಕಳುಹಿಸಿ ಅದೇ ದಿನ ಮತ್ತೊಂದು ಖಾತೆಗೆ ವರ್ಗಾವಣೆ ಮಾಡುವಂತೆ ತಿಳಿಸಿದ್ದಾರೆ.

ನಂತರ ಮಾ.14ರಂದು ಜೂಮ್ ಮೀಟಿಂಗ್ ಲಿಂಕ್ ಕಳುಹಿಸಿ ಹೂಡಿಕೆ ಹಣ ಮತ್ತು ಲಾಭಾಂಶದ ಹಣ ಹಿಂಪಡೆಯುವಿಕೆಯ ಬಗ್ಗೆ ಮೀಟಿಂಗ್ ಮಾಡಿದ್ದಾರೆ. ಮಾ.16ರಂದು ವ್ಯಕ್ತಿಯ ಐಸಿಐಸಿಐ ಬ್ಯಾಂಕ್ ಖಾತೆಯಲ್ಲಿ 95 ಸಾವಿರ ರೂ. ಲೀನ್ ಆಗಿರುವುದಾಗಿ ಸಂದೇಶ ಬಂದಿದ್ದು, ಮಾ.18ರಂದು ಬ್ಯಾಂಕಿಗೆ ಹೋಗಿ ವಿಚಾರಿಸಿದಾಗ ಪೊಲೀಸ್ ಠಾಣೆಯಲ್ಲಿ ಲೀನ್ ಮಾರ್ಕ್ ಆಗಿರುವುದಾಗಿ ಮಾಹಿತಿ ನೀಡಿದ್ದಾರೆ.

ತಕ್ಷಣ 1930ಗೆ ಕರೆ ಮಾಡಿ ವಿಚಾರಿಸಿದಾಗ ಹೆಚ್‌ಎಸ್‌ಆರ್ ಲೇಔಟ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುವುದಾಗಿ ತಿಳಿದ್ದು, ಅಲ್ಲಿನ ಸೈಬರ್ ಪೊಲೀಸ್ ಠಾಣೆಗೆ ಭೇಟಿ ನೀಡಿದ್ದಾರೆ.

ಏ.24ರಂದು ಹೆಚ್‌ಎಸ್‌ಆರ್ ಲೇಔಟ್‌ನ ಸೈಬರ್ ಠಾಣೆಗೆ ಒಂದು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ಹಾಜರಾಗುವಂತೆ ನೋಟಿಸ್‌ಗೆ ಏ.27ರಂದು ತೆರಳಿದಾಗ ಟ್ರೇಡಿಂಗ್‌ನಲ್ಲಿ ಮೋಸ ಹೋಗಿರುವುದು ತಿಳಿದು ಬಂದಿದೆ. ಈ ಸಂಬಂಧ ಮೈಸೂರಿನ ಸೆನ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಬೇಕಾಗಿದ್ದಾರೆ

ಹೋಟೆಲ್‌ನಲ್ಲಿ ಸಪ್ಲೇಯರ್ ಕೆಲಸ ಮಾಡಲು ಮಹಿಳೆಯರು/ ಹುಡುಗಿಯರು ಬೇಕಾಗಿದ್ದಾರೆ. ಸಂಪರ್ಕಿಸಿ:

9844130293

ಸೈಟು ಮಾರಾಟಕ್ಕಿದೆ

50x80.. ಪಶ್ಚಿಮ ದಿಕ್ಕು. ದಟ್ಟಗಳ್ಳಿ, ಪೃಥ್ವಿ ಲೇಔಟ್
40x60 ಪೂರ್ವ ದಿಕ್ಕು ದಟ್ಟಗಳ್ಳಿ ಜೋಡಿ ಬೇವಿನ ಮರದ ಹತ್ತಿರ. ಸಂಪರ್ಕಿಸಿ

8050216683

ಅಡುಗೆ ಮತ್ತು ಮನೆ ಕೆಲಸಕ್ಕೆ ತಕ್ಷಣ ಬೇಕಾಗಿದ್ದಾರೆ

ಉತ್ತಮವಾಗಿ ಸಸ್ಯಹಾರ ಮತ್ತು ಮಾಂಸಾಹಾರ ಅಡುಗೆ ಮಾಡಬಲ್ಲ ಅನುಭವವಿರುವವರಿಗೆ ಆದ್ಯತೆ. ಗಂಡ ಮತ್ತು ಹೆಂಡತಿ ಇಬ್ಬರಿಗೂ ಉತ್ತಮ ಸಂಬಳ ಮತ್ತು ವಸತಿ ಸೌಲಭ್ಯವನ್ನು ಒದಗಿಸಲಾಗುತ್ತದೆ. ಜೊತೆಗೆ ಗಂಡನಿಗೂ ಸೂಕ್ತ ಕೆಲಸ ಕೊಡಲಾಗುವುದು. ಸ್ಥಳ: ವಿಜಯನಗರ 4ನೇ ಹಂತ, ಮೈಸೂರು. ಆಸಕ್ತರು ಸಂಪರ್ಕಿಸಿ:

8310477398, 9880291893

ಬೇಕಾಗಿದ್ದಾರೆ

ಆಫೀಸ್ ಬಾಯ್

ಸರಸ್ವತಿಪುರಂ, ಮೈಸೂರು

ಸಂಪರ್ಕಿಸಿ:

9513 663 998

SITES / HOUSES FOR SALE

- 40x60 N/F site, Vijayanagar 2nd Stage.
- 40x60 E/F site, Vijayanagar 1st Stage
- 30x40 N/F site, Near Yelwala Bus Stand.
- 40x60 S/F Old House, Vijayanagar 2nd Stage.
- 40x60 E/F, Brindavan Extn., House.
- 40x70 E/F, Gokulam house (old).

Mob: 94833 15583

FOR SALE

2 acre land for sale in Hootagalli Industrial area in prime location. Suitable for commercial purpose.
Serious buyers contact:

Mob: 9845928011

REQUIRED LAND IN MYSORE

Required 2 to 3 acres of land In Mysore for Warehouse Purpose Close to Highway

Contact:
636 6236 307
948 0834 448

ಸಾರ್ವಜನಿಕ ಪ್ರಕಟಣೆ

ಮೈಸೂರು ಸಿಟಿ, ಗಾಯತ್ರಿಪುರಂ, ವಿಶ್ವಕರ್ಮ ಕಾಲೋನಿ, ಮನೆ ನಂ.25ರಲ್ಲಿ ವಾಸ ಮಾಡುತ್ತಿರುವ ಪೌತಿ ಅನಂತ್ ರವರ ಧರ್ಮಪತ್ನಿ ಶ್ರೀಮತಿ ಸಂಧ್ಯಾ ಆದ ನಾನು ಸಾರ್ವತ್ರಿಕವಾಗಿ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತು ನನ್ನ ಯಜಮಾನರಿಗೆ ಪಿತ್ರಾರ್ಜಿತ ಸ್ವತ್ತಾಗಿ, ನಾನು ಮತ್ತು ನನ್ನ ಮಕ್ಕಳುಗಳೆಲ್ಲರೂ ಸೇರಿ ಮೀರಾ ಮತ್ತು ಇತರರ ವಿರುದ್ಧ ಮೈಸೂರು ಹನ್ನೆರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಓ.ಎಸ್. 517/2024ನೇ ನಂಬರ್‌ನಲ್ಲಿ ಭಾಗಾಂಶದ ದಾವೆ ಹೂಡಿರುತ್ತೇನೆ. ದಾವೆಯು ಘನ ನ್ಯಾಯಾಲಯದಲ್ಲಿ ಜರುಗುತ್ತಿರುವುದರ ಸಬೂಬು ಯಾರೇ ಆಗಲೀ, ಮೀರಾ, ಚೆಲುವರಾಜು ವಗೈರೆಯವರೊಂದಿಗೆ ಯಾವುದೇ ಕ್ರಮ ವಗೈರೆಗಳಿಗೆ ಪ್ರಯತ್ನಿಸಿದಲ್ಲಿ ಅದು ಎಷ್ಟು ಮಾತ್ರಕ್ಕೂ ಸಿಂಧುವಾಗುವುದಿಲ್ಲ ಮತ್ತು ಯಾರೇ ಆಗಲೀ ವ್ಯವಹರಿಸಿದಲ್ಲಿ ಅಂತಹ ಕಾನೂನು ಬಾಹಿರವಾದ ವ್ಯವಹಾರವು ಊರ್ಜಿತಗೊಳ್ಳುವುದಿಲ್ಲವೆಂಬುದಾಗಿಯೂ ಷೆಡ್ಯೂಲ್ ಸ್ವತ್ತಿನಲ್ಲಿ ಯಾರೇ ಆಗಲೀ ಅತಿಕ್ರಮಿಸಿದಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲಾಗುವುದೆಂದು ಈ ಮೂಲಕ ಸಾರ್ವತ್ರಿಕ ಪ್ರಕಟಣೆ ಶೃತಪಡಿಸಿರುತ್ತೇನೆ.

ಷೆಡ್ಯೂಲ್

ಮೈಸೂರು ಸಿಟಿ, ಲಷ್ಕರ್ ಮೊಹಲ್ಲಾ, ಗೀತಾ ಮಂದಿರ ರಸ್ತೆ, ಗುಜುರಿ ಎದುರು ಭಾಗದಲ್ಲಿರುವ ಮನೆ ಕ್ರಮ ಸಂಖ್ಯೆ 192/3ರ ಪೂರ್ವ ಪಶ್ಚಿಮ – 60 ಅಡಿ, ದಕ್ಷಿಣೋತ್ತರ 35 ಅಡಿಯುಳ್ಳ ಮದ್ರಾಸ್ ತಾರಿಸಿ ಮನೆಗೆ ಚಕ್ಕುಬಂದಿ :– ಪೂರ್ವಕ್ಕೆ : ಗೀತಾ ಮಂದಿರ ರಸ್ತೆ, ಪಶ್ಚಿಮಕ್ಕೆ : 192/4ರ ಮನೆ, ದಕ್ಷಿಣಕ್ಕೆ : 192/2ರ ಸ್ವತ್ತು, ಉತ್ತರಕ್ಕೆ : 247/5ಎ ಸ್ವತ್ತು.

ಸಹಿ/– ಶ್ರೀಮತಿ ಸಂಧ್ಯಾ
ತಾ:01–05–2026
ಮೈಸೂರು

ಸಹಿ/– ವರದರಾಜು
ಬಿ.ಎಸ್ಸಿ, ಎಲ್.ಎಲ್.ಬಿ, ವಕೀಲರು
ನಂ.104, ದೇವರಾಜು ಮಾರುಕಟ್ಟೆ, ಮೈಸೂರು
ಮೊ: 9945727462

KBL Farm Ville

Managed Farm land Gowdahalli, attached to Mysuru-Bengaluru Expressway.
25 km from Mysuru Palace.

MDA APPROVED

SITES FOR SALE
@ KBL Silicon City
30x40 & 30x50
East & West face

Mob: 9986583933

WANTED

Accountant with experience in manual bookkeeping knowledge and basic computer knowledge, Retired Professionals with Accounts experience are also encouraged to apply, Preferred Age- 40+ years

THE SHARIFF INDUSTRIES AND SAW MILL

Ph: 8884638771

G9 projects
Designing your Dreams
Vee2 Developers

VAISHNAVI LAYOUT
RT NAGR ENTRANCE
30x40 | 30x50 | Odd Sites Available
₹ 4,999 per sqft

SHOURYA LAYOUT
₹ 5,335/- Only 20x30
Adjoining vijayanagar 4th stage

8088-707-707

AFFIDAVIT

I, **AMOGHA YELAGALAVADI ANIL KUMAR,** R/o No. 41, 3rd Cross, 20th A Main, 2nd Stage, E Block, J.P. Nagar, Mysuru-570008, Karnataka, state that my name is mentioned as **AMOGHA YALAGALAWADI ANIL KUMAR** in my passport, whereas in my PAN card it is mentioned as **AMOGHA YELAGALAVADI ANIL KUMAR.** Further, my mother's name is mentioned as **RADHA ANIL KUMAR YALAGALAWADI VENKATESHACHAR** in my passport, whereas in her passport it is mentioned as **RADHA ANIL KUMAR YELAGAVADI VEDAVYASACHAR.** Both refer to the same respective persons. For this correction, I have sworn through a Notarised affidavit dated 02-05-2026 before Notary, Adv. R.K. Jyothi, Mysuru.

Sd/- Amogha. Y.A.

ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಬಯಸುವುದೇನೆಂದರೆ, ನನ್ನ ಕಕ್ಷಿದಾರರಾದ ಬೆಂಗಳೂರು ಸಿಟಿ, ಬೆಂಗಳೂರು ಉತ್ತರ, ಕಿತ್ತನಹಳ್ಳಿ ಗ್ರಾಮ ಮತ್ತು ಅಂಚೆ, ಮನೆ ನಂ. 144 ರಲ್ಲಿ ವಾಸವಾಗಿರುವ ಶ್ರೀ.ಗಂಗಯ್ಯರವರ ಮಗನಾದ ಸುಮಾರು 67 ವರ್ಷ ವಯಸ್ಸುಳ್ಳ ಶ್ರೀ ದುಗ್ಗಲಯ್ಯ ರವರ ಇರಾದೆಯ ಮೇರೆಗೆ ಪ್ರಕಟಿಸುತ್ತಿರುವ ಈ ಸಾರ್ವಜನಿಕ ಪ್ರಕಟಣೆಯ ಕ್ರಮವೇನೆಂದರೆ, ಆದಾಗಿ, ಈ ಕೆಳಗೆ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಜಿಲ್ಲೆ, ಹೆಚ್.ಡಿ. ಕೋಟೆ ತಾಲ್ಲೂಕು, ಕಸಬಾ ಹೋಬಳಿ, ಕೆ.ಎಡತೊರೆ ಅಂಚೆ, ಟೈಗರ್ ಬ್ಲಾಕ್ ಗ್ರಾಮದಲ್ಲಿ ವಾಸವಾಗಿರುವ ಲೇಟ್ ಅಂಕೇಗೌಡರವರ ಮಗನಾದ ಸುಮಾರು 54 ವರ್ಷ ವಯಸ್ಸುಳ್ಳ ಶ್ರೀ ಕೃಷ್ಣಗೌಡ ಇವರಿಂದ ಕ್ರಯಕ್ಕೆ ಪಡೆಯಲು ಇಚ್ಛಿಸಿರುತ್ತಾರೆ. ಆದುದರಿಂದ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಷೆಡ್ಯೂಲ್ ಸ್ವತ್ತಿಗೆ ಸಂಬಂಧಪಟ್ಟ ಬೇರೆ ಯಾರಿಗಾದರೂ ಹಕ್ಕು, ಅಧಿಕಾರ, ಹಿತಾಸಕ್ತಿ, ಹೆಣ್ಣು ಮಕ್ಕಳ ಭಾಗಾಂಶ, ಅಡಮಾನ, ಇತ್ಯಾದಿ ಇದ್ದಲ್ಲಿ, ಈ ಪ್ರಕಟಣೆ ಹೊರಡಿಸಿದ 15 ದಿನಗಳ ಒಳಗಾಗಿ ತಮ್ಮ ತಂಟೆ ತಕರಾರನ್ನು ಲಿಖಿತ ರೂಪದಲ್ಲಿ ಅಗತ್ಯ ದಾಖಲಾತಿಗಳೊಂದಿಗೆ ಈ ಕೆಳಕಂಡ ವಿಳಾಸಕ್ಕೆ ಸಲ್ಲಿಸತಕ್ಕದ್ದು. ಇಲ್ಲವಾದಲ್ಲಿ ಯಾವುದೇ ತಂಟೆ ತಕರಾರು, ಹಕ್ಕು ಬಾಧ್ಯತೆ ಹಾಗೂ ಅಭ್ಯಂತರವಿರುವುದಿಲ್ಲವೆಂದು ತಿಳಿದು ನಮ್ಮ ಕಕ್ಷಿದಾರರು ಕ್ರಯಪತ್ರವನ್ನು ಬರೆಸಿ ನೋಂದಣಿ ಮಾಡಿಸಿಕೊಳ್ಳುತ್ತಾರೆ. ಒಂದು ವೇಳೆ ಈ ನಿಗಧಿತ ಅವಧಿಯ ನಂತರ ಮತ್ತು ನಮ್ಮ ಕಕ್ಷಿದಾರರು ಕ್ರಯಪತ್ರನ್ನು ಬರೆಯಿಸಿಕೊಂಡ ನಂತರ ಬರುವಂತಹ ಯಾವುದೇ ತಂಟೆ ತಕರಾರುಗಳಿಗೆ ನಮ್ಮ ಕಕ್ಷಿದಾರರು ಬಾಧ್ಯರಾಗಿರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಷೆಡ್ಯೂಲ್

ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಇಲವಾಲ ಹೋಬಳಿ, ಕುಮಾರಬೀಡು ಗ್ರಾಮದ ಸರ್ವೆ ನಂ. 10/4 ರಲ್ಲಿರುವ ಶ್ರೀ ಕೃಷ್ಣಗೌಡ ಬಿನ್ ಲೇಟ್ ಅಂಕೇಗೌಡ ರವರ ಬಾಬ್ತು 1.02 (ಒಂದು ಎಕರೆ ಎರಡು ಗುಂಟೆ) ಖುಷ್ಕಿ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ: ರಸ್ತೆ ; ಪಶ್ಚಿಮಕ್ಕೆ: ಬಸವರಾಜು ಮತ್ತು ಲೇಟ್ ಭೈರಪ್ಪ ರವರ ಜಮೀನು ; ಉತ್ತರಕ್ಕೆ: ಸುಮೇರು ಇನ್‌ಫ್ರಾ ರವರ ಜಮೀನು ; ದಕ್ಷಿಣಕ್ಕೆ: ಕುಳ್ಳಯ್ಯನ ಮಗ ಚಲುವರಾಜು ರವರ ಜಮೀನು. (ಹಾಲೀ ಕುಮಾರ ಬಿನ್ ಶೆಟ್ಟಿಪ್ಪರವರ ಜಮೀನು).

ಸಹಿ/– ಬಿ.ಎಲ್. ಮಂಜುನಾಥ, ವಕೀಲರು,
ನಂ. 2961/8ಎ, 1ನೇ ಮುಖ್ಯರಸ್ತೆ, 5ನೇ ಕ್ರಾಸ್, ಸರಸ್ವತಿಪುರಂ, ಮೈಸೂರು–570 009. **Mob: 9141720962**

CHINMAYA VIDYALAYA MYSURU

SCHOOL WITH A DIFFERENCE

3RD CROSS, JAYALAKSHMIPURAM, MYSURU - 570 012

CHINMAYA VISION PROGRAM
✓INTEGRATED DEVELOPMENT
✓INDIAN CULTURE
✓PATRIOTISM
✓UNIVERSAL OUTLOOK

ADMISSION STARTED ALREADY

PRE-KG to IX STD



THE 'CHINMAYA EDUCATION MOVEMENT' is one of the most important contribution of the Chinmaya Mission. It encompasses more than 92 Vidyalayas, 8 Colleges, a Harihara School and an International Residential School. Presently, more than 1,00,000 students are studying in these institutions, which offer 'EDUCATION WITH A DIFFERENCE'

NO DONATIONS

FOR MORE DETAILS CONTACT:
98442 04543, 80734 77341, 98860 60411

HOUSE FOR SALE

Independent Duplex 3BHK House, (40X60) East Facing (31Sq. Built Area) Ample Car Parking with Clear Documents. MUDA Approved, Near J.P.Nagar Ring Road, Mysore.
Price. Rs.2.25 Cr. (Negotiable)

Mob.9108545566

ಬೇಕಾಗಿದ್ದಾರೆ

ಕಿಚನ್ ಸೂಪ್ರವೈಸರ್
ಅನುಭವವುಳ್ಳವರಿಗೆ ಆದ್ಯತೆ,
ಪಾರ್ಟ್ ಟೈಂ / ಪುಲ್ ಟೈಂ
ವೈಟರ್ಸ್, ಇಂಡಿಯನ್ ಕುಕ್
ಸಂಪರ್ಕಿಸಿ: **ಬೋಪಿ'ಸ್ ಬಾರ್ & ರೆಸ್ಟೋರೆಂಟ್**
ಐಶ್ವರ್ಯ ಪೆಟ್ರೋಲ್ ಬಂಕ್ ಹತ್ತಿರ
ಹುಣಸೂರು ರಸ್ತೆ, ಮೈಸೂರು

ಉದ್ಯೋಗ ಅವಕಾಶ

ಪೌಲ್ಟ್ರಿ ಫಾರಂ ಸೂಪರ್‌ವೈಸರ್ (ಪುರುಷ)
ಆದ್ಯತೆ: ಹತ್ತಿರದ ಪ್ರದೇಶದ ಅಭ್ಯರ್ಥಿಗಳು (ದೇವೇಗೌಡ ಸರ್ಕಲ್, ಆಲನಹಳ್ಳಿ, ಸಿದ್ಧಾರ್ಥ ಲೇಔಟ್). ಅರ್ಹತೆಗಳು: 4 ಚಕ್ರ ವಾಹನ ಓಡಿಸಲು ತಿಳಿದಿರಬೇಕು.
ವಿದ್ಯಾರ್ಹತೆ: 10ನೇ ತರಗತಿ / 2ನೇ ಪಿಯುಸಿ.

Mob: 9113926526

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು

TAXI



Hi! TAXI
ONLY ONE WAY TAXI CHARGE
MYSORE to BANGALORE City drop or Pick up
BANGALORE to MYSORE Airport drop or Pick up
MYSURU

9611177599

ಸಾರ್ವಜನಿಕ ನೋಟಿಸ್

ನಮ್ಮ ಕಕ್ಷಿಗಾರರಾದ ಮಂಡ್ಯ ಟೌನ್, ಮಂಡ್ಯ ತಾಲ್ಲೂಕು, ಪಣಕನಹಳ್ಳಿ ಗ್ರಾಮದ ರಾಜರಾಜೇಶ್ವರಿ ಲೈಫ್ ಸ್ಪೇಸ್ ಡೆವಲಪರ್ಸ್ ಮಾಲೀಕರಾದ ಕೆ. ರಾಜೇಶ್ವರಿ ರವರು ಗುಂಡ್ಲುಪೇಟೆ ತಾಲ್ಲೂಕು, ಕಸಬಾ ಹೋಬಳಿ, ಮಡಹಳ್ಳಿ ಗ್ರಾಮದ, ಸರ್ವೇ ನಂ. 223, 05 ಎಕರೆ 00 ಗುಂಟೆ ಮತ್ತು ಸರ್ವೇ ನಂ. 224, 02 ಎಕರೆ 16 ಗುಂಟೆ ಜಮೀನನ್ನು ಮೈಸೂರು ವಾಸಿ, ಕರ್ಸನ್ ನಾತು ಪಟೇಲ್‌ನವರ ಮಗ ಶಿವಾಜಿ ಕರ್ಸನ್ ಪಟೇಲ್ ಮತ್ತು ಇವರ ಕುಟುಂಬವರ್ಗದವರಿಂದ ಕ್ರಯಕ್ಕೆ ಪಡೆಯುವವರಿರುತ್ತಾರೆ. ಸದರಿ ಜಮೀನಿನ ಬಾಬ್ತು ಯಾರಿಗಾದರು ಏನಾದರು ಹಕ್ಕು ಭಾದ್ಯತೆ ಸಂಬಂಧಗಳು ಇದ್ದಲ್ಲಿ, ಸಂಬಂಧಪಟ್ಟ ದಾಖಲಾತಿಗಳೊಂದಿಗೆ ನಮ್ಮ ಆಫೀಸಿಗೆ ಅಥವಾ ನಮ್ಮ ಕಕ್ಷಿಗಾರರಿಗೆ 7 ದಿನ ವಾಯಿದೆಯ ಒಳಗೆ ಸೂಕ್ತ ಲಿಖಿತ ತಿಳುವಳಿಕೆ ಕೊಡತಕ್ಕದ್ದು. ತಪ್ಪಿದ್ದಲ್ಲಿ ಯಾವುದೇ ತಕರಾರು ಇಲ್ಲವೆಂದು ಪರಿಗಣಿಸಿ ನಮ್ಮ ಕಕ್ಷಿಗಾರರು ಜಮೀನುಗಳನ್ನು ಶುದ್ಧಕ್ರಯಕ್ಕೆ ಪಡೆಯುವವರಿರುತ್ತಾರೆ ತಿಳಿಯುವುದು.

ಸಹಿ/– ಚೇತನ ಎಂ.ಎನ್.,
ಬಿ.ಕಾಂ., ಎಲ್.ಎಲ್.ಬಿ., ವಕೀಲರು #
ಅಲಂಕಾರ ನಿಲಯ, 3ನೇ ಕ್ರಾಸ್
ನೆಹರುನಗರ, ಮಂಡ್ಯ – 571401
ಮೊ.: 9916775566, 9972765708
ದಿನಾಂಕ : 30–04–2026 ಸ್ಥಳ : ಮಂಡ್ಯ

SITE FOR SALE

40x60, E/F
Site No. 264,
1st Stage, 5th Cross,
Nivedithanagara,
Mysore.

Call : 98454 40343

FOR SALE

20x30,20x35, 30x40 @ Bogadi,RainbowSchool
40x60 commercial property Near BEML Arch Srirampura
30x50 Nr RT Ngr, Brahmins Lyt
2&3 BHK Apartments, With All Amenities @ Ramkrishna Nagar.
G+1 20x30 & 23x35 @Srirampura, Dattagalli & VRL Lyt, Kote Road

PRAKRUTHI PROPERTIES
95386 90359, 90359 90359

BRILLIANCE NURSERY & PRIMARY SCHOOL

Ph: 0821-2518103

(Recognised by Govt. of Karnataka) (English Medium)
B.M.Shree Nagar, Mysuru-570 016., School dise Code Number-29260805207

WANTED TEACHERS

Sl. No.	QUALIFICATION	TEACHING SUBJECT	MEDIUM OF TEACHING	NO. OF TEACHING POST	REQUIRED CANDIDATES
1)	SSLC: NST/NTT PUC: NST/NTT	NURSERY	ENGLISH	02	FEMALE
2)	BCA/MCA	COMPUTER SCIENCE TEACHING & OFFICE WORK	ENGLISH	01	FEMALE
3)	B.SC; B.ED (PCM)	MATHEMETICS	ENGLISH	01	FEMALE
4)	B.SC; B.ED (PCM/CBZ)	SCIENCE	ENGLISH	01	FEMALE
5)	B.A; B.ED	ENGLISH	ENGLISH	01	FEMALE
6)	PUC; D.ED	SCIENCE & MATHEMATICS	ENGLISH	01	FEMALE

INTERESTED CANDIDATES CONTACT THIS PHONE NO : 9916195956 (OR) WHATSAPP YOUR RESUME TO THIS PHONE NO: 9916195956 Sd/- H M

ARKA MAHAVIDYALAYA

Kaniyanahundi Gate, Bogadi – Gaddige Main Road, Mysuru

Post	Qualification	No. of Posts	Gender
Asst. Teacher	MA / BA, B.Ed.	03	Male / Female
Asst. Teacher	M.Sc. / B.Sc. B.Ed. (PCM & CBZ)	03	Male / Female
Asst. Teacher	MA/BA B.Ed. (English)	03	Male / Female
Art & Craft Teacher	Certificate Required	02	Male / Female
Spoken English Teacher	Fluent in English	02	Male / Female
School Helpers	SSLC / PUC	06	Female

ARKA DHAMA

Kaniyanahundi Gate, Bogadi – Gaddige Main Road, Mysuru

Post	Qualification	No. of Posts	Gender
Temple Priest	Veda / Agama	02	Male
Warden	Any Degree	02	Male
Cleaning Staff	-	04	Male / Female
Garden Work	Experience Required	04	Male / Female
Supervisor	Experience Required	02	Male / Female
Main Cook	Experience Required	02	Male / Female
Cooking Helper	Experience Required	02	Male / Female

- All the above posts require a minimum of 2 years teaching experience and English proficiency is mandatory.
- The remuneration will be in accordance to qualification and competency.

Please send your CV / Resume to the E-mail ID: arkamschool21@gmail.com on or before 12.05.2026 or hand over the same to Arka Dhama Admin office directly. Shortlisted candidates will be called for a demo & interview.

Manager : 96069 54535 Administrator : 96069 54534

ಶ್ರೀ ಮಹಾವೀರ್ ಜೈನ್ ವಿದ್ಯಾಲಯ
SHREE MAHAVEER JAIN VIDYALAYA

(Affiliated to CISCE, New Delhi- KA303)
#CA-01, Sanmarga, Siddarthanagar, Mysuru -570011. | Ph: 0821-2475247, 2475222 | E-mail: mahaveer.vidyalaya@gmail.com

Shree Mahaveer Jain Vidyalaya Records 100% result in X ICSE Examination -2026

Shree Mahaveer Jain Vidyalaya, Siddarthanagar, Mysore has secured 100% result in X ICSE Examination for the 10 consecutive year in succession. Out of 36 appeared 10 have secured distinction (85%) and the rest have secured First Class. Vikunth S Rao 96%, Pranav A 94% and Ojas N 91.66% are the three toppers of the school.



President
Devichand S Salecha

Secretary
Hirachand C Jain

Principal
B. Mohan

Vice President
Champalal J Bhirlosha

Joint Secretary
Ashok Kumar Salecha

Treasurer
Ramesh Kumar (Ratnamani)